

ಅನುದಿನದ ಆಹಾರ
March 2017
Tree - 18
Fruit - 3
Pages - 44
Annual Subscription Rs. 100/-
Single Copy Rs. 10/-

ನಿಮ್ಮ ಚಂದಾವನ್ನು ನವೀಕರಿಸಿದ್ದೀರಾ?




ಒಂದು ವರ್ಷಕ್ಕೆ ಈ ರೀತಿಯ 12 ವಿವಿಧ ಪ್ರತಿಗಳನ್ನು ಕಳುಹಿಸುತ್ತೇವೆ

**ರೂ. 100/-**

ಈ ಧ್ಯಾನ ಪುಸ್ತಕವು ನಿಮಗೆ ದಿನನಿತ್ಯವು ಆಶೀರ್ವಾದ ನೀಡಿ, ಬಲಪಡಿಸುತ್ತಿದೆ ಎಂದು ನಾನು ನಂಬುತ್ತೇನೆ. ಈ ಅಮೂಲ್ಯ ಪ್ರತಿಯನ್ನು ನೀವು ಒಬ್ಬರಿಗಾದರು ಪರಿಚಯಿಸಿ ಅವರ ವಿಳಾಸವನ್ನು ನಮಗೆ ಕಳುಹಿಸಿ.

**ಒಂದು ವ್ಯಕ್ತಿಗಾದರು ಈ ಮಾಸಿಕ ಪತ್ರಿಕೆಯನ್ನು ಪರಿಚಯಿಸುವೆನು ಎಂದು ಒಂದು ದೃಢ ನಿರ್ಧಾರವನ್ನು ಮಾಡಿರಿ**

ಈ ಮೂಲಕ ನೀವು ಮಾಡುವ ಸೇವೆಗೆ ನಿಶ್ಚಯವಾಗಿ ಪ್ರತಿಫಲ ಉಂಟು.

## ಪ್ರಾರ್ಥಿಸಿರಿ

ಈ ಪ್ರಸಕ್ತ ಸಾಲಿನಲ್ಲಿ ವಾರ್ಷಿಕ ಪರೀಕ್ಷೆಯನ್ನು ಬರೆಯಲಿರುವ ಪ್ರತಿಯೊಂದು ವಿದ್ಯಾರ್ಥಿಗಳು ಕರ್ತನಿಂದ ಆಶೀರ್ವದಿಸಲ್ಪಟ್ಟು ಉತ್ತಮವಾದ ನೆನಪಿನ ಶಕ್ತಿಯೊಂದಿಗೆ ಪರೀಕ್ಷೆಯನ್ನು ಬರೆಯಲು ಬೇಕಾಗಿರುವ ಕೃಪೆಯನ್ನು ಕರ್ತನ ಬಳಿಯಲ್ಲಿ ವಿಜ್ಞಾಪಿಸಿಕೊಳ್ಳೋಣ.



## ವಾಚಕರ ಗಮನಕ್ಕೆ

**ತಪ್ಪಿದ್ದರೆ ದಯಮಾಡಿ ನಮಗೆ ತಿಳಿಸಿರಿ.**

ನಿಮ್ಮ ವಿಳಾಸವು ಸ್ಪಷ್ಟವಾಗಿ ಇದೆಯೋ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಿ ಹಾಗೂ ಮುಖ್ಯವಾಗಿ **ಪಿನ್‌ಕೋಡ್** ಸಂಖ್ಯೆ (Pincode) ಸರಿಯಾಗಿ ಇರಬೇಕು. **ಒಂದು ವೇಳೆ ತಪ್ಪಿದ್ದರೆ ದಯಮಾಡಿ ನಮಗೆ ತಿಳಿಸಿರಿ.** ಇದು ಅಂಚೆ ಇಲಾಖೆಯು ಸುಲಭವಾಗಿ ಕಾರ್ಯ ನಿರ್ವಹಿಸಲು ಅತೀ ಅವಶ್ಯ.

# ಅನುದಿನದ ಆಹಾರ
Anudhinada Ahara

**ಮಾರ್ಚ್ – 2017** MARCH - 2017

**ಮರ 18 ಹಣ್ಣು 3** Tree 18 Fruit 3


## ಪ್ರೇರೇಪಣೆ!

ಪ್ರೇರೇಪಣೆ ಅಥವಾ ಪ್ರೇರಣೆ ಎಂಬ ಮಾತು ಬಹಳವಾಗಿ ಈ ದಿನಗಳಲ್ಲಿ ಉಪಯೋಗಿಸಲ್ಪಡುತ್ತದೆ. ಪೇರಣೆ ಎಂದರೆ, ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನಿಗೆ ವಿರೋಧವಾಗಿ ಸೈತಾನನ್ನು ಮಂತ್ರವಾದಿಗಳ ಸಹಾಯವನ್ನು ಪಡೆದು ಕಳುಹಿಸುವದು, ಇದರಲ್ಲಿ ಮಾಟಮಂತ್ರ ಕುತಂತ್ರ ಮುಂತಾದವುಗಳು ಅಡಗಿರುವವು ಎರಡನೆಯದಾಗಿ, ಪ್ರೇರಣೆ ಎಂದು ಹೇಳುವಾಗ, ನಮ್ಮ ಆಂತರ್ಯದಲ್ಲಿ ಚಿಂತನೆಯಲ್ಲಿ ಬರುವ ಪ್ರೇರಣೆಗಳು; ಈ ಪ್ರೇರಣೆಯು ಮನುಷ್ಯನ ಆತ್ಮದಲ್ಲಿ ಒಂದು ಭಾಗದಲ್ಲಿ ಉಂಟಾಗುವದು. ಆತ್ಮದಲ್ಲಿ ಪ್ರಾಣ ಅಥವಾ ಜೀವ ಇರುವದು ಎರಡು ಮನಸ್ಸಾಕ್ಷಿ ಅಲ್ಲಿರುವದು ಮೂರು ದೇವರಾತ್ಮನೊಂದಿಗೆ ಅನ್ಯೋನ್ಯತೆ ಪಡೆಯುವ ಸ್ಥಳವಿರುವದು ನಾಲ್ಕು ಪ್ರೇರಣೆಯ ಸ್ಥಳ ಇರುವದು.

ಒಬ್ಬನು ರಕ್ಷಿಸಲ್ಪಟ್ಟು ಪವಿತ್ರಾತ್ಮನ ಅಭಿಷೇಕವನ್ನು ಹೊಂದಿಕೊಳ್ಳುವಾಗ, ದೇವರಾತ್ಮನು ಮನುಷ್ಯರ ಆತ್ಮದಲ್ಲಿ ಇಳಿದು, ಮೊದಲು ಅವನ ಆತ್ಮದೊಂದಿಗೂ, ನಂತರ ಅವನ ಶರೀರದೊಂದಿಗೂ ಬೆರೆಯುವನು, ಆತ್ಮದಲ್ಲಿ ತುಂಬಿರುವವನನ್ನು ದೇವರಾತ್ಮನು ನಡೆಸುವನು ದೇವರ ಚಿತ್ತವನ್ನು ಅವನಿಗೆ ಪ್ರಕಟಿಸುವನು ಅವನನ್ನು ಪರಿಶುದ್ಧತೆ ಹೊಂದಲು, ಆಲೋಚನೆ ನೀಡಿ ನಡೆಸುವನು. ಇವನಲ್ಲಿ ಅಶುದ್ಧಾತ್ಮನು ನೆಲೆಸಿರುವದಿಲ್ಲ, ಆದರೆ ಶರೀರದ ಹೊರಗೆ, ಅಶುದ್ಧಾತ್ಮಗಳು ಅವನ ಮನಸ್ಸಿನಲ್ಲಿ, ಪಾಪಚಿಂತನೆಗಳ ಕುರಿತು ಪ್ರೇರಿಸಲು ಸಾಧ್ಯ, ಆದರೆ ಅವನೋ ದೇವರಾತ್ಮನಿಂದ ತುಂಬಿದ್ದು ಅದನ್ನು ಎದುರಿಸುವನು. ಆತ್ಮದಲ್ಲಿ ಅಂಥ ಆಲೋಚನೆಗಳು ಬರದಂತೆ ತನ್ನನ್ನು ಕಾಯ್ದು ಕೊಳ್ಳುವನು.

ಒಬ್ಬನು ರಕ್ಷಿಸಲ್ಪಟ್ಟು, ಅಭಿಷೇಕ ಹೊಂದಿದ ನಂತರ, ಹಿಂಜಾರಿ ಹಳೆಯ ಪಾಪಗಳನ್ನು ನಡೆಸುವವನಾದರೆ, ಸ್ವಲ್ಪ ಸ್ವಲ್ಪವಾಗಿ ಅವನು ದೇವರ ಕೃಪೆಯನ್ನು ಕಳೆದುಕೊಂಡು, ನನಗೆ ಕರ್ತನೂ ಬೇಡ, ದೇವರಾತ್ಮನೂ ಬೇಡ, ನಾನು ಪಾಪ ಭೋಗಗಳನ್ನು ಅನುಭವಿಸುವೆನು ಎಂದು, ಕ್ರಿಸ್ತನನ್ನು ಅವಹೇಳನ ಮಾಡುವದಾದರೆ ದೇವಕೃಪೆ ಅವನನ್ನು ಬಿಟ್ಟುಹೋಗುವದು ಇದರಿಂದ ಸೈತಾನನು ಅವನೊಳಗೆ ಪ್ರವೇಶಿಸಲು ಸುಲಭವಾಗುವದು. ಅನೇಕ ವಿಶ್ವಾಸಿಗಳ ಪ್ರಶ್ನೆ ವಿಶ್ವಾಸಿಗಳನ್ನು ಅಶುದ್ಧಾತ್ಮ ಹಿಡಿಯುವದಾ? ಎಂಬುದು ಹೌದು ಒಬ್ಬ ವಿಶ್ವಾಸಿಯು ಹಿಂಜಾರಿಹೋಗಿ ಪಾಪ ಭೋಗಗಳಲ್ಲಿ ಜೀವಿಸುವವನಾದರೆ, ಅವನನ್ನು ಅಶುದ್ಧಾತ್ಮನು ಹಿಡಿಯುವ ಅವಕಾಶ

ಪ್ರೇರೇಪಣೆ ಅಥವಾ ಪ್ರೇರಣೆ ಎಂಬ ಮಾತು ಬಹಳವಾಗಿ ಈ ದಿನಗಳಲ್ಲಿ ಉಪಯೋಗಿಸಲ್ಪಡುತ್ತದೆ. ಪೇರಣೆ ಎಂದರೆ, ಒಬ್ಬ ಮನುಷ್ಯನು ಇನ್ನೊಬ್ಬ ಮನುಷ್ಯನಿಗೆ ವಿರೋಧವಾಗಿ ಸೈತಾನನ್ನು ಮಂತ್ರವಾದಿಗಳ ಸಹಾಯವನ್ನು ಪಡೆದು ಕಳುಹಿಸುವದು, ಇದರಲ್ಲಿ ಮಾಟಮಂತ್ರ ಕುತಂತ್ರ ಮುಂತಾದವುಗಳು ಅಡಗಿರುವವು ಎರಡನೆಯದಾಗಿ, ಪ್ರೇರಣೆ ಎಂದು ಹೇಳುವಾಗ, ನಮ್ಮ ಆಂತರ್ಯದಲ್ಲಿ ಚಿಂತನೆಯಲ್ಲಿ ಬರುವ ಪ್ರೇರಣೆಗಳು; ಈ ಪ್ರೇರಣೆಯು ಮನುಷ್ಯನ ಆತ್ಮದಲ್ಲಿ ಒಂದು ಭಾಗದಲ್ಲಿ ಉಂಟಾಗುವದು. ಆತ್ಮದಲ್ಲಿ ಪ್ರಾಣ ಅಥವಾ ಜೀವ ಇರುವದು ಎರಡು ಮನಸ್ಸಾಕ್ಷಿ ಅಲ್ಲಿರುವದು ಮೂರು ದೇವರಾತ್ಮನೊಂದಿಗೆ ಅನ್ಯೋನ್ಯತೆ ಪಡೆಯುವ ಸ್ಥಳವಿರುವದು ನಾಲ್ಕು ಪ್ರೇರಣೆಯ ಸ್ಥಳ ಇರುವದು.

ಒಬ್ಬನು ರಕ್ಷಿಸಲ್ಪಟ್ಟು ಪವಿತ್ರಾತ್ಮನ ಅಭಿಷೇಕವನ್ನು ಹೊಂದಿಕೊಳ್ಳುವಾಗ, ದೇವರಾತ್ಮನು ಮನುಷ್ಯರ ಆತ್ಮದಲ್ಲಿ ಇಳಿದು, ಮೊದಲು ಅವನ ಆತ್ಮದೊಂದಿಗೂ, ನಂತರ ಅವನ ಶರೀರದೊಂದಿಗೂ ಬೆರೆಯುವನು, ಆತ್ಮದಲ್ಲಿ ತುಂಬಿರುವವನನ್ನು ದೇವರಾತ್ಮನು ನಡೆಸುವನು ದೇವರ ಚಿತ್ತವನ್ನು ಅವನಿಗೆ ಪ್ರಕಟಿಸುವನು ಅವನನ್ನು ಪರಿಶುದ್ಧತೆ ಹೊಂದಲು, ಆಲೋಚನೆ ನೀಡಿ ನಡೆಸುವನು. ಇವನಲ್ಲಿ ಅಶುದ್ಧಾತ್ಮನು ನೆಲೆಸಿರುವದಿಲ್ಲ, ಆದರೆ ಶರೀರದ ಹೊರಗೆ, ಅಶುದ್ಧಾತ್ಮಗಳು ಅವನ ಮನಸ್ಸಿನಲ್ಲಿ, ಪಾಪಚಿಂತನೆಗಳ ಕುರಿತು ಪ್ರೇರಿಸಲು ಸಾಧ್ಯ, ಆದರೆ ಅವನೋ ದೇವರಾತ್ಮನಿಂದ ತುಂಬಿದ್ದು ಅದನ್ನು ಎದುರಿಸುವನು. ಆತ್ಮದಲ್ಲಿ ಅಂಥ ಆಲೋಚನೆಗಳು ಬರದಂತೆ ತನ್ನನ್ನು ಕಾಯ್ದು ಕೊಳ್ಳುವನು.

ಒಬ್ಬನು ರಕ್ಷಿಸಲ್ಪಟ್ಟು, ಅಭಿಷೇಕ ಹೊಂದಿದ ನಂತರ, ಹಿಂಜಾರಿ ಹಳೆಯ ಪಾಪಗಳನ್ನು ನಡೆಸುವವನಾದರೆ, ಸ್ವಲ್ಪ ಸ್ವಲ್ಪವಾಗಿ ಅವನು ದೇವರ ಕೃಪೆಯನ್ನು ಕಳೆದುಕೊಂಡು, ನನಗೆ ಕರ್ತನೂ ಬೇಡ, ದೇವರಾತ್ಮನೂ ಬೇಡ, ನಾನು ಪಾಪ ಭೋಗಗಳನ್ನು ಅನುಭವಿಸುವೆನು ಎಂದು, ಕ್ರಿಸ್ತನನ್ನು ಅವಹೇಳನ ಮಾಡುವದಾದರೆ ದೇವಕೃಪೆ ಅವನನ್ನು ಬಿಟ್ಟುಹೋಗುವದು ಇದರಿಂದ ಸೈತಾನನು ಅವನೊಳಗೆ ಪ್ರವೇಶಿಸಲು ಸುಲಭವಾಗುವದು. ಅನೇಕ ವಿಶ್ವಾಸಿಗಳ ಪ್ರಶ್ನೆ ವಿಶ್ವಾಸಿಗಳನ್ನು ಅಶುದ್ಧಾತ್ಮ ಹಿಡಿಯುವದಾ? ಎಂಬುದು ಹೌದು ಒಬ್ಬ ವಿಶ್ವಾಸಿಯು ಹಿಂಜಾರಿಹೋಗಿ ಪಾಪ ಭೋಗಗಳಲ್ಲಿ ಜೀವಿಸುವವನಾದರೆ, ಅವನನ್ನು ಅಶುದ್ಧಾತ್ಮನು ಹಿಡಿಯುವ ಅವಕಾಶ ಉಂಟು (ಮತ್ತಾ 12:43–45). ಆದ್ದರಿಂದಲೇ ನೀವು ಅಶುದ್ಧಾತ್ಮವನ್ನು ಓಡಿಸುವಾಗ ಆ ಬಿಡುಗಡೆಯನ್ನು ಕುರಿತು ಸಂತೋಷ ಪಡುವದರಲ್ಲೇ ನಿಂತು ಬಿಡದೆ, ಅವರನ್ನು ದೇವರಾತ್ಮನಿಂದ ತುಂಬುವಂತೆ ಕ್ರಿಸ್ತನ ಬಳಿಗೆ ನಡೆಸಬೇಕು, ಇಲ್ಲವಾದಲ್ಲಿ ಅಧಿಕವಾದ ಅಶುದ್ಧಾತ್ಮಗಳು ಅವರೊಳಗೆ ಹೋಗಲು ಅವಕಾಶ ಉಂಟು.

ಪ್ರೇರಣೆ ಎಂದು ಹೇಳುವಾಗ, ಅದರಲ್ಲಿ ನಾಲ್ಕು ಭಾಗಗಳುಂಟು 1.ಕರ್ತನು ನೀಡುವ ಪ್ರೇರಣೆ, 2.ಸೈತಾನನು ಕೊಡುವ ಪ್ರೇರಣೆ, 3.ಸ್ವಬುದ್ಧಿಯ ಆತ್ಮನಿಂದ ಬರುವ ಪ್ರೇರಣೆ, 4.ಇತರರು ಕೊಡುವ ಪ್ರೇರಣೆ.

## 1. ಕರ್ತನು ನೀಡುವ ಪ್ರೇರಣೆ

"ಕೂಡಲೆ ಯೇಸು ದೇವರಾತ್ಮ ಪ್ರೇರಿತನಾಗಿ ಅಡವಿಗೆ ಹೋದನು" (ಮಾರ್ಕ 1:12).

ಯೇಸು ಕ್ರಿಸ್ತನು ದೀಕ್ಷಾಸ್ನಾನ ಪಡೆದಾಗ, ತಂದೆ ದೇವರು ಸಾಕ್ಷಿಕೊಟ್ಟು "ನೀನು ಪ್ರಿಯನಾಗಿರುವ ನನ್ನ ಮಗನು ನಾನು ನಿನ್ನನ್ನು ಮೆಚ್ಚಿದ್ದೇನೆ" ಎಂದು ದೈವವಾಣಿ ಆಯಿತು. ಕೂಡಲೆ ದೇವರಾತ್ಮನು, ಆತನನ್ನು ಅರಣ್ಯಕ್ಕೆ ಹೋಗುವಂತೆ ಪ್ರೇರಿಸಿದನು. ಕ್ರಿಸ್ತನ ಮನಸ್ಸಿನಲ್ಲಿ ಒಂದು ಪ್ರೇರಣೆ, ದಾಹ ಇತ್ತು "ನೀನು ಜನಗಳಿಗೆ ಉಪಕಾರ ಮಾಡಬೇಕು ಅಂದರೆ ಅಡವಿಗೆ ಹೋಗಿ ತಂದೆಯೊಂದಿಗೆ ಏಕಾಂತವಾಗಿದ್ದು, ಉಪವಾಸ ಮಾಡಿ ದೇವ ಮಹಿಮೆಯಿಂದ ಬಲದಿಂದ ತುಂಬಲ್ಪಡಬೇಕು ಎಂದು ದೇವರಾತ್ಮನ ಆಂತರ್ಯದ ಭಾರವನ್ನು ಕ್ರಿಸ್ತನು ತನ್ನ ಮೇಲೆ ತೆಗೆದುಕೊಂಡು, ವಿಧೇಯನಾಗಿ ನಾಲ್ವತ್ತು ದಿನಗಳು ಹಗಲಿರುಳು ಉಪವಾಸವಿದ್ದು ಪ್ರಾರ್ಥಿಸಲು ಅಡವಿಗೆ ಹೋದನು.

ಕ್ರೈಸ್ತರಲ್ಲಿ ದೇವರಾತ್ಮನ ಪ್ರೇರಣೆಗೂ, ನಡೆಸುವಿಕೆಗೂ ಒಪ್ಪಿಸಿಕೊಟ್ಟವರು, ಕೆಲವರು ಯಾರ್‍ಯಾರು ತಮ್ಮ ಸ್ವಚಿತ್ತವನ್ನು ಶಿಲುಬೆಯಲ್ಲಿ ಜಡಿಯುವರೋ, ಅವರನ್ನೇ ದೇವರಾತ್ಮನು ನಡೆಸಲು ಸಾಧ್ಯ "ಯಾರ್‍ಯಾರು ದೇವರಾತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು" (ರೋಮಾ 8:14).

## 2. ಸೈತಾನನು ಕೊಡುವ ಪ್ರೇರಣೆ!

"ಸೈತಾನನು, ಇಸ್ರಾಯೇಲ್ಯರಿಗೆ ವಿರೋಧವಾಗಿ ಎದ್ದು ಇಸ್ರಾಯೇಲ್ಯರ ಖಾನೇಷುಮಾರಿ ಮಾಡುವದಕ್ಕೆ ದಾವೀದನನ್ನು ಪ್ರೇರಿಸಿದನು" (1ಪೂ.ವೃ 21:1).

ಅನೇಕರ ಮನಸ್ಸು ನಾನಾ ಚಿಂತನೆಗಳಿಂದ ಮಾರ್ಗತಪ್ಪಿದ ಹುಚ್ಚುಕುದುರೆಯಂತೆ ಓಡುತ್ತಿರುತ್ತದೆ ಅಪೊ, ಪೌಲನು ಹೇಳುತ್ತಾನೆ "ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದವುಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳು ಅವುಗಳಿಂದ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿಯುತ್ತೇವೆ" ಎಂದು (2ಕೊರಿ 10:4–5).

ದಾವೀದನು ಯುದ್ಧಕ್ಕೆ ಬರುವವರನ್ನು ಲೆಕ್ಕ ಮಾಡಿದ್ದು ಕರ್ತನಿಗೆ ಇಷ್ಟವಾಗಲಿಲ್ಲ ಬಹುಜನರಿಂದಾದರೂ ಸ್ವಲ್ಪಜನರಿಂದಾದರೂ ರಕ್ಷಿಸುವದು ಯೆಹೋವನಿಗೆ ಅಸಾಧ್ಯವಲ್ಲ" (1ಸಮು 14:6). ದಾವೀದನನ್ನು ಪ್ರೇರಿಸಿದ್ದು ಯಾರು ಎಂದು ತಿಳಿಯಲಿಲ್ಲ, ಅದನ್ನು ಕುರಿತು ಕರ್ತನ ಬಳಿ ಅವನು ವಿಚಾರಿಸಲೂ ಇಲ್ಲ ಪ್ರಿಯರೇ, ನೀವು ನಿಮ್ಮ ಸ್ವಂತ ಬಲದ ಮೇಲೆ ಹಣದ ಮೇಲೆ ಸ್ವಂತ ಆಲೋಚನೆಗಳ ಮೇಲೆ ನಂಬಿಕೆ ಇಡದೆ, ಕರ್ತನ ಮೇಲೆಯೇ ನಂಬಿಕೆ ಇಡಬೇಕೆಂದು ಕರ್ತನು ನಿರೀಕ್ಷಿಸುವನು. ಆದ್ದರಿಂದ ಸೈತಾನನು ನಿಮ್ಮ ಮನಸ್ಸನ್ನು ಚಿಂತನೆಗಳನ್ನು ಅವರಿಸಲು ಸ್ಥಳಕೊಡದಿರಿ ಸೈತಾನನ ಪ್ರೇರಣೆಯನ್ನು ಅರಿತು ಅವನನ್ನು ಯೇಸುವಿನ ರಕ್ತದೊಂದಿಗೆ ಎದುರಿಸಿ ನಿಲ್ಲಿರಿ ನಿಮ್ಮ ಮನಸ್ಸು ಪವಿತ್ರಾತ್ಮನ ಅಭಿಷೇಕದಿಂದ ತುಂಬಲ್ಪಡಲಿ.

"ಕೂಡಲೆ ಯೇಸು ದೇವರಾತ್ಮ ಪ್ರೇರಿತನಾಗಿ ಅಡವಿಗೆ ಹೋದನು" (ಮಾರ್ಕ 1:12). ಯೇಸು ಕ್ರಿಸ್ತನು ದೀಕ್ಷಾಸ್ನಾನ ಪಡೆದಾಗ, ತಂದೆ ದೇವರು ಸಾಕ್ಷಿಕೊಟ್ಟು "ನೀನು ಪ್ರಿಯನಾಗಿರುವ ನನ್ನ ಮಗನು ನಾನು ನಿನ್ನನ್ನು ಮೆಚ್ಚಿದ್ದೇನೆ" ಎಂದು ದೈವವಾಣಿ ಆಯಿತು. ಕೂಡಲೆ ದೇವರಾತ್ಮನು, ಆತನನ್ನು ಅರಣ್ಯಕ್ಕೆ ಹೋಗುವಂತೆ ಪ್ರೇರಿಸಿದನು.

## ಮುಂಜಾನೆಯಲ್ಲಿ ಏಕಾಂತ ಪ್ರಾರ್ಥನೆ

**'ಬೆಳಿಗ್ಗೆ ನೀನು ಸಿದ್ಧವಾಗಿದ್ದು ಸೀನಾಯಿ ಬೆಟ್ಟವನ್ನು ಹತ್ತಿ ಅಲ್ಲಿ ಬೆಟ್ಟದ ತುದಿಯ ಮೇಲೆ ನನ್ನ ಸನ್ನಿಧಿಯಲ್ಲಿ ನಿಂತಿರಬೇಕು' (ವಿಮೋ 34:2).**

1. ಮುಂಜಾನೆಯ ವೇಳೆಯು ಪ್ರಾರ್ಥಿಸಲು ಬಹು ಉತ್ತಮವಾದ ಸಮಯ, "ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು" (ಮಾರ್ಕ 1:35). ಮುಂಜಾನೆಯ ಪ್ರಾರ್ಥನೆಯನ್ನು ಬಿಟ್ಟುಬಿಡದಿರಿ.
2. ಕುಟುಂಬ ಪ್ರಾರ್ಥನೆ ಅವಶ್ಯ ಆದರೆ ಮುಂಜಾನೆಯಲ್ಲಿ ಏಕಾಂತವಾಗಿ ಇದ್ದು ಪ್ರಾರ್ಥಿಸುವದು ಬಹಳ ಅವಶ್ಯ.
3. ವಾಡಿಕೆ ಎಂದೆಣಿಸಿ ಪ್ರಾರ್ಥಿಸದಿರಿ, ಸರ್ವಶಕ್ತನಾದ ದೇವರೊಂದಿಗೆ, ಮಾತಾಡಲು ಹೋಗುವಿರಿ ಎಂಬ ಗ್ರಹಿಕೆಯೊಂದಿಗೆ ಸಿದ್ಧವಾಗಿದ್ದು ಪ್ರಾರ್ಥನೆಯಲ್ಲಿ ತೊಡಗಿರಿ.
4. ಹಾಸಿಗೆಯಿಂದ ಎದ್ದು ಅರೆನಿದ್ರೆಯಲ್ಲಿ ಬಾಯಿಯಲ್ಲಿ ಗುಣುಗುಣುವೆಂದು ಕೆಲವಗಳಿಗೆ ಪ್ರಾರ್ಥಿಸುವದಾಗಲಿ, ಮೌನವಾಗಿ ಸ್ವಲ್ಪಕಾಲ ಕುಳಿತಿರುವದು ಪ್ರಾರ್ಥನೆ ಎನಿಸದು. ಮೊದಲು ಸಿದ್ಧವಾಗಿರಿ, ನಿಮ್ಮೊಳಗೆ ಒಂದು ಚೈತನ್ಯ ಉಂಟಾಗಿ ಒಂದು ಒಳ್ಳೆಯ ಸಿದ್ಧಮನದೊಂದಿಗೆ ಪ್ರಾರ್ಥನೆಯಲ್ಲಿ ತೊಡಗಿರಿ.
5. ಪ್ರಾರ್ಥನೆಯ ಸಮಯದಲ್ಲಿ ಗುಣುಗುಣುವೆಂದು ಗುಣುಗಾಟದ ಪ್ರಾರ್ಥನೆ ಮಾಡದೆ, ಬಾಯಿತೆರೆದು, ಸ್ವರವೆತ್ತಿ ಪ್ರಾರ್ಥಿಸುವದು, ಪ್ರಾರ್ಥನೆಯಲ್ಲಿ ನಿಮಗೆ ಉತ್ಸಾಹವನ್ನು ತುಂಬುವದು.

**ವಾಗ್ದಾನ ವಚನ :: ಯೆರೆಮೀಯ 17:8**

**ನೀರಾವರಿಯಲ್ಲಿ ನೆಡಲ್ಪಟ್ಟು ಹೊಳೆಯ ದಡದಲ್ಲಿ ತನ್ನ ಬೇರುಗಳನ್ನು ಹರಡಿ ದಗೆಗೆ ಭಯಪಡದೆ ಹಸುರೆಲೆಯನ್ನು ಬಿಡುತ್ತಾ ಕ್ಷಾಮ ವರ್ಷದಲ್ಲಿಯೂ ನಿಶ್ಚಿಂತೆಯಾಗಿ ಸದಾ ಫಲಕೊಡುತ್ತಾ ಇರುವ ಮರಕ್ಕೆ ಸಮಾನನಾಗಿರುವನು.**

# ನಿಮ್ಮ ಚಿಂತನೆಗಾಗಿ

1. ಇತರರಿಗಾಗಿ ಪ್ರಾರ್ಥಿಸಲು ನೀನು ಕಾತುರವುಳ್ಳವನಾಗಿರು ಆದರೆ ಇತರರ ಪ್ರಾರ್ಥನೆಗಾಗಿ ಕಾದಿರಬಾರದು.
2. ಇತರರನ್ನು ಸಂತೈಸಲು ನೀನು ಕಾತುರವುಳ್ಳವನಾಗಿರು ಆದರೆ ನಿನ್ನ ಆಧರಣೆಗಾಗಿ ಕರ್ತನನ್ನೇ ಆತುಕೋ.
3. ಇತರರಿಗಾಗಿ ಒಳ್ಳೆಯದನ್ನು ಮಾಡಲು ತೀವ್ರವಾಗಿರು ಆದರೆ ಇತರರಿಂದ ಬರುವ ಒಳ್ಳೇಯವುಗಳನ್ನೇ ನಂಬಿಕೊಂಡಿರಬೇಡ.
4. ಇತರರನ್ನು ಪ್ರೀತಿಸುವದರಲ್ಲಿ ಮುಂದಾಗಿರು ಆದರೆ ನೀನು ಕರ್ತನ ಪ್ರೀತಿಗಾಗಿ ಮಾತ್ರ ತವಕಪಡು.
5. ನಿನ್ನನ್ನು ನಂಬುವಂಥ ಯಾರೊಬ್ಬರನ್ನು ವಂಚಿಸದಿರು ಆದರೆ ಇತರರನ್ನು ನಂಬಿಕೊಂಡು ನೀನು ಮೋಸಹೋಗದಿರು.
6. ನೀನು ಇತರರನ್ನು ನೋಯಿಸುವಂತೆ ಮಾತಾಡಬೇಡ ಆದರೆ ಇತರರು ನಿನ್ನನ್ನು ಕುರಿತು ಮಾತಾಡಿದ್ದನ್ನು ನೆನಸಿ ನೊಂದುಕೊಳ್ಳಬೇಡ.

**ಸ್ವಾರ್ಥ ನೀಗುವಾಗ ಕ್ಷಮಾಗುಣ ತಾನಾಗಿ ಬರುವದು.**
**ಸ್ವಾರ್ಥಿಯಾಗಿಲ್ಲದೆ ಉದಾರ ಗುಣವನಾಗಿರು.**


---

## ಕರ್ತನ ಜ್ಞಾನ

**ಜ್ಞಾನವನ್ನು ಪಡೆಯಬೇಕೆಂಬದೇ ಜ್ಞಾನಬೋಧೆಯ ಪ್ರಥಮ ಪಾಠ (ಜ್ಞಾನೋ 4:7)**
**ಪವಿತ್ರಾತ್ಮನ ಒಂಭತ್ತು ವರಗಳಲ್ಲಿ ಜ್ಞಾನವು ಒಂದು ವರವಾಗಿದೆ (1ಕೊರಿ 13:8)**

ಜೀವಿತದಲ್ಲಿ ಸಮಸ್ಯೆಗಳು, ಹೋರಾಟಗಳು, ಗೊಂದಲಗಳು ಎದುರಾಗುವಾಗ ಜ್ಞಾನದಿಂದ ಹೇಗೆ ನಡೆದುಕೊಳ್ಳಬೇಕು, ಸಮಸ್ಯೆಗಳ ಪರಿಹಾರಕ್ಕೆ ಏನು ಮಾಡಬೇಕು ಎಂಬದನ್ನು ಈ ಜ್ಞಾನದ ವರವು ಬೋಧಿಸಿ ನಡಿಸುವದು. ಮೋಶೆಯ ತರುವಾಯ ಅವನ ಶಿಷ್ಯನಾದ ಯೆಹೋಶುವನಿಗೆ ಇಸ್ರಾಯೇಲ್ಯರನ್ನು ನಡಿಸುವ ಜವಾಬ್ದಾರಿಕೆ ಹೊರಿಸಲ್ಪಟ್ಟಾಗ ಕರ್ತನಾದ ಯೆಹೋವನು, ಯೆಹೋಶುವನನ್ನು ಧೈರ್ಯಗೊಳಿಸಿ "ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವದನ್ನೆಲ್ಲಾ ಕೈಕೊಂಡು ನಡಿ, ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ, ಕೃತಾರ್ಥನಾಗುವಿ." (ಯೆಹೋ 1:8) ಎಂದು ಹೇಳಿದನು

ಈ ವಿಧವಾದ ಧೈರ್ಯವನ್ನು ನಡಿಸು ವಿಕೆಯನ್ನು ಪಡೆಯಲು ಜ್ಞಾನದ ಭಂಡಾರವಾಗಿರುವ ಸತ್ಯವೇದವನ್ನು ಓದಿ ಧ್ಯಾನಿಸಬೇಕು.



# ನಮ್ಮ ದೇಶದ ಸುದ್ದಿಗಳು

## (INDIA NEWS)

**1. 2020ರವರೆಗೆ ಕೆಲಸ ನಿರ್ವಹಿಸಲಿರುವ ಮಂಗಳನೌಕೆ:** ಮಂಗಳ ಗ್ರಹದ ಅಧ್ಯಯನಕ್ಕಾಗಿ ಕಳುಹಿಸಿರುವ ಮಂಗಳ ನೌಕೆಯಲ್ಲಿ ಈಗಲೂ 20 ಕೆ.ಜಿ ಇಂಧನ ಇದ್ದು 2020ರವರೆಗೆ ಕೆಲಸ ಮಾಡಲಿದೆ ಎಂದೂ ಇಸ್ರೊ ಅಧ್ಯಕ್ಷ ಎ. ಎಸ್ ಕಿರಣ್ ಕುಮಾರ್ ಹೇಳಿದರು.

**2. ಜನಧನ ಖಾತೆಗಳಿಂದ ರೂ.5,500 ಕೋಟಿ ವಾಪಸ್:** ಪಿ.ಟಿ.ಐ ಡಿಸೆಂಬರ್ 7ರಿಂದ ಜನವರಿ 11ರ ನಡುವೆ ಜನಧನ ಖಾತೆಗಳಿಂದ ರೂ.5,582 ಕೋಟಿ ಹಣವನ್ನು ತೆಗೆಯಲಾಗಿದೆ. ನಂತರ ಠೇವಣಿಯ ಮೊತ್ತದಲ್ಲಿ ಭಾರಿ ಏರಿಕೆಯಾಗಿ ಒಟ್ಟು ರೂ.74,610 ಕೋಟಿ ಹಣ ಜಮೆಯಾಗಿತ್ತು ಎಂದು ಮೂಲಗಳು ತಿಳಿಸಿವೆ.

**3. ನಿಸ್ವಾರ್ಥ ಸೇವೆಗೆ ಪುರಸ್ಕಾರ:** ಹೆಚ್ಚು ಪ್ರಚಾರ ಪಡೆಯದೇ ಹಲವು ದಶಕಗಳಿಂದ ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವ ಕೆಲವರನ್ನು ಈ ಬಾರಿ ಪದ್ಮಗೌರವ ಅರಸಿಕೊಂಡು ಬಂದಿದೆ. ಮಧ್ಯಪ್ರದೇಶದ ಇಂದೋರ್‌ನ ವೈದ್ಯೆ 90 ವರ್ಷ ವಯಸ್ಸಿನ ಭಕ್ತಿ ಯಾದವ್ ಅಂತಹವರಲ್ಲಿ ಒಬ್ಬರು 2017ನೇ ಸಾಲಿನ ಪದ್ಮಶ್ರೀ ಪುರಸ್ಕಾರ ಅವರ ಮುಡಿಗೇರಿದೆ.

**4. ತೆಲಂಗಾಣ: ಪರಮವೀರಚಕ್ರ ಪುರಸ್ಕೃತರಿಗೆ ರೂ.2.25 ಕೋಟಿ:** ಪರಮವೀರಚಕ್ರ ಪುರಸ್ಕೃತರಾದ ರಾಜ್ಯದ ಸೈನಿಕರಿಗೆ ರೂ.2.25 ಕೋಟಿ ಬಹುಮಾನ ನೀಡುವುದಾಗಿ ತೆಲಂಗಾಣ ಸರ್ಕಾರ ಘೋಷಿಸಿದೆ, ಇದರೊಂದಿಗೆ ಸೈನಿಕರಿಗೆ ಬೃಹತ್ ಮೊತ್ತದ ಬಹುಮಾನ ಘೋಷಿಸಿದ ಮೊದಲ ರಾಜ್ಯವಾಗಿದೆ ತೆಲಂಗಾಣ ಕರ್ತವ್ಯನಿರತ, ನಿವೃತ್ತ ಮತ್ತು ಹುತಾತ್ಮ ಸೈನಿಕರ ಕುಟುಂಬದವರಿಗೆ ನೆರವು ನೀಡುವ ಸಲುವಾಗಿ ರಾಜ್ಯ ಮಟ್ಟದ ಸೇನಾ ಕಲ್ಯಾಣ ನಿಧಿ ಸ್ಥಾಪಿಸಲೂ ಸರ್ಕಾರ ನಿರ್ಧರಿಸಿದೆ.

**5. ಮೂರು ವರ್ಷದಲ್ಲಿ ಚೀನಾದಿಂದ ರೇಷ್ಮೆ ಆಮದು ಬಂದ್:** ಚೀನಾದಿಂದ ಭಾರತ ದೇಶಕ್ಕೆ ಆಮದು ಮಾಡಿಕೊಳ್ಳುತ್ತಿರುವ ರೇಷ್ಮೆ ನೂಲನ್ನು ಮೂರು ವರ್ಷದಲ್ಲಿ ಸಂಪೂರ್ಣವಾಗಿ ನಿಲ್ಲಿಸಿ ನಮಗೆ ಅಗತ್ಯವಿರುವಷ್ಟು ಗುಣಮಟ್ಟದ ರೇಷ್ಮೆ ನೂಲನ್ನು ನಮ್ಮ ದೇಶದಲ್ಲೆ ಉತ್ಪಾದನೆ ಮಾಡಲು ಅಗತ್ಯವಾಗಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಕೇಂದ್ರ ರೇಷ್ಮೆ ಮಂಡಳಿಯ ಅಧ್ಯಕ್ಷ ಕೆ ಎಂ.ಹನುಮಂತರಾಯಪ್ಪ ಹೇಳಿದರು.



# ಹೊರ ದೇಶದ ಸುದ್ದಿಗಳು

## (FOREIGN NEWS)

**1. ನಿರ್ಬಂಧ ಪಟ್ಟಿಯಲ್ಲಿ ಉಗ್ರ ಹಫೀಜ್:** ಇಸ್ಲಾಮಾಬಾದ್ ಪಿಟಿಐ ಗೃಹಬಂಧನದಲ್ಲಿರುವ ಜಮಾತ್ ಉದ್‌ದವಾ ಮುಖ್ಯಸ್ಥ ಹಾಗೂ ಮುಂಬೈ ದಾಳಿಯ ಸಂಚುಕೋರ ಹಫೀಜ್ ಸಯೀದ್ ಮತ್ತು ಈತನ ನಾಲ್ಕರು ಸಹಚರರನ್ನು ದೇಶ ತೊರೆಯದಂತೆ ನಿರ್ಬಂಧ ಹೇರಿರುವವರ ಪಟ್ಟಿಯಲ್ಲ ಸೇರಿಸಲಾಗಿದೆ. ಎಲ್ಲ ಪ್ರಾಂತೀಯ ಸರ್ಕಾರ ಮತ್ತು ಫೆಡರಲ್ ತನಿಖಾ ಸಂಸ್ಥೆಗಳಿಗೆ ಪತ್ರ ಬರೆದಿರುವ ಒಳಾಡಳಿತ ಸಚಿವಾಲಯ 38 ಜನರ ಹೆಸರನ್ನು ಸೇರಿಸಿದೆ.

**2. ಭಾರತಕ್ಕೆ 6ನೇ ಸ್ಥಾನ:** ವಾಷಿಂಗ್ಟನ್ (ಪಿಟಿಐ) 2017ರ ವಿಶ್ವದ 8 ಪ್ರಭಾವಶಾಲಿ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತವು ಆರನೇ ಸ್ಥಾನ ಪಡೆದಿದೆ. ಅಮೆರಿಕಾದ ಪ್ರಮುಖ ವಿದೇಶಾಂಗ ನೀತಿ ನಿಯತಕಾಲಿಕೆಯು ಬಿಡುಗಡೆ ಗೊಳಿಸಿರುವ ಈ ಪಟ್ಟಿಯಲ್ಲಿ ಚೀನಾ ಹಾಗೂ ಜಪಾನ್ ದೇಶಗಳ ನಂತರ ಭಾರತ ಗುರುತಿಸಿಕೊಂಡಿದೆ ಪಟ್ಟಿಯಲ್ಲಿ ಅಮೆರಿಕ ಅಗ್ರಸ್ಥಾನದಲ್ಲಿದೆ.

**3. ಮೆಕ್ಸಿಕೊ ಗಡಿಯಲ್ಲಿ ಗೋಡೆ ನಿರ್ಮಾಣ:** ಮೆಕ್ಸಿಕೊ ಗಡಿಯಲ್ಲಿ ದುರ್ಗಮ ಗೋಡೆ ನಿರ್ಮಿಸುವ ಮೂಲಕ ಅಕ್ರಮ ವಲಸಿಗರಿಗೆ ಕಡಿವಾಣ ಹಾಗೂ ದಾಖಲಾತಿಗಳನ್ನು ಹೊಂದದೆ ನೆಲೆಸಿರುವ ಲಕ್ಷಾಂತರ ಮಂದಿಯನ್ನು ಶೀಘ್ರದಲ್ಲಿ ಗಡೀಪಾರು ಮಾಡುವ ಎರಡು ಮಹತ್ವದ ಆದೇಶಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿಹಾಕಿದ್ದಾರೆ. ಈ ಮೂಲಕ ಚುನಾವಣಾ ಪ್ರಚಾರದಲ್ಲಿ ದೇಶದ ಜನರಿಗೆ ನೀಡಿದ ವಾಗ್ದಾನದಂತೆ ನಡೆದುಕೊಂಡಿದ್ದಾರೆ.

**4. 18ನೇ ಗ್ರ್ಯಾಂಡ್‌ಸ್ಲಾಮ್ ಗೆದ್ದ ಫೆಡರರ್:** ಸ್ವಿಟ್ಜರ್‌ಲೆಂಡ್‌ನ ರೋಜರ್ ಫೆಡರರ್ ತಮ್ಮ ಸಾಧನೆಯ ಕಿರೀಟಕ್ಕೆ ಮತ್ತೊಂದು ಗುರಿ ಸೇರ್ಪಡೆ ಮಾಡಿಕೊಂಡಿದ್ದಾರೆ. ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಫೈನ್‌ನ ರಫೆಲ್ ನಡಾಲ್ ಸವಾಲು ಮೀರಿ ನಿಂತ 35 ವರ್ಷದ ರೋಜರ್ ತಮ್ಮ ತೋಳುಗಳಲ್ಲಿ ಇನ್ನೂ ಡೆನಿಸ್ ಆಡುವ ಶಕ್ತಿ ಇದೆ ಎಂಬುದನ್ನು ಸಾಬಿತು ಮಾಡಿದ್ದಾರೆ.

**5. ಅಮೆರಿಕದ ಸುಪ್ರೀಂಕೋರ್ಟ್‌ಗೆ ಕಿರಿಯ ನ್ಯಾಯಮೂರ್ತಿ:** ಅಮೆರಿಕದ ಸುಪ್ರೀಂಕೋರ್ಟ್‌ನ ನ್ಯಾಯ ಮೂರ್ತಿ ಸ್ಥಾನಕ್ಕೆ ಕೊಲರೆಡೊದ ಮೇಲ್ಮನವಿ ನ್ಯಾಯಾಲಯದ ನ್ಯಾಯಾಧೀಶ ನೀಲ್ ಗೋರ್ಸುಚ್ ಅವರ ಹೆಸರನ್ನು ನಾಮನಿರ್ದೇಶನ ಮಾಡಲಾಗಿದೆ.

## ಕರ್ತನು ನನಗೆ ಆಶ್ರಯಗಿರಿಯೂ, ಬಂಡೆಯೂ

◆ಆತನಿಗೆ ಮೊರೆಯಿಡು–"ಆತನು ನಿನ್ನ ರಕ್ಷಣೆಯ ಬಂಡೆಯೂ ಆಶ್ರಯಗಿರಿಯೂ ಆಗಿದ್ದಾನೆ" (ಕೀರ್ತ 62:7).

◆ಆತನಿಗೆ ಮೊರೆಯಿಡು–"ಆತನು ನಿನ್ನನ್ನು ನಾಶನದ ಗುಂಡಿಯೊಳಗಿಂದ ಕೆಸರಿನಿಂದ ತೆಗೆದು ಬಂಡೆಯ ಮೇಲೆ ನಿಲ್ಲಿಸುವನು" (ಕೀರ್ತ 40:2).

◆ಆತನಿಗೆ ದಾಹಗೊಳ್ಳು–"ಆತನು ಜೀವಕರವಾದ ನೀರನ್ನು ನಿನಗೆ ಕೊಡುವ ಬಂಡೆ" (ಯೋಹಾ 7:38, ಯೆಶಾ 55:1).

◆ಆತನ ಬಳಿಗೆ ಬಾ–"ಆತನೇ ನಿನ್ನ ದೈವಿಕ ಬಂಡೆಯಾಗಿದ್ದಾನೆ" (1ಕೊರಿ 10:4).

◆ಆತನನ್ನೇ ಆತುಕೋ–"ಆತನು ನಿನ್ನನ್ನು ಹತ್ತಲಾರದ ಆಶ್ರಯ ಗಿರಿಯ ಮೇಲೆ ಹತ್ತಿಸುವನು" (ಕೀರ್ತ 61:2).

◆ಆತನಲ್ಲಿ ನಂಬಿಕೆಯಿಡು–"ಆತನು ನಿನ್ನ ಶಾಶ್ವತ ಆಶ್ರಯ ಗಿರಿಯಾಗಿದ್ದಾನೆ" (ಯೆಶಾ 26:4).

◆ಆತನನ್ನು ಸ್ತೋತ್ರಮಾಡು–"ಆತನು ನಿನಗೆ ಚೈತನ್ಯ ಕೊಡುವ ಆಶ್ರಯಗಿರಿಯಾದ ಶರಣನಾಗಿದ್ದಾನೆ" (2ಸಮು 22:47).

## ಪ್ರೀತಿಯಲ್ಲಿ ಪೂರ್ಣತೆ

ಹಗೆತನಕ್ಕೂ ಕಹಿತನಕ್ಕೂ ಉರಿಗೊಳ್ಳುವಿಕೆಗೂ ಅನೇಕ ಕಾರಣಗಳಿದ್ದರೂ, ಅವೆಲ್ಲವೂ ನ್ಯಾಯವಾದದ್ದೇ ಆಗಿದ್ದಾಗ್ಯೂ ಆ ಕಾರಣಗಳನ್ನು ಪ್ರಯೋಗಿಸದೆ, ನಾವು ಶಾಂತರಾಗಿಯೂ, ಸಹಿಸುವವರಾಗಿಯೂ, ನಿಧಾನವಾಗಿಯೂ ಇರುವದೇ ಪ್ರೀತಿಯಲ್ಲಿ ನಮ್ಮನ್ನು ಪೂರ್ಣ ಪಡಿಸುತ್ತದೆ.

ಕೆಡುಕನ್ನು ಸಹಿಸಿಕೊಳ್ಳುವದು, ಒಳ್ಳೆಯದನ್ನೇ ಮಾಡುವದು ಒಳ್ಳೆಯ ಚಿಂತನೆ, ಸೌಮ್ಯವಾದ ಮನೋಭಾವದಿಂದ ಕೂಡಿರುವದು, ಆಂದರೆ ಪ್ರೀತಿಯ ಮಾತು, ಪ್ರೀತಿಯ ಒಡನಾಟ, ಪ್ರೀತಿಯಿಂದ ಕಾರ್ಯಮಾಡುವದೆಲ್ಲವೂ, ಇದೆಲ್ಲವೂ ಪ್ರೀತಿ ಎಂಬದಕ್ಕೆ 100 ರಲ್ಲಿ 50 ಭಾಗವಷ್ಟೇ ಆಗಿದೆ. ಉಳಿದ 50 ಭಾಗವನ್ನು ಹೇಗೆ ಪೂರ್ತಿಗೊಳಿಸುವದು?

ಪ್ರೀತಿ ತೋರಿಸಬೇಕಾದ ವ್ಯಕ್ತಿಯಲ್ಲಿ ಕೋಪಕ್ಕೆ ಕಾರಣವಾದ ತಪ್ಪು ದೋಷಗಳು, ಅಸಹನೀಯವಾದ ಗುಣಗಳು, ಅಭ್ಯಾಸಗಳನ್ನು ನೋಡುವಾಗ ಆವ್ಯಕ್ತಿಯನ್ನು ವಿರೋಧಿಸದೆ, ಮನಸ್ಸನ್ನು ಕಹಿಮಾಡಿಕೊಳ್ಳದೆ, ಸಹಿಸಿಕೊಳ್ಳುವದೇ ಪ್ರೀತಿಯನ್ನು ಪೂರ್ಣಗೊಳಿಸುವದೇ ಮಹೋನ್ನತವಾದ ಕೃತ್ಯವಾಗಿದೆ.

'ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ' (ಮತ್ತಾ 5:45).

## ನನ್ನೊಂದಿಗಿರುವಿ!



**'ನೀನು ಯಾವಾಗಲೂ ನನ್ನ ಸಂಗಡ ಇದ್ದೀ, ಮತ್ತು ನನ್ನದೆಲ್ಲಾ ನಿನ್ನದೇ' (ಲೂಕ 15:31).**

ಈ ಮಾತುಗಳನ್ನು ಓದುವಾಗ, ತಂದೆ ದೇವರು ನನ್ನೊಂದಿಗೆ ಮಾತಾನಾಡುತ್ತಿರುವನೆಂದು ಭಾವಿಸಿ ಪರವಶಗೊಂಡಿರುವೆನು "ಈ ಮಾತುಗಳು ನನಗೆ ಮಾತ್ರವಲ್ಲ ಸಾವಿರಾರು ಭಕ್ತರಿಗೆ ಸಂತೋಷವನ್ನು ನೀಡಿರುವದು. ಈ ಮಾತುಗಳು ನಿಮ್ಮನ್ನು ಉತ್ಸಾಹಗೊಳಿಸಿ ಕರ್ತನನ್ನು ಆತುಕೊಂಡು ಜೀವಿಸುವಂತೆ ಪ್ರೇರೇಪಿಸಲಿ! ಲೂಕ 15ನೇ ಅಧ್ಯಾಯದಲ್ಲಿ ಬರುವ ಘಟನೆಯನ್ನು ಸಾಮಾನ್ಯವಾಗಿ ಅನೇಕರು "ಕೆಟ್ಟಮಗನ ಚರಿತ್ರೆ" ಎಂದು ಹೇಳುವರು, ಆದರೆ ನಿಜವಾಗಿಯೂ; ಪ್ರೀತಿಯುಳ್ಳ ತಂದೆಯ ಚರಿತ್ರೆ ಎಂದು ಹೇಳಬಹುದು.

ಒಬ್ಬ ತಂದೆಗೆ ಇಬ್ಬರು ಮಕ್ಕಳಿದ್ದರು ಅವರಿಗೆ ತಾಯಿಯೋ ಸಹೋದರಿಯರೇ ಇದ್ದುದ್ದಾಗಿ ಸತ್ಯವೇದದಲ್ಲಿ ಹೇಳಿಲ್ಲ ಕಿರಿಯವನು ತಂದೆಯನ್ನು, ನನ್ನ ಪಾಲಿನ ಆಸ್ತಿಯನ್ನು ಭಾಗ ಮಾಡಿ ತನ್ನ ಪಾಲನ್ನು ಕೊಡಬೇಕೆಂದು ಕೇಳಿದನು. ಸಾಮಾನ್ಯವಾಗಿ ತಂದೆ ಜೀವದಿಂದಿರುವಾಗಲೇ, ಮಕ್ಕಳು ಆಸ್ತಿಯಲ್ಲಿ ಪಾಲುಕೇಳುವದು ತಂದೆಯ ಬೆನ್ನಿಗೆ ಚೂರಿ ಹಾಕಿದಂತೆ. ಆದಾಗ್ಯೂ ಪ್ರೀತಿಯಳ್ಳ ತಂದೆ, ಬೇರೆ ದಾರಿ ಇಲ್ಲದೆ, ಆಸ್ತಿಯಲ್ಲಿನ ಪಾಲನ್ನು ಕೊಟ್ಟುಬಿಟ್ಟನು, ತಂದೆ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ತೆಗೆದುಕೊಂಡು ಹೋಗಿ ಒಂದು ವ್ಯಾಪಾರವನ್ನೋ ಆಸ್ತಿಯನ್ನೋ ಮಾಡದೆ, ದೂರದೇಶಕ್ಕೆ ಹೋಗಿ, ದುರ್ಮಾರ್ಗಿಯಾಗಿ ಜೀವಿಸಿ ತನ್ನ ಆಸ್ತಿಯನ್ನೆಲ್ಲಾ ಹಾಳುಮಾಡಿ ಬಿಟ್ಟನು (ಲೂಕ 15:13) ಎಲ್ಲವನ್ನೂ ಕಳೆದುಕೊಂಡ ಮೇಲೆ ಹಂದಿಗಳನ್ನು ಮೇಯಿಸುವ ಕೆಲಸಕ್ಕೆ ಸೇರಿದನು ಅಲ್ಲಿ ಅವನಿಗೆ ಸರಿಯಾದ, ಊಟ ಇಲ್ಲ ಹಂದಿಗಳು ತಿನ್ನುವ ತೌಡೂ ಅವನಿಗೆ ಸಿಗಲಿಲ್ಲ.

ಅಂಥಹ ಸ್ಥಿತಿಯಲ್ಲಿರುವಾಗ ಅವನಿಗೆ ತನ್ನ ತಂದೆಯ ಜ್ಞಾಪಕ ಬಂದಿತು "ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ, ಅಪ್ಪಾ ಪರಲೋಕಕ್ಕೆ ವಿರೋಧವಾಗಿಯೂ, ನಿನ್ನ ಮುಂದೆಯೂ ಪಾಪಮಾಡಿದ್ದೇನೆ ನಿನ್ನ ಮಗನೆನಿಸಿಕೊಳ್ಳಲು ಯೋಗ್ಯನಲ್ಲ ನಿನ್ನ ಆಳುಗಳಲ್ಲಿ ಒಬ್ಬನಾಗಿ ನನ್ನನ್ನು ಸೇರಿಸಿಕೊ" (ಲೂಕ 15:18,19) ಎಂದು ಕೇಳುತ್ತೇನೆ ಎಂದು ನಿರ್ಧರಿಸಿ ತಂದೆಯ ಮನೆಗೆ ಹಿಂದಿರುಗಿದನು, ತಂದೆ ದೂರದಿಂದಲೇ ತನ್ನ ಮಗನು ಬರುತ್ತಿರುವದನ್ನು ಕಂಡು ಓಡಿಹೋಗಿ ಅವನನ್ನು ಅಪ್ಪಿಕೊಂಡು ಮುದ್ದಾಡಿ, ಕೆಲಸದಾಳುಗಳನ್ನು ಕರೆದು ಮಗನಿಗೆ ಸ್ನಾನ ಮಾಡಿಸಿ ಒಳ್ಳೆಯ ಬಟ್ಟೆಯನ್ನು ತೊಡಿಸಿ ಹಬ್ಬವನ್ನಾಚರಿಸುವಂತೆ ಹೇಳಿದನು, ಇದನ್ನು ಕಂಡ ಹಿರಿಯ ಮಗನು, ಇಷ್ಟು ಕಾಲವೂ ನಿನಗೆ ವಿಧೇಯನಾಗಿ ನಿನ್ನೊಂದಿಗಿದ್ದೇನೆ, ಆದರೂ ನನ್ನ ಸ್ನೇಹಿತರ ಸಂಗಡ ಸಂತೋಷ ಪಡಲು ಒಂದು ಆಡನ್ನಾದರೂ ನನಗೆ ಕೊಡಲಿಲ್ಲ ಅಂದನು, ಅದಕ್ಕೆ ತಂದೆ ನೀನು ಯಾವಾಗಲೂ ನನ್ನ ಸಂಗಡ ಇರುವಿ, ನನ್ನದೆಲ್ಲಾ ನಿನ್ನದೇ ಎಂದು ಹೇಳಿದನು.

ದೇವಮಕ್ಕಳೇ, ನೀವು ಯಾವ ಸ್ಥಿತಿಯಲ್ಲಿ ಹಿಂಜಾರಿ ಹೋಗಿದ್ದರೂ ಪ್ರೀತಿಯ ತಂದೆಯಾದ ದೇವರು; ನಿಮ್ಮನ್ನು ಪ್ರೀತಿಯಿಂದ ಆಲಂಗಿಸಿಕೊಳ್ಳಲು ಉತ್ಸುಕನಾಗಿರುವನು, ಆದ್ದರಿಂದ ಎಲ್ಲಾ ಹಿಂಜಾರುವಿಕೆಯನ್ನು ತ್ಯಜಿಸಿ ತಂದೆಯ ಬಳಿಗೆ ಬನ್ನಿರಿ.

ನೆನಪಿಗೆ: **'ನನಗೆ ಪ್ರಾಪ್ತವಾಗಿರುವ ಸ್ವಾಸ್ತ್ಯವು ರಮಣೀಯವಾದದ್ದು; ಅದು ನನಗೆ ಸಂತೃಪ್ತಿಕರವಾಗಿದೆ' (ಕೀರ್ತ 16:6).**

## ಯಾವಾಗಲೂ ನನ್ನೊಂದಿಗೆ!

ಬೆಳಿಗ್ಗೆ : ಅರಣ್ಯ 26,27
ಸಂಜೆ : ಮಾರ್ಕ 8:1–23

**'ಸತ್ತವನಾಗಿದ್ದ ಈ ನನ್ನ ಮಗನು, ತಿರುಗಿ ಬದುಕಿ ಬಂದನು; ಪೋಲಿ ಹೋಗಿದ್ದನು ಸಿಕ್ಕಿದನು ಎಂದು ಹೇಳಿದನು ಆಗ ಅವರು ಉಲ್ಲಾಸಪಡುವದಕ್ಕೆ ತೊಡಗಿದರು' (ಲೂಕ 15:24).**

ದುರ್ಮಾರ್ಗತನವನ್ನು ಬಿಟ್ಟು ಹಿಂತಿರುಗಿ ಬಂದ ಮಗನಿಗೆ, ತಂದೆ ಮುದ್ದಿಟ್ಟು, ಉಂಗುರ ತೊಡಿಸಿದನು ಒಳ್ಳೆಯ ವಸ್ತ್ರಗಳನ್ನು, ಪಾದರಕ್ಷೆಯನ್ನು ತೊಡಿಸಿದನು, ಕೊಬ್ಬಿದ ಕರುವನ್ನು ಕೊಯ್ಯಿಸಿ ಔತಣ ಮಾಡಿದನು, ಕಾರಣ ತಂದೆಗೆ ಮಗನ ಮೇಲಿದ್ದ ಪ್ರೀತಿಯೇ ಆಗಿದೆ.

ಆದರೆ ಹಿರಿಯ ಮಗನು ಅದನ್ನು ಅರಿತುಕೊಳ್ಳಲಿಲ್ಲ ಒಂದು ಕಡೆ ತಾಳ್ಮೆಯಿಂದಿದ್ದರೂ, ಮತ್ತೊಂದೆಡೆ ತಂದೆಯೇ, ನಿನ್ನ ನೀತಿ ನ್ಯಾಯಗಳು ಎಲ್ಲಿ? ಮೊದಲಿನಿಂದಲು ನಾನು ನಿನಗೆ ಯಥಾರ್ಥನಾಗಿಯೂ, ಉತ್ತಮನಾಗಿಯೂ ಇದ್ದದ್ದರಿಂದಾದ ಪ್ರಯೋಜನವೇನು? ಕೆಟ್ಟ ಮಗನನ್ನು ಪುನಃ ಸೇರಿಸಿಕೊಳ್ಳುವದರ ಮೂಲಕ ಪಾಪಮಾಡಲು ಲೈಸನ್ಸ್‌ಕೊಟ್ಟಿಯಾ? ನಿನ್ನ ಆಸ್ತಿಯನ್ನು ಮನಬಂದಂತೆ ಹಾಳುಮಾಡಲು ಸ್ಥಳಕೊಡುವಿಯಾ? ಚಿಕ್ಕ ಪ್ರಾಯದಿಂದ ಪರಿಶುದ್ಧರಾಗಿ ಜೀವಿಸುವದು ಮುಟ್ಠಾಳುತನವಾ? ಯೌವನ ಪ್ರಾಯದಲ್ಲಿ ಮನಸ್ಸು ಶರೀರ ಬಯಸಿದಂತೆ ಜೀವಿಸಿ, ಮುಪ್ಪಿನಲ್ಲಿ ಸಾಯುವಾಗ ದೇವರ ಬಳಿ ಹೋಗೋಣ ಎಂದು ಅನೇಕರು ಚಿಂತಿಸುವರಲ್ಲವೇ? ನೀನು ಪ್ರೀತಿಸ್ವರೂಪಿಯಾದರೂ ನಿನ್ನ ನೀತಿ ನ್ಯಾಯಗಳೆಲ್ಲಿ? ಎಂದು ಯೋಚಿಸಿರಬಹುದು ಕೆಟ್ಟಮಗನ ಸಾಮ್ಯ ಓದಿದ ಅನೇಕರ ಮನಸ್ಸಿನಲ್ಲಿ ಇಂದೂ ಇದೇ ರೀತಿಯ ಪ್ರಶ್ನೆ ಏಳುವದು.

ಆಗ ತಂದೆ ಇಬ್ಬರು ಮಕ್ಕಳಿಗೂ ನ್ಯಾಯದೊರಕುವಂತೆ, "ಮಗನೇ, ನಾನು ಮತ್ತೊಮ್ಮೆ ಆಸ್ತಿಯನ್ನು ಪಾಲು ಮಾಡುವದಿಲ್ಲ ನೀನು ಯಾವಾಗಲೂ ನನ್ನೊಂದಿಗಿರುವಿ ನನ್ನದೆಲ್ಲಾ ನಿನ್ನದೇ ಆಗಿರುವದು" ಎಂದು ಹೇಳಿದನು. ಆತ್ಮೀಕ ಅರ್ಥದಲ್ಲಿ ಹೇಳುವದಾದರೆ, ನಾನು ಯಾವಾಗಲೂ ನಿನ್ನೊಂದಿಗಿರುವೆನು, ನನ್ನ ಸಮ್ಮುಖ, ನನ್ನ ಪ್ರಸನ್ನತೆ, ನನ್ನ ಮಹಿಮೆ, ನನ್ನ ಕೃಪೆ, ನನ್ನ ಆಶೀರ್ವಾದ, ನನಗಿರುವದೆಲ್ಲಾ ನಿನ್ನದಾಗಿರುವದು" ಎಂದು ಅಂದು ಇದ್ದ ಫರಿಸಾಯರಿಗೆ ಸದ್ದುಕಾಯರಿಗೆ, ತಮ್ಮ ತಪ್ಪುಗಳನ್ನು ಬಿಟ್ಟು ಕರ್ತನ ಬಳಿಗೆ ಹಿಂದಿರುಗಲು ಇಷ್ಟವಿಲ್ಲವಾಗಿತ್ತು, ದೇವಕೃಪೆ ಆಶೀರ್ವಾದ ಪಡೆಯುವದು ಬೇಡವಾಗಿತ್ತು.

ದೇವಮಕ್ಕಳೇ, ಒಮ್ಮೆ ಮೇಲಿನ ಸಾಮ್ಯ ದೇವರ ವಾಕ್ಯಗಳ ಬೆಳಕಿನಲ್ಲಿ ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ ಎಲ್ಲಾ ಹಿಂಜಾರುವಿಕೆಯಿಂದ ಹೊರಗೆ ಬಂದು, ದೇವರು ನಮಗಾಗಿ ಇಟ್ಟಿರುವ ಆಶೀರ್ವಾದಗಳನ್ನು ನಮ್ಮದಾಗಿಸಿಕೊಳ್ಳೋಣ.

ನೆನಪಿಗೆ: **'ಈ ನನ್ನ ಮಗನು ಸತ್ತವನಾಗಿದ್ದನು, ತಿರುಗಿ ಬದುಕಿ ಬಂದನು; ಪೋಲಿ ಹೋಗಿದ್ದನು, ಸಿಕ್ಕಿದನು ಎಂದು ಹೇಳಿದನು' (ಲೂಕ 15:24).**

## ಯೋಗ್ಯನಲ್ಲ!

ಬೆಳಿಗ್ಗೆ : ಅರಣ್ಯ 28,29,30
ಸಂಜೆ : ಮಾರ್ಕ 8:24–38

**'ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು' (ಲೂಕ 15:18,19).**

ಸಂಬಂಧಗಳಲ್ಲಿ ಮಧುರವಾದ ಸಂಬಂಧವೆಂದರೆ, 'ತಂದೆಮಗುವಿನ' ಸಂಬಂಧ ತಂದೆಗೂ ಕಿರಿಯ ಮಗನಿಗೂ ಇದ್ದದರಿಂದ, ಹಕ್ಕಿನಿಂದ ಬಾಧ್ಯತೆಯಿಂದ ತಂದೆಯ ಆಸ್ತಿಯಲ್ಲಿ ತನ್ನ ಭಾಗವನ್ನು ಕೊಡಬೇಕೆಂದು ಕೇಳಿದನು.

ಇಸ್ರಾಯೇಲ್ಯರಲ್ಲಿ ಆಸ್ತಿಭಾಗ ಮಾಡಲು ಒಂದು ಕಾನೂನು ಇರುವದು, ಒಂದು ಕುಟುಂಬದಲ್ಲಿ ಹಿರಿಯಮಗನಿಗೆ ಯಾವಾಗಲೂ ಜ್ಯೇಷ್ಠ ಭಾಗವಿರುವದು ಹಾಗೆಂದರೆ, ಅರ್ಥವೇನು? ಒಬ್ಬ ತಂದೆಗೆ ಇಬ್ಬರು ಮಕ್ಕಳಿರುವದಾದರೆ, ಆಸ್ತಿ ಭಾಗ ಮಾಡುವಾಗ ಆಸ್ತಿಯನ್ನು ಮೂರುಭಾಗ ಮಾಡುವರು ಅದರಲ್ಲಿ ಎರಡು ಭಾಗವನ್ನು ಹಿರಿಯ ಮಗನಿಗೆ ಕೊಡುವರು ಇದನ್ನು ಜ್ಯೇಷ್ಠಪುತ್ರ ಭಾಗವೆಂದು ಹೇಳುವರು. ಒಂದು ಭಾಗ ಕಿರಿಯವನಿಗೆ ಸೇರುವದು ಒಂದು ವೇಳೆ ತಂದೆಗೆ ನಾಲ್ಕು ಮಕ್ಕಳಿರುವದಾದರೆ, ಆಸ್ತಿಯನ್ನು ಐದು ಭಾಗ ಮಾಡಿ ಎರಡು ಭಾಗವನ್ನು ಹಿರಿಯ ಮಗನಿಗೆ ಕೊಟ್ಟು ಉಳಿದ ಮೂರು ಭಾಗವನ್ನೂ ಬೇರೆ ಮಕ್ಕಳಿಗೆ ಒಂದೊಂದರಂತೆ ಸಮವಾಗಿ ಹಂಚಬೇಕು.

ಸತ್ಯವೇದದಲ್ಲಿ ಹೇಳುವಂತೆ, ಹಿರಿಯ ಮಗನಿಗೆ ಎರಡು ಭಾಗ, ಕಿರಿಯವನಿಗೆ ಒಂದು ಭಾಗವಿದ್ದರೂ, ಕಿರಿಯವನು ಆ ಒಂದು ಭಾಗದ ಆಸ್ತಿಯನ್ನು ಪ್ರಾಪಂಚಿಕವಾದ ಉಲ್ಲಾಸಗಳನ್ನು ಅನುಭವಿಸಲು ಉಪಯೋಗಿಸಿದನು, ಮನಸ್ಸು ಶರೀರ ಬಯಸಿದಂತೆ ನಡೆದನು. ವಿಶೇಷವಾಗಿ ತನ್ನ ಶರೀರಕ್ಕೆ ವಿರೋಧವಾಗಿ ಅವನು ಪಾಪಮಾಡಿದನು, ತನ್ನ ಶರೀರದಲ್ಲಿ ತಂಗಿದ್ದ ಪವಿತ್ರಾತ್ಮನಿಗೆ ವಿರೋಧವಾಗಿ ಪಾಪಮಾಡಿದನು. ಅಪೊ.ಪೌಲನು ಹೇಳುತ್ತಾನೆ–"ಜಾರತ್ವಕ್ಕೆ ದೂರವಾಗಿ ಓಡಿ ಹೋಗಿರಿ, ಮನುಷ್ಯರು ಮಾಡುವ ಇತರ ಪಾಪಕೃತ್ಯಗಳು, ದೇಹಕ್ಕೆ ಹೊರಗಾಗಿವೆ, ಆದರೆ ಜಾರತ್ವ ಮಾಡುವವನು ತನ್ನ ದೇಹಕ್ಕೆ ಹಾನಿಕರವಾದ ಪಾಪವನ್ನು ಮಾಡುತ್ತಾನೆ" ಎಂದು (1ಕೊರಿ 6:18) ಆದಿ ಅಪೊಸ್ತಲರು ಏನು ತೀರ್ಮಾನಿಸಿದ್ದರು? "ವಿಗ್ರಹಕ್ಕೆ ನೈವೇದ್ಯ ಮಾಡಿದ್ದನ್ನೂ, ರಕ್ತವನ್ನು ಕುತ್ತಿಗೆ ಹಿಸುಕಿ ಕೊಂದದ್ದನ್ನೂ ಹಾದರವನ್ನೂ ವಿಸರ್ಜಿಸುವದು ಅವಶ್ಯವಾಗಿದೆ" ಎಂದು (ಅ.ಕೃ 15:28). ದಾನಿಯೇಲನು ಬ್ಯಾಬಿಲೋನ್ ದೇಶಕ್ಕೆ ಹೋಗುವ ಮೊದಲು ತಾನು ಅಶುದ್ಧನಾಗಲಾರೆ ಎಂಬ ದೃಢನಿರ್ಧಾರವನ್ನು ಮಾಡಿದ್ದನು.

ದೇವಮಕ್ಕಳೇ, ಕ್ರಿಸ್ತನು ನಿಮ್ಮೊಳಗೆ ವಾಸವಾಗಿರುವನು ಕ್ರಿಸ್ತನು ನಿಮ್ಮಲ್ಲಿದ್ದು ತನ್ನ ಪ್ರಭಾವದ ನಿರೀಕ್ಷೆಗೆ ಆಧಾರನಾಗಿರುವನು (ಕೊಲೊ 1:27) ಪವಿತ್ರಾತ್ಮ ನಿಮ್ಮೊಳಗೆ ವಾಸಿಸುವನು (1ಪೇತ್ರ 4:14) ಆದ್ದರಿಂದ ನಿಮ್ಮ ಶರೀರವನ್ನು ಎಷ್ಟೋ ಪರಿಶುದ್ಧವಾಗಿಟ್ಟುಕೊಳ್ಳಬೇಕು. ನೀವು ಎಂದಿಗೂ ಅಶುದ್ಧರಾಗಬಾರದು.

ನೆನಪಿಗೆ: **'ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಗಳಲ್ಲಿ ನಮಗುಂಟು' (2ಕೊರಿಂ 4:7).**

## ಎಲ್ಲವೂ ಇಸಾಕನಿಗೆ!

ಬೆಳಗ್ಗೆ : ಅರಣ್ಯ 31,32,33
ಸಂಜೆ : ಮಾರ್ಕ 9:1-29

**'ಅಬ್ರಹಾಮನು ತನಗಿದ್ದ ಆಸ್ತಿಯನ್ನೆಲ್ಲಾ ಇಸಾಕನಿಗೆ ಕೊಟ್ಟನು' (ಆದಿ 25:5).**

ಆ ಪ್ರೀತಿಯುಳ್ಳ ತಂದೆ ಹಿರಿಯ ಮಗನನ್ನು ನೋಡಿ "ಮಗನೇ ನೀನು ಯಾವಾಗಲೂ ನನ್ನೊಂದಿಗಿರುವಿ ನನ್ನದೆಲ್ಲವೂ ನಿನ್ನದೇ ಆಗಿದೆ" ಎಂದು ಹೇಳುವಂತೆ, ಅಬ್ರಹಾಮ ತನ್ನ ಮಗನಾದ ಇಸಾಕನಿಗೆ ಹೇಳುವಂತೆ ಇರುವದು.

ಅಬ್ರಹಾಮನಿಗೆ ಮೂವರು ಹೆಂಡತಿಯರೂ, ಎಂಟು ಮಂದಿ ಮಕ್ಕಳೂ ಇದ್ದರು ಅವನಿಗೆ ಹೆಣ್ಣುಮಕ್ಕಳು ಇರಲಿಲ್ಲ ಅವನ ಹೆಂಡತಿಯಾಗಿದ್ದ ದಾಸಿಯಾದ ಹಾಗರಳನ್ನೂ ಇಷ್ಮಾಯೇಲನನ್ನೂ ಕಳುಹಿಸಿಬಿಟ್ಟಾಗ, ಒಂದು ತಿತ್ತಿ ನೀರನ್ನು ಕೆಲವು ರೊಟ್ಟಿಗಳನ್ನು ಕೊಟ್ಟನು ಅದುವೇ ಅವರ ಭಾಗ, ಅವನ ಮೂರನೆಯ ಹೆಂಡತಿ ಕೆಟೂರಳು ಅಬ್ರಹಾಮನಿಗೆ ಆರು ಮಕ್ಕಳನ್ನು ಹೆತ್ತಳು ಅಬ್ರಹಾಮನು ಜೀವದಿಂದಿರುವಾಗಲೇ, ಇವಳಿಗೂ ಇವಳ ಮಕ್ಕಳಿಗೂ ಕೆಲವು ಸೊತ್ತುಗಳನ್ನು ದಾನಮಾಡಿ ಪೂರ್ವದಿಕ್ಕಿನಲ್ಲಿರುವ ಕೆದೆಮ್ ದೇಶಕ್ಕೆ ಕಳುಹಿಸಿಬಿಟ್ಟನು. ಆ ಮಕ್ಕಳು ಅಬ್ರಹಾಮನು ಕೊಟ್ಟ ಬಹುಮಾನಗಳಿಂದಲೇ ತೃಪ್ತಿ ಹೊಂದಿದರು ಅಪ್ಪಾ ನಾವು ನಿನ್ನೊಂದಿಗೆ ಇರಲು ಬಯಸುವೆವು. ನಿನ್ನ ಪ್ರೀತಿ ನಮಗೆ ಬೇಕು ಎಂದು ಹೇಳಲಿಲ್ಲ, ತಂದೆಯಾದ ಅಬ್ರಹಾಮನಿಗಿಂತಲೂ ಆ ಬಹುಮಾನಗಳೇ ಅವರಿಗೆ ದೊಡ್ಡದಾಗಿತ್ತು.

ತಂದೆಯ ಮನೆಗೆ ಹಿಂದಿರುಗಿ ಬಂದ ಕಿರಿಯ ಮಗನು ತಂದೆಯು ಕೊಟ್ಟ ಉಂಗುರ ಶ್ರೇಷ್ಠ ವಸ್ತ್ರಗಳು ಪಾದರಕ್ಷೆಗಳು ಇವುಗಳಲ್ಲೇ ತೃಪ್ತಿಹೊಂದಿದನು ಆದರೆ ಹಿರಿಯ ಮಗನಾದರೋ, ತಂದೆಯನ್ನೂ, ಆತನ ಪ್ರೀತಿಯನ್ನೂ, ಆತನಿಗಿದ್ದದ್ದೆಲ್ಲವನ್ನೂ ಅಂಗೀಕರಿಸಿಕೊಂಡನು. ನೀವು ಯಾರಂತಿರುವಿರಿ? ಎಂದಿಗೂ ಉಡುಗೊರೆ, ಬಹುಮಾನಗಳಲ್ಲೇ ತೃಪ್ತಿ ಹೊಂದದಿರಿ, ತಲಾಂತುಗಳಾದರೂ ಸರಿಯೇ, ಆತ್ಮನ ವರಗಳಾದರೂ ಸರಿಯೇ ಅವು ಬಹುಮಾನಗಳೇ, ಆದರೆ ಅವುಗಳನ್ನು ಕೊಡುವ ಕರ್ತನೋ ಅಮೂಲ್ಯವಾದಾತನು. ಆತನಿಗೆ ಸರಿಸಮಾನವಾದದ್ದು ಒಂದೂ ಇಲ್ಲ ಆತನಿಗೆ ಸಮಾನವಾದದ್ದು ಸಿಗುವದಿಲ್ಲ.

ಹಳೆಯ ಒಡಂಬಡಿಕೆಯಲ್ಲಿ ಅಬ್ರಹಾಮನು ತನ್ನದೆಲ್ಲವನ್ನು ಇಸಾಕನಿಗೆ ಕೊಟ್ಟನು, ಇಸಾಕ ಅಂದರೆ "ಮುಗುಳ್ನಗೆ" ಎಂದು ಅರ್ಥ ಅಬ್ರಹಾಮನು ಅವನನ್ನು ಬಲಿಕೊಡಲು ಸಿದ್ಧನಾದಾಗಲೂ, ಪ್ರತ್ಯುತ್ತರ ನೀಡಲಿಲ್ಲ, ಚಿಂತಿಸಲಿಲ್ಲ, ತಂದೆಯ ಮೇಲೂ, ಕರ್ತನ ಮೇಲೂ ನಂಬಿಕೆಯುಳ್ಳವನಾಗಿದ್ದನು. ಆದ್ದರಿಂದಲೇ ಅಬ್ರಹಾಮನು ತನ್ನದೆಲ್ಲವನ್ನೂ ಇಸಾಕನಿಗೆ ಕೊಟ್ಟನು.

ದೇವಮಕ್ಕಳೇ, ನೀವು ಕರ್ತನನ್ನು ಪ್ರೀತಿಸಿ ಆತನಿಗೆ ವಿಧೇಯರಾಗಿ ನಡೆದುಕೊಳ್ಳುವಿರಾದರೆ, ಆತನ ಸ್ವಾಸ್ತ್ಯಕ್ಕೆ ಬಾಧ್ಯರಾಗುವಿರಿ.

ನೆನಪಿಗೆ: **'ನಾವು ಆತನೊಡನೆ ಸತ್ತಿದ್ದರೆ, ಆತನೊಡನೆ ಜೀವಿಸುವೆವು, ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು' (2ತಿಮೊ 2:11,12).**

## ವಾಗ್ದಾನದ ಮಕ್ಕಳು!



**'ಸಹೋದರರೇ ನಾವು ಇಸಾಕನಂತೆ ವಾಗ್ದಾನದ ಫಲವಾಗಿ ಹುಟ್ಟಿದ ಮಕ್ಕಳಾಗಿದ್ದೇವೆ' (ಗಲಾ 4:28).**

ಸಾಧಾರಣವಾದ ಮಕ್ಕಳೂ ಇರುವರು, ವಾಗ್ದಾನದ ಮಕ್ಕಳೂ ಇರುವರು, ಶಾರೀರಿಕವಾಗಿ ಹುಟ್ಟಿದ ಮಕ್ಕಳೂ ಇರುವರು, ಆತ್ಮೀಕವಾಗಿ ಹುಟ್ಟಿದ ಮಕ್ಕಳೂ ಇರುವರು. ಇಲ್ಲಿ ಅಪೊ. ಪೌಲನು ಗಲಾತ್ಯ ಸಭೆಯವರಿಗೆ ಬರೆಯುವಾಗ, "ನಾವು ದಾಸಿಯರಿಗೆ ಹುಟ್ಟಿದ ಮಕ್ಕಳೇ, ಉಪ ಪತ್ನಿಯರಿಗೆ ಹುಟ್ಟಿದ ಮಕ್ಕಳೇ ಅಲ್ಲ ಕರ್ತನ ವಾಗ್ದಾನದ ಫಲವಾಗಿ ಹುಟ್ಟಿದವರೂ, ಬಾಧ್ಯಸ್ಥರೂ ಆಗಿರುವೆವು" ಎಂದು ಸೂಚಿಸುತ್ತಾನೆ.

ಕರ್ತನ ಎಲ್ಲಾ ಆಶೀರ್ವಾದಗಳೂ, ಅದು ಲೌಕೀಕವಾದವುಗಳಾದರೂ, ಆತ್ಮೀಕವಾದವುಗಳಾದರೂ ಸರಿ, ಕ್ರಿಸ್ತನಲ್ಲಿ ಹುಟ್ಟುವದರಲ್ಲಿ ಪ್ರಾರಂಭವಾಗುವದು. ಯೇಸುಕ್ರಿಸ್ತನ ರಕ್ತದಿಂದ ತೊಳೆಯಲ್ಪಟ್ಟು, ನಂಬಿಕೆಯುಳ್ಳವರಾಗಿ ಆತನನ್ನು ಅಂಗೀಕರಿಸಿಕೊಳ್ಳುವಾಗ, ಮಕ್ಕಳು ಎಂಬ ಅಧಿಕಾರವನ್ನು ಕರ್ತನು ನಿಮಗೆ ಅನುಗ್ರಹಿಸುವನು, ಆಗ ನೀವು ಅನಾಥರಲ್ಲ, ದೆಸೆಗೆಟ್ಟವರಲ್ಲ, ಕರ್ತನೇ ನನಗೆ ತಾಯಿಯೂ, ತಂದೆಯೂ ಆಗಿರುವನು ಎಂಬ ಅಧಿಕಾರದಿಂದ ಹೇಳಲು ಸಾಧ್ಯ (ಗಲಾ 4:6, ಯೆಶಾ 49:15). ನೀವು ದೇವರಿಗೆ ಬಾಧ್ಯಸ್ಥರೂ, ಕ್ರಿಸ್ತನೊಂದಿಗೆ ಬಾಧ್ಯರೂ ಆಗಿರುವಿರಿ (ರೋಮಾ 8:17). ನೀವು ಆತನ ಬಾಧ್ಯಸ್ಥ ಮಕ್ಕಳಾಗಿರುವದರಿಂದ, ಸರಿಯಾದ ಸ್ಥಳಗಳಲ್ಲಿ ನಿಮಗೆ ಪಾಲೂ ರಮಣೀಯವಾದ ಸ್ವಾಸ್ತ್ಯವೂ ಇರುವದು (ಕೀರ್ತ 16:6). ಹೊಸ ಒಡಂಬಡಿಕೆಯಲ್ಲಿ ನಾವು ಅನ್ಯಜನಾಂಗದವರಾಗಿದ್ದರೂ ಕ್ರಿಸ್ತನ ವಾಗ್ದಾನಗಳಿಗೆ ಅನ್ಯರಾಗಿದ್ದರೂ, ಸ್ವಭಾವದಲ್ಲಿ ಕಾಡೆಣ್ಣೇ ಮರಗಳಾಗಿದ್ದಾಗಲೂ ಕರ್ತನು ನಮ್ಮನ್ನು ಪುತ್ರರನ್ನಾಗಿ, ಪುತ್ರಿಯರನ್ನಾಗಿ ಅಂಗೀಕರಿಸಿಕೊಂಡು ಮೂರು ವಿಧದಲ್ಲಿ ನಮ್ಮನ್ನು ಆಶೀರ್ವಾದಿಸಿರುವನು ಅಬ್ರಹಾಮನಲ್ಲಿ, ದಾವೀದನಲ್ಲಿ, ಕ್ರಿಸ್ತನಲ್ಲಿ ಆಶೀರ್ವಾದಿಸಲ್ಪಟ್ಟಿರುವೆವು

ಹಳೆಯ ಒಡಂಬಡಿಕೆಯು ಬರವಣಿಗೆಯ ಪ್ರಕಾರವಿದ್ದಿತು ಆದರೆ ಹೊಸ ಒಡಂಬಡಿಕೆ ಆತ್ಮೀಕ ರೀತಿಯಾಗಿರುವದು ಅಬ್ರಹಾಮನಿಗೆ ಹಾಗರಳನ್ನು ಉಪಪತ್ನಿಯನ್ನಾಗಿ ಸಾರಳು ಕೊಟ್ಟಿದ್ದರೂ, ಸತ್ಯವೇದ ಅವಳನ್ನು ಅವಳ ಸಂತತಿಯನ್ನು ಬಾಧ್ಯಸ್ಥರನ್ನಾಗಿ ಅಂಗೀಕರಿಸಿಲ್ಲ, ಅಬ್ರಹಾಮನ ಹೆಂಡತಿಯಾದ ಹಾಗರಳೆಂದು ಎಲ್ಲೂ ಕರೆಯಲ್ಪಟ್ಟಿಲ್ಲ "ಐಗುಪ್ತದೇಶದವಳಾದ ದಾಸಿ" ಎಂದೇ ಸತ್ಯವೇದ ಹೇಳುತ್ತದೆ ಇಷ್ಮಾಯೇಲನಿಗೆ ಸಿಕ್ಕಿದ್ದೆಲ್ಲಾ ಒಂದು ತಿತ್ತಿ ನೀರು, ಕೆಲವು ರೊಟ್ಟಿಗಳಷ್ಟೇ.

ದೇವಮಕ್ಕಳೇ, ನೀವೂ ನಾವು ಇಷ್ಮಾಯೇಲ್ ಅಲ್ಲ, ಇಸಾಕನಂತೆ ವಾಗ್ದಾನದ ಮಕ್ಕಳೆಂದು, ತಲೆ ಎತ್ತಿ ಹೇಳಬೇಕೆಂದರೆ, ಕ್ರಿಸ್ತನನ್ನು ಪೂರ್ಣಹೃದಯದಿಂದ ಅಂಗೀಕರಿಸಿಕೊಂಡು ಆತನಿಗೆ ವಿಧೇಯರಾಗಿ ಯೋಗ್ಯರಾಗಿ ನಡೆಯುವವರಾಗಿರಬೇಕು.

ನೆನಪಿಗೆ: **'ನೀವು ತಿರುಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ' (ರೋಮಾ 8:15).**

| ಮಾರ್ಚ್ 06 | **ಹೊಸದಾಗಿ ಹುಟ್ಟದಿದ್ದರೆ!** | ಬೆಳಿಗ್ಗೆ : ಧರ್ಮೋ 1,2<br>ಸಂಜೆ : ಮಾರ್ಕ 10:1-31 |
|---|---|---|

**'ಒಬ್ಬನು ಹೊಸದಾಗಿ ಹುಟ್ಟದಿದ್ದರೆ; ದೇವರ ರಾಜ್ಯವನ್ನು ಕಾಣಲಾರನು' (ಯೋಹಾ 3:3).**

ಪ್ರಕೃತಿ ಸಹಜವಾಗಿ ಮೊದಲನೆಯದಾಗಿ ನಾವು ತಾಯಿಯ ಗರ್ಭದಲ್ಲಿ ಜನಿಸುತ್ತೇವೆ, ಈ ಪ್ರಪಂಚದಲ್ಲಿನ ಒಂದು ಕುಟುಂಬಕ್ಕೆ ಸೇರಿದವರಾಗುತ್ತೇವೆ,

ಎರಡನೆಯ ಹುಟ್ಟು ಪರಲೋಕದ ಕುಟುಂಬದಲ್ಲಿ ಹುಟ್ಟುತ್ತೇವೆ,

ಮೂರನೆಯ ಹುಟ್ಟು ನೀರಿನಿಂದ ಹುಟ್ಟು ಹುಟ್ಟುವದಾಗಿದೆ ಮುಳುಗಿ ದೀಕ್ಷಾಸ್ನಾನ ತೆಗೆದುಕೊಳ್ಳುವಾಗ ಪರಲೋಕವು ತೆರೆಯಲ್ಪಡುವದು, ಯೇಸುಕ್ರಿಸ್ತನು ದೀಕ್ಷಾಸ್ನಾನ ತೆಗೆದುಕೊಂಡಾಗ ಪರಲೋಕ ತೆರೆಯಲ್ಪಟ್ಟಿತು ಪರಲೋಕದ ತಂದೆ "ಇವನು ನನ್ನ ಮಗನು, ಇವನನ್ನು ಮೆಚ್ಚಿದ್ದೇನೆ" ಎಂದು ಆಕಾಶ ವಾಣಿಯಾಯಿತು.

ನಾಲ್ಕನೆಯ ಹುಟ್ಟು ಪವಿತ್ರಾತ್ಮನಿಂದಲೂ, ಅಗ್ನಿಯಿಂದಲೂ ಹುಟ್ಟುವದನ್ನು ಸೂಚಿಸುವದು, ಮಾತ್ರವಲ್ಲ ನೀವು ಆತ್ಮನಿಂದಲೂ ನಡೆಸಲ್ಪಡಬೇಕು. ಯೇಸುಕ್ರಿಸ್ತನು ಹೇಳಿರುವನು "ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ; ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ" ಅಂದನು (ಯೋಹಾ 3:8).

ಐದನೆಯದು, ಒಬ್ಬನು ಸಭೆಯಲ್ಲಿ ಹುಟ್ಟಬೇಕು, ಸಭೆಯವರೊಂದಿಗೆ ಅನ್ಯೋನ್ಯತೆ ಉಳ್ಳವನಾಗಿರಬೇಕು ಬೋಧಕರು, ಸಭೆಯವರು ಒಬ್ಬನ ಆತ್ಮೀಕ ಬೆಳವಣಿಗೆಗೆ ಸಹಾಯಕರಾಗಿರುವರು.

ಆರನೆಯದಾಗಿ, ಕೀರ್ತನೆ 87:5 ರಲ್ಲಿ ಚೀಯೋನಿನಲ್ಲಿ ಹುಟ್ಟಿದವರೆಂದು ಓದುತ್ತೇವೆ, ಚೀಯೋನಿನಲ್ಲಿ ಹುಟ್ಟಿದವರೆಂಬುದು ಕರ್ತನ ಸೇವೆ ಮಾಡುವವರು ಕರ್ತನಿಗಾಗಿ ಮೀಸಲಾದವರನ್ನು ಸೂಚಿಸುವದು, ಕರ್ತನ ನಾಮವನ್ನು ಧರಿಸಿದವರು.

ಏಳನೆಯದಾಗಿ, ವಾಕ್ಯದಿಂದ ಹುಟ್ಟುವದಾಗಿದೆ ದೇವರಿಗೆ ತಕ್ಕದ್ದಾದ ಜೀವಿತ ನಡೆಸುತ್ತಿರುವೆನಾ? ವಾಕ್ಯದಂತೆ ಪರಿಶುದ್ಧವಾದ ಜೀವನ ನಡೆಸುತ್ತಿರುವೆನಾ? ಎಂಬದನ್ನು ಪರೀಕ್ಷಿಸಿ ನೋಡಿರಿ.

ದೇವಮಕ್ಕಳೇ, ಕ್ರೈಸ್ತ ಮಾರ್ಗದಲ್ಲಿ ಈ ಏಳು ಜನನದ ಮಾರ್ಗವಾಗಿ, ನೀವು ಪೂರ್ಣತೆಯನ್ನು ಪಡೆದುಕೊಳ್ಳಬಹುದು ಆಗ ಕರ್ತನು ನಿಮ್ಮನ್ನು ನೋಡಿ, "ನನ್ನ ಮಗುವೇ, ನನಗಿರುವದೆಲ್ಲಾ ನಿನ್ನದಾಗಿರುವದು; ನಾನು ನಿನ್ನವನಾಗಿರುವೆನು" ಎಂದು ಹೇಳುವನು.

ನೆನಪಿಗೆ: **'ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ದೀಕ್ಷಾಸ್ನಾನದ ಮೂಲಕವಾಗಿಯೇ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು' (ತೀತ 3:5).**

**ಮಾರ್ಚ್ 07**

# ಒಬ್ಬನೇ ಮಗನು!

ಬೆಳಿಗ್ಗೆ : ಧರ್ಮೋ 3,4
ಸಂಜೆ : ಮಾರ್ಕ 10:32-52

**'ದೇವರು, ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಕೊಟ್ಟನು' (ಯೋಹಾ 3:16).**

ಮಕ್ಕಳಿಗೆ ತಂದೆಂತಾಯಿಗಳು ಆಸ್ತಿಯನ್ನು ಕೂಡಿಸಿಡುವಂತೆ, ಕರ್ತನು ನಿಮಗೆ ಪರಲೋಕದಲ್ಲಿ ಸಂಪತ್ತನ್ನು ಸೇರಿಸಿಟ್ಟಿರುವನು (2ಕೊರಿ 12:14), ಆದ್ದರಿಂದ ನೀವು ದೇವರಿಗೆ ಮೆಚ್ಚಿಕೆಯಾಗಿ, ಬೆಳಕಿನ ಮಕ್ಕಳಾಗಿ ನಡೆದುಕೊಳ್ಳಿರಿ (ಎಫೆ 5:9) ವಿಶ್ವಾಸದ ಅರಿಕೆಯಾಗಿ, ನಾನು ದೇವರ ನಿಷ್ಕಳಂಕವಾದ ಮಗು ವಕ್ರಬುದ್ಧಿಯುಳ್ಳ ಮೂರ್ಖಜಾತಿ ಮಧ್ಯದಲ್ಲಿ ಯಥಾರ್ಥವಾಗಿ ನಡೆದುಕೊಳ್ಳುವೆನು (ಫಿಲಿ 2:15), ಕ್ರಿಸ್ತನಿಗಿರುವದೆಲ್ಲಾ ನನ್ನದಾಗಿರುವದು, ನಾನು ಆತನವನು/ನವಳು, ದೇವರ ಮಗುವೆಂದು ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನನ್ನ ಮೇಲೆ ಇಟ್ಟಿದ್ದಾನೆ' (1ಯೋಹಾ 3:1) ಎಂದು ಹೇಳಿರಿ.

ಸುಮಾರು 400 ವರುಷಗಳ ಹಿಂದೆ, ಇಂಗ್ಲೆಂಡ್ ದೇಶದ ರಾಜ ಕುಟುಂಬದಲ್ಲಿ ವಿಕ್ಟೋರಿಯಾ ಎಂಬ ಹೆಣ್ಣು ಮಗಳು ಜನಿಸಿದಳು ಹೆತ್ತವರಿಗೆ ಅವಳು ಒಬ್ಬಳೇ ಮಗಳು, ಅವಳು ಏಳನೆ ತರಗತಿಯಲ್ಲಿ ಓದುತ್ತಿದ್ದಾಗ ಇಂಗ್ಲೆಂಡ್ ದೇಶದ ಚರಿತ್ರೆಯ ಪುಸ್ತಕವನ್ನು ಓದಿ, ತಾನೇ ಮುಂದೆ ಅರಸು ಪಟ್ಟಕ್ಕೆ ಬರುವ ಮಹಾರಾಣಿ ಎಂದು ತಿಳಿದಳು, ತನಗೆ ಆಳ್ವಿಕೆಯೂ, ಅಧಿಕಾರವೂ ಕೊಡಲ್ಪಟ್ಟಿರುವದು ಎಂದು ನೆನಸಿ ಜವಾಬ್ದಾರಿಯುಳ್ಳವಳಾಗಿ ದೇವಭಯಭಕ್ತಿಯಿಂದಲೂ, ತಾಳ್ಮೆಯಿಂದಲೂ, ಆಳ್ವಿಕೆ ನಡೆಸಲು ಬೇಕಾದ ಸಾಮರ್ಥ್ಯವನ್ನು ಪಡೆಯಲು ಪ್ರಯತ್ನಿಸಿದಳು ಬೆಳೆದು ದೊಡ್ಡವಳಾಗಿ, ಪಟ್ಟಕ್ಕೆ ಬಂದ ಸಂಧರ್ಭದಲ್ಲಿ ತನಗೆ ಧರಿಸಲ್ಪಟ್ಟ ಕಿರೀಟವನ್ನು ದೇವಾಲಯದಲ್ಲಿ ಕರ್ತನ ಪಾದದಲ್ಲಿ ಅಂದರೆ ಆಲ್ಟರಿನಲ್ಲಿ ಇಟ್ಟು, "ದೇವರೇ, ನಿನ್ನ ಜ್ಞಾನದಿಂದ ಈ ದೊಡ್ಡ ದೇಶವನ್ನು ಆಳಲು ಬೇಕಾದ ನಿನ್ನ ಕೃಪೆಯನ್ನು ನೀಡು" ಎಂದು ಪ್ರಾರ್ಥಿಸಿದಳು.

ದೇವಮಕ್ಕಳೇ, ಇಂದಿಗೂ, ರಾಜಾಧಿರಾಜನಾದ ದೇವರು, ನಿಮ್ಮನ್ನು ವಾಗ್ದಾನದ ಮಕ್ಕಳೆಂದು ಕರೆಯುವನು. ಮೊದಲನೆಯದಾಗಿ ಮೆಸ್ಸೀಯನಾಗಿ ಕ್ರಿಸ್ತನನ್ನು ನಿಮಗೆ ಕೊಟ್ಟಿರುವನು, ಎರಡನೆಯದಾಗಿ ಪವಿತ್ರಾತ್ಮನನ್ನು ನಿಮಗೆ ನೀಡಿರುವನು, ಮೂರನೆಯದಾಗಿ "ಮಗನೇ ನೀನು ಯಾವಾಗಲೂ ನನ್ನೊಂದಿಗಿರುವಿ ನನ್ನದೆಲ್ಲಾ ನಿನ್ನದೇ ಆಗಿದೇ" ಎಂದು ಹೇಳುವನು, ನನ್ನದೆಲ್ಲಾ ನಿನ್ನದಾಗಿರುವದು ಎಂದು ಹೇಳುವಾಗ ಅದರಲ್ಲಿ ರಕ್ಷಣೆ, ನಿತ್ಯಜೀವ, ಸಂತೋಷ, ಆತ್ಮನ ವರಗಳೆಲ್ಲಾ ಅಡಗಿರುವದು ಮಾತ್ರವಲ್ಲ ಪರಲೋಕದ ಬಿಡಾರಗಳು, ಜಯಮಾಲೆ ಎಲ್ಲವೂ ನಿಮ್ಮದಾಗಿರುವದು ಆ ಬಾಧ್ಯತೆಯನ್ನು ನೀವು ಪಡೆಯಲು ಯೋಗ್ಯವಾದ ಪರಿಶುದ್ಧವಾದ ಜೀವಿತ ಬೇಕು ಹಾಗೆ ಬಾಳುವದು ಅಗತ್ಯವಲ್ಲವೇ?.

ನೆನಪಿಗೆ: **'ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ, ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ' (ಮತ್ತಾ 7:11).**

# ರಕ್ತ ಒಡಂಬಡಿಕೆ!

ಬೆಳಗ್ಗೆ : ಧರ್ಮೋ 5,6,7
ಸಂಜೆ : ಮಾರ್ಕ 11:1–18

**'ಈ ಪಾತ್ರೆಯು ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ; ನೀವು ಇದರಲ್ಲಿ ಪಾನಮಾಡುವಾಗೆಲ್ಲಾ ನನ್ನನ್ನು ನೆನಸಿಕೊಳ್ಳುವದಕ್ಕೋಸ್ಕರ ಪಾನಮಾಡಿರಿ ಅಂದನು' (1ಕೊರಿ 11:25).**

ಎಲ್ಲಾ ಒಡಂಬಡಿಕೆಗಳಲ್ಲಿ ಮೇಲಾದ ಒಡಂಬಡಿಕೆ ಮನುಷ್ಯರಾದ ನಾವು ದೇವರೊಂದಿಗೆ ಮಾಡುವ ಒಡಂಬಡಿಕೆ ಶ್ರೇಷ್ಠವಾದದ್ದು ಅದರಲ್ಲೂ ಅತಿಶ್ರೇಷ್ಠವಾದದ್ದು ರಕ್ತ ಒಡಂಬಡಿಕೆ ಹಳೆಯ ಒಡಂಬಡಿಕೆಯ ಕಾಲದಲ್ಲಿ ದೇವ ಭಕ್ತರೆಲ್ಲರೂ, ಸುನ್ನತಿಯ ಮೂಲಕ ಕರ್ತನೊಂದಿಗೆ ರಕ್ತ ಒಡಂಬಡಿಕೆ ಮಾಡಿದರು. ಗೊಲಿಯಾತನು ಇಸ್ರಾಯೇಲ್ಯರ ಮೇಲೆ ಯುದ್ಧಕ್ಕೆ ಬಂದಾಗ ದಾವೀದನ ಧೈರ್ಯಕ್ಕೆ ಕಾರಣವೇನು? ನಾನು ಸುನ್ನತಿಯ ಮೂಲಕ ಕರ್ತನೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವೆನು ಕರ್ತನು ಒಡಂಬಡಿಕೆಯನ್ನು ಕಾಯುವ ಸತ್ಯವಂತನು ಆದ್ದರಿಂದಲೇ ಆ ಒಡಂಬಡಿಕೆಯ ಮೂಲಕ, ಆತನನು ನನ್ನ ಪಕ್ಷದಲ್ಲಿ ನಿಂತು ಯುದ್ಧಮಾಡಲೇಬೇಕು, ಆದರೆ ಈ ಗೊಲಿಯಾತನೋ, ಸುನ್ನತಿ ಹೀನನಾದ ಅನ್ಯನು, ವಿಗ್ರಹಗಳ ಆರಾಧಕನು, ಅವನು ಜಯಗಳಿಸಲು ಸಾಧ್ಯವಿಲ್ಲ ಎಂಬ ಆಲೋಚನೆಯು ಗೊಲಿಯಾತನನ್ನು ಜಯಿಸಲು ದಾವೀದನಿಗೆ ಸಹಾಯವಾಗಿ ಇತ್ತು.

ಅಬ್ರಹಾಮನು ಹಾಗರಳನ್ನು ಸೇರಿಸಿಕೊಂಡಾಗ, ಅವನಿಗೆ ಸುನ್ನತಿ ಮಾಡಲ್ಪಟ್ಟಿರಲಿಲ್ಲ, ಆದ್ದರಿಂದ ಇಷ್ಮಾಯೇಲನು ಒಡಂಬಡಿಕೆ ಇಲ್ಲದ, ಲೌಕೀಕ ರೀತಿಯಲ್ಲಿ ಹುಟ್ಟಿದವನು, ಆದರೆ ಇಸಾಕನು ಹುಟ್ಟಿದಾಗ, ಅಬ್ರಹಾಮನು ಸುನ್ನತಿಯನ್ನು ಹೊಂದಿದ್ದನು, ಆದ್ದರಿಂದಲೇ ಸಾರಳಲ್ಲಿ ಅಬ್ರಹಾಮನಿಗೆ ಹುಟ್ಟಿದ ಇಸಾಕನು ವಾಗ್ದಾನದ ಸಂತತಿಯೂ, ಆತ್ಮೀಕ ಸಂತತಿಯೂ ಆದನು. ಒಡಂಬಡಿಕೆಗೆ ಮೊದಲು ಹುಟ್ಟಿದ ಇಷ್ಮಾಯೇಲನು ಕರ್ತನು ಹೇಳಿದಂತೆ ದುಷ್ಟನಾಗಿದ್ದನು ಅವನ ಕುರಿತಾಗಿ ಬಂದ ಪ್ರವಾದನೆ ಏನು? "ಅವನು ಎಲ್ಲರ ಮೇಲೆ ಕೈಯೆತ್ತುವನು" ಹಾಗೆಯೇ ಅವನ ಮೇಲೆ ಎಲ್ಲಾರೂ ಕೈಯೆತ್ತುವರು ಎಂಬುದೇ (ಆದಿ 16:12). ಇಷ್ಮಾಯೇಲನ ಸಂತತಿಯವರಿಂದ ಇಂದಿಗೂ ಪ್ರಪಂಚ ಅಲ್ಲಕಲ್ಲೋಲಗೊಂಡಿರುವದು ಇಸ್ಲಾಮಿಯರು ತಮ್ಮೊಳಗೇ ಕಚ್ಚಾಡುತ್ತಿರುವರು.

ದೇವಮಕ್ಕಳೇ, ಇಂದು ಕುರಿ, ದನಗಳ ರಕ್ತದಿಂದಲ್ಲ, ಕ್ರಿಸ್ತನ ಅಮೂಲ್ಯವಾದ ರಕ್ತದಿಂದ ತಂದೆಯೊಡನೆ ಒಡಂಬಡಿಕೆ ಮಾಡುವೆವು ಇಂದು ಕ್ರಿಸ್ತನ ರಕ್ತದ ಕೋಟೆಯೊಳಗಿರುವೆವು, "ಈಗ ನಾವು ಆತನ ರಕ್ತದಿಂದ ನೀತಿವಂತರಾಗಿರಲಾಗಿ ಆತನ ಮೂಲಕ ಬರುವ ಕೋಪಕ್ಕೆ ತಪ್ಪಿಸಿಕೊಳ್ಳುವದು ಇನ್ನೂ ನಿಶ್ಚಯ" (ರೋಮಾ 5:9) ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನ ಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುವದಲ್ಲವೇ? (1ಕೊರಿ 10:16) ಎಂದು ದೇವರ ವಾಕ್ಯ ಹೇಳುವದು.

ನೆನಪಿಗೆ: **'ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನುಂಟು ಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನ ಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆ ಮಾಡಿದನು' (ಕೊಲೊಸ್ಸೆ 1:20).**

## ಇಸಾಕನ ಮನೆ!

ಬೆಳಿಗ್ಗೆ : ಧರ್ಮೋ 8,9,10
ಸಂಜೆ : ಮಾರ್ಕ 11:19-33

**'ಇಸಾಕನು-ನಿನ್ನ ತಮ್ಮನು ಮೋಸದಿಂದ ಬಂದು ನಿನಗಾಗಿ ಬೇಕಾಗಿದ್ದ ಆಶೀರ್ವಾದವನ್ನು ಪಡಕೊಂಡನು ಅಂದನು' (ಆದಿ 27:35).**

ಅಬ್ರಹಾಮನಿಗೆ ಮೂವರು ಹೆಂಡತಿಯರೂ, ಎಂಟು ಮಂದಿ ಮಕ್ಕಳೂ ಇದ್ದರೂ ಸಹಾ, ತನಗಿರುವದೆಲ್ಲವನ್ನೂ ಇಸಾಕನಿಗೆ ಕೊಟ್ಟನು ಕಾರಣ ಇಸಾಕನು ವಾಗ್ದಾನದ ಮಗನಾಗಿದ್ದನು. ಇಸಾಕನಿಗೆ ಒಬ್ಬಳೇ ಹೆಂಡತಿ, ಇಬ್ಬರು ಮಕ್ಕಳು, ಮೊದಲನೆಯವನ ಹೆಸರು "ಏಸಾವ" ಅದಕ್ಕೆ ಕೆಂಪು ಬಣ್ಣವುಳ್ಳವನು ಎಂದು ಅರ್ಥ, ಎರಡನೆಯವನ ಹೆಸರು "ಯಾಕೋಬ" ಅಂದರೆ "ಮೋಸಗಾರ" ಎಂದು ಅರ್ಥ. ಈ ಮಕ್ಕಳು ದೊಡ್ಡವರಾದಾಗ ಏಸಾವನು ಬೇಟೆಯಾಡುವದಲ್ಲಿ ನಿಪುಣನೂ, ಅರಣ್ಯಸಂಚಾರಿಯಾಗಿದ್ದನು. ಯಾಕೋಬನೋ, ಗುಣಶಾಲಿಯೂ, ಗುಡಾರವಾಸಿಯೂ ಆಗಿದ್ದನು.

ಹಿರಿಯಮಗನಿಗೆ ಜ್ಯೇಷ್ಠಪುತ್ರ ಭಾಗ ಉಂಟು ತಂದೆಯ ಮೊದಲ ಆಶೀರ್ವಾದ ಉಂಟು, ಆದರೆ ಯಾಕೋಬನು ಆಶೀರ್ವಾದವಿಲ್ಲದವನಾಗಿ ಇರಲು ಇಷ್ಟ ಪಡಲಿಲ್ಲ, ಅವನ ದಾಹ, ಬಯಕೆಯೆಲ್ಲಾ ಜ್ಯೇಷ್ಠಪುತ್ರ ಭಾಗವನ್ನು ತಂದೆಯ ಆಶೀರ್ವಾದ, ಕರ್ತನ ಆಶೀರ್ವಾದವನ್ನು ಪಡೆದುಕೊಳ್ಳಬೇಕು ಎಂಬುದೇ ಆಗಿತ್ತು. ಇದನ್ನು ಏಸಾವನು ತಿಳಿಯಲಿಲ್ಲ, ಸತ್ಯವೇದ ಹೇಳುತ್ತದೆ "ನಿನಗಿರುವದನ್ನು ಹಿಡಿದುಕೊಂಡಿರು; ನಿನ್ನ ಜಯಮಾಲೆಯನ್ನು ಯಾರೂ ಅಪಹರಿಸಬಾರದು" ಎಂದು (ಪ್ರಕ 3:11). ಏಸಾವನು ಈ ಮೂರು ಆಶೀರ್ವಾದಗಳನ್ನೂ ಕಳೆದುಕೊಂಡನು, ಅವನ ಜೀವಿತದ ಗುರಿಯೆಲ್ಲಾ ಬೇಟೆಯಾಡಬೇಕು, ಜೀವನವನ್ನು ಅನುಭವಿಸಬೇಕು ಅಷ್ಟೇ, ದೇವರ ಕುರಿತಾಗಿ ಬಯಕೆಯಾಗಲಿ ದಾಹವಾಗಲಿ, ಆತ್ಮೀಕ ಕಾರ್ಯಗಳ ಕುರಿತಾಗಿ ಚಿಂತೆಯಾಗಲಿ ಇಲ್ಲ, ಇಸಾಕನಂಥಹ ಧ್ಯಾನ ಪುರುಷನ ಮಗನಾಗಿದ್ದರೂ ಸಹಾ ಒಮ್ಮೆಯಾದರೂ ಏಸಾವನು ಪ್ರಾರ್ಥಿಸಿದ್ದನ್ನು ಎಂದು ಸತ್ಯವೇದದಲ್ಲಿ ಕಂಡುಬರುವದಿಲ್ಲ, ಅವನು ದೇವರನ್ನು ಪ್ರೀತಿಸದೆ ಇದ್ದದರಿಂದ ಕರ್ತನ ಆಶೀರ್ವಾದಕ್ಕೆ ಅನ್ಯನಾಗಿ ಬಿಟ್ಟನು. ಏಸಾವನು ತನಗೆ ಸಿಕ್ಕಿದ್ದಂಥ ಜ್ಯೇಷ್ಠಪುತ್ರ ಭಾಗವನ್ನು ಒಂದು ಹೊತ್ತಿನ ಕೂಳಿಗಾಗಿ ಮಾರಿಕೊಂಡನು.

ದೇವಮಕ್ಕಳೇ, ಪರಲೋಕರಾಜ್ಯಕ್ಕಾಗಿ ತವಕ ಪಡುವಾಗ, ಅದರೊಂದಿಗೆ ಈ ಲೋಕದ ಆಶೀರ್ವಾದಗಳು ಸಿಗುವದೆಂದು ಕರ್ತನು ಹೇಳಿರುವನು, ನಿಮ್ಮ ಮೊದಲ ಆಧ್ಯತೆ, ಕರ್ತನ ಮೇಲೆ ಇರಲಿ ಆತನ ವಾಕ್ಯಗಳ ಮೇಲಿರಲಿ ಆಗ ನಿಮ್ಮ ಅಗತ್ಯತೆಗಳು ಏನೇ ಇರಲಿ ಕರ್ತನು ಅವುಗಳನ್ನು ದಯಪಾಲಿಸುವನು, ಆತ್ಮೀಕ ಆಶೀರ್ವಾದಗಳಿಂದಲೂ ಲೌಕೀಕ ಆಶೀರ್ವಾದಗಳಿಂದಲೂ ನಿಮ್ಮನ್ನು ತುಂಬಿಸುವನು.

ನೆನಪಿಗೆ: **'ಆನಂತರದಲ್ಲಿ ತನ್ನ ತಂದೆಯ ಆಶೀರ್ವಾದವನ್ನು ಬಾಧ್ಯವಾಗಿ ಹೊಂದಬೇಕೆಂದು ಕಣ್ಣೀರು ಸುರಿಸುತ್ತಾ ಬೇಡಿಕೊಂಡರೂ ನಡೆದದ್ದನ್ನು ಇಲ್ಲದ್ದ ಹಾಗೆ ಮಾಡುವದಕ್ಕೆ ಮಾರ್ಗವಿಲ್ಲದೆ ನಿರಾಕರಿಸಲ್ಪಟ್ಟನೆಂದು ಬಲ್ಲಿರಿ' (ಇಬ್ರಿ 12:17).**

## ಯಾಕೋಬನ ಕುಟುಂಬ!



**'ನಿನ್ನ ತಂದೆಯ ಆಶೀರ್ವಾದಗಳು ಆದಿಯಿಂದಿದ್ದ ಪರ್ವತಗಳಿಂದುಂಟಾಗುವ ಮೇಲುಗಳಿಗಿಂತಲೂ ಸದಾಕಾಲವಾಗಿರುವ ಬೆಟ್ಟಗಳಿಂದುಂಟಾಗುವ ಉತ್ತಮ ವಸ್ತುಗಳಿಗಿಂತಲೂ ವಿಶೇಷವಾಗಿವೆ' (ಆದಿ 49:26).**

ಅಬ್ರಹಾನಿಗೆ ಎಂಟು ಮಕ್ಕಳು ಆದರೂ ಎಲ್ಲಾ ಆಶೀರ್ವಾದವು ಇಸಾಕನಿಗೆ ದೊರಕಿತು ಇಸಾಕನಿಗೆ ಇಬ್ಬರು ಮಕ್ಕಳು ಜ್ಯೇಷ್ಠಪುತ್ರ ಭಾಗವೂ, ಎಲ್ಲಾ ಆಶೀರ್ವಾದಗಳೂ ಯಾಕೋಬನಿಗೆ ದೊರಕಿತು ಯಾಕೋಬನಿಗೆ ನಾಲ್ಕು ಮಂದಿ ಹೆಂಡತಿಯರೂ, ಹನ್ನೆರಡು ಗಂಡುಮಕ್ಕಳು, ದೀನಾ ಎಂಬ ಒಬ್ಬ ಹೆಣ್ಣುಮಗಳು ಇದ್ದಳು ಈ ಹನ್ನೆರಡು ಗಂಡು ಮಕ್ಕಳಲ್ಲಿ ಜ್ಯೇಷ್ಠಪುತ್ರ ಭಾಗವು ತಂದೆಯ ಆಶೀರ್ವಾದವೂ ಹಿರಿಯ ಮಗನಾದ ರೂಬೇನನಿಗೆ ದೊರಕಲಿಲ್ಲ, ಅವನು ಶಾಪವನ್ನೇ ಪಡೆದುಕೊಂಡನು, ಆದರೆ ಆ ಆಶೀರ್ವಾದವೆಲ್ಲಾ, ಯೋಸೇಫನಿಗೆ ದೊರಕಿತು, ಯೋಸೇಫನಿಗೆ ಎರಡರಷ್ಟು ಆಶೀರ್ವಾದ ಉಂಟಾಯಿತು.

"ಯೋಸೇಫ" ಅಂದರೆ "ನೀನು ಅಭಿವೃದ್ಧಿ ಹೊಂದುವಿ" ಎಂದು ಅರ್ಥ ಚಿಕ್ಕ ಪ್ರಾಯದಿಂದಲೇ, ಆತ್ಮೀಕ ಅಭಿವೃದ್ಧಿ ಹಾಗೂ ಕರ್ತನ ಹಸ್ತ ಅವನ ಮೇಲೆ ಇತ್ತು, ಕರ್ತನು ಯೋಸೇಫನಿಗೆ ಸ್ವಪ್ನಗಳನ್ನು ದರ್ಶನಗಳನ್ನು ಅದನ್ನು ವಿಮರ್ಶಿಸಿ ಅರ್ಥ ಹೇಳುವ ಕೃಪೆಯನ್ನು ಕೊಟ್ಟಿದ್ದನು ತಂದೆಯಾದ ಯಾಕೋಬನು ಅವನಿಗೆ ವರ್ಣರಂಚಿತವಾದ ಅಂಗಿಯನ್ನು ನೀಡಿದ್ದನು ಕುಟುಂಬದಲ್ಲಿ ಅಧಿಕವಾದ ಕಷ್ಟವನ್ನು ಅನುಭವಿಸಿದವನು ಯೋಸೇಫನು ಚಿಕ್ಕಂದಿನಲ್ಲಿ ಸಹೋದರರ ದ್ವೇಷಕ್ಕೆ ಒಳಗಾಗಿ ಐಗುಪ್ತವರ್ತಕರಿಗೆ ಮಾರಲ್ಪಟ್ಟನು ಐಗುಪ್ತದಲ್ಲಿ ಪೋಟೀಫರನ ಮನೆಯಲ್ಲಿ ಸೇವಕನಾದನು ಪೋಟೀಫರನ ಹೆಂಡತಿಯ ಅನ್ಯಾಯವಾದ ದೂರಿನಿಂದ ಸೆರೆವಾಸ ಅನುಭವಿಸಿದನು, ಆದರೆ ಕರ್ತನು ತನ್ನ ಕೃಪೆಯಿಂದ ಫರೋಹನ ಸ್ಥಾನಕ್ಕೆ ಸಮನಾಗಿ ಮೆಲೆತ್ತಿದಾಗ ಅವನು ತನ್ನ ತಂದೆ ಹಾಗೂ ಸಹೋದರರಿಗೆ ಸಹಾಯ ಮಾಡಿ, ತನ್ನೊಂದಿಗೆ ಇರುವಂತೆ ಮಾರ್ಗಮಾಡಿದನು, ತನ್ನ ಸಹೋದರರನ್ನು ಕ್ಷಮಿಸಿದನು ಅವನು ಕ್ಷಮಾಶೀಲನಾಗಿದ್ದನು ಯಾಕೋಬನು ತನ್ನ ಮುಪ್ಪಿನ ಕಾಲದಲ್ಲಿ ಜ್ಯೇಷ್ಟಪುತ್ರ ಭಾಗವನ್ನು ಆಶೀರ್ವಾದಗಳನ್ನು ಸೇರಿಸಿಕೊಟ್ಟನು.

ಯೋಸೇಫನ ಗೋತ್ರದವರು ನಂತರ ಎಲ್ಲಿ ನೆಲಸಿದರು ಎಂದು ವೇದಪಂಡಿತರು ಚರಿತ್ರೆಯನ್ನು ವಿಮರ್ಶಿಸಿ ನೋಡಿದಾಗ ಅಶ್ಶೂರ್ಯರ ಕಾಲದಲ್ಲಿಯೇ ಅವರು ಇಂಗ್ಲೆಂಡ್ ದೇಶದ ಬ್ರಿಟನ್ನಿಗೆ ಹೋಗಿ ನೆಲಸಿದರೆಂದು ತಿಳಿದು ಬಂತು ಚಿಕ್ಕದಾದ ಇಂಗ್ಲೆಂಡ್ ದೇಶದಿಂದ ಎರಡು ಖಂಡಗಳು ಉದ್ಭವಿಸಿದವು ಒಂದು ಅಮೆರಿಕಾ ಇನ್ನೊಂದು ಆಸ್ಟ್ರೇಲಿಯಾ ದೇವಮಕ್ಕಳೇ, ನೀವು ವಾಗ್ದಾನದ ಮಕ್ಕಳಾಗಿ, ಭಾಧ್ಯಸ್ಥರಾಗಿ ಪ್ರಕಾಶಿಸಬೇಕು.

**ನೆನಪಿಗೆ: 'ಯೋಸೇಫನು ಬಹುಫಲವನ್ನು ಬಿಡುವ ವೃಕ್ಷಕ್ಕೆ ಸಮಾನನಾಗಿದ್ದಾನೆ ಒರತೆಯ ಬಳಿಯಲ್ಲಿ ಬೆಳೆದು ರೆಂಬೆಗಳನ್ನು ಗೋಡೆಯ ಆಚೆಗೆ ಚಾಚಿರುವ ಫಲವೃಕ್ಷದಂತಿದ್ದಾನೆ' (ಆದಿ 49:22).**

## ಯೇಸುವಿನ ಕುಟುಂಬ!

ಬೆಳಗ್ಗೆ : ಧರ್ಮೋ 14,15,16
ಸಂಜೆ : ಮಾರ್ಕ 12:28-44

**'ಶಿಷ್ಯರೊಳಗೆ ಯೇಸುವಿಗೆ ಪ್ರಿಯನಾಗಿದ್ದ ಒಬ್ಬನು ಆತನ ಎದೆಯ ಹತ್ತಿರ ಒರಗಿ ಕೊಂಡಿದ್ದನು' (ಯೋಹಾ 13:23).**

ಯೇಸುಕ್ರಿಸ್ತನಿಗೆ ಈ ಲೋಕದಲ್ಲಿ ಯಾವದೇ ಪ್ರಾಪಂಚಿಕ ರೀತಿಯ ತನ್ನದೇ ಆದ ಕುಟುಂಬ ಇರಲಿಲ್ಲ ಶಿಷ್ಯರೇ, ಆತನ ಆತ್ಮೀಕ ಮಕ್ಕಳಾಗಿದ್ದರು ಆತನು ಈ ಭೂಮಿಯಲ್ಲಿ ಇದ್ದಾಗ ಹೇರಳವಾದ ಜನರು ಆತನನ್ನು ಪರ್ವತ ಪ್ರಸಂಗದ ಸಮಯದಲ್ಲಿ ಹಿಂಬಾಲಿಸಿದರು, ಆತನ ಬೋಧನೆಯನ್ನು ಐದು ಸಾವಿರಕ್ಕಿಂತ ಮೇಲ್ಪಟ್ಟ ಜನರು ಆಲಿಸಿದರು.

ಯೇಸುಕ್ರಿಸ್ತನು ಪುನರುತ್ಥಾನ ಹೊಂದಿದಾಗ, ಒಂದೇ ಸಾರಿ ಐನೂರಕ್ಕಿಂತ ಹೆಚ್ಚು ಸಹೋದರರಿಗೆ ಕಾಣಿಸಿಕೊಂಡನು (1ಕೊರಿ 15:6). ಮೇಲುಪ್ಪರಿಗೆಯಲ್ಲಿ 120 ಜನರ ಮೇಲೆ ಪವಿತ್ರಾತ್ಮನ ಅಭಿಷೇಕ ಸುರಿಯಲ್ಪಟ್ಟಿತು, ಈ ಲೋಕದಲ್ಲಿದ್ದಾಗ ಎಪ್ಪತ್ತು ಮಂದಿಯನ್ನು ನೇಮಿಸಿ ಅವರನ್ನು ಇಬ್ಬಿಬ್ಬರಾಗಿ ತಾನು ಹೋಗಬೇಕೆಂದಿದ್ದ ಪ್ರತಿಯೊಂದು ಊರಿಗೂ, ಪ್ರತಿಯೊಂದು ಸ್ಥಳಕ್ಕೂ ಮುಂದಾಗಿ ಕಳುಹಿಸಿದನು (ಲೂಕ 10:1), ಆದಾಗ್ಯೂ, ಹನ್ನೆರಡು ಶಿಷ್ಯರುಗಳಿಗೆ ಮಾತ್ರ ದೆವ್ವಗಳನ್ನು ಓಡಿಸುವ, ವ್ಯಾಧ್ಯಸ್ಥರನ್ನು ಸ್ವಸ್ಥಮಾಡುವ ಮಹಿಮೆಯನ್ನೂ ಅಧಿಕಾರವನ್ನು ಕೊಟ್ಟನು (ಲೂಕ 10:19). ಆ ಹನ್ನೆರಡು ಶಿಷ್ಯರನ್ನು ನನ್ನ ಮಕ್ಕಳೇ ಎಂದು ಕರೆದನು (ಯೋಹಾ 21:5), ಆ ಹನ್ನೆರಡು ಮಂದಿಯಲ್ಲಿಯೂ ಮೂವರು ಮಾತ್ರ ಕ್ರಿಸ್ತನಿಗೆ ಅತೀಸಮಿಪಸ್ತರಾಗಿದ್ದರು, ಅವರು ಯಾರು? ಪೇತ್ರ, ಯಾಕೋಬ, ಯೋಹಾನ ಇವರುಗಳೇ, ಆ ಮೂರು ಶಿಷ್ಯರನ್ನು ಯಾಯಿರನ ಮಗಳು ಸತ್ತು ಹೋದಾಗ, ತನ್ನ ಜೊತೆಯಲ್ಲಿ ಕರೆದುಕೊಂಡು ಹೋದನು, ರೂಪಾಂತರ ಬೆಟ್ಟಕ್ಕೆ ಕರೆದುಕೊಂಡು ಹೋದನು, ತಾನು ಹಿಡಿದು ಕೊಡಲ್ಪಟ್ಟ ರಾತ್ರಿ ಗೆತ್ಸೇಮನೆ ತೋಟದಲ್ಲಿ ಪ್ರಾರ್ಥಿಸಲು ತನ್ನೊಂದಿಗೆ ಆ ಮೂವರನ್ನು ಕರೆದುಕೊಂಡು ಹೊದನು.

ಈ ಮೂವರಲ್ಲಿ ವಾಗ್ದಾನದ ಮಗುವಿನಂತೆ ಬಾಧ್ಯಸ್ಥನಾಗಿದ್ದವರು ಯಾರು? ಅವನೇ ಯೋಹಾನನು ಅವನು "ಕ್ರಿಸ್ತನಿಗೆ ಪ್ರಿಯನಾದ ಶಿಷ್ಯನು ಎಂದೂ, ಆತನ ಎದೆಯಲ್ಲಿ ಒರಗಿದ್ದವನೆಂದು ಸತ್ಯವೇದ ಹೇಳುತ್ತದೆ ಸೇವೆಯ ಪ್ರಾರಂಭಕಾಲದಿಂದ, ಶಿಲುಬೆಯ ಪರ್ಯಂತ ಯೇಸುವಿನೊಂದಿಗೆ ಯೋಹಾನನು ಇದ್ದನು ತನ್ನ ತಾಯಿಯ ಜವಾಬ್ದಾರಿಯನ್ನು, ತನ್ನ ನಂತರ ತನ್ನ ಶಿಷ್ಯನಾದ ಯೋಹಾನನಿಗೆ ಕ್ರಿಸ್ತನು ವಹಿಸಿಕೊಟ್ಟನು. ಅಪೊ, ಯೋಹಾನನಿಗೆ ಕರ್ತನು ತನ್ನ ಕೃಪಾ ಐಶ್ವರ್ಯಗಳನ್ನೆಲ್ಲಾ ಪತ್ಮೋಸ್ ದ್ವೀಪದಲ್ಲಿ ಪ್ರಕಟಿಸಿದನು.

ದೇವಮಕ್ಕಳೇ, ಇಂದು ನಾವು ಕ್ರಿಸ್ತನ ಮಕ್ಕಳೇ ಆಗಿರಬಹುದು ಆದರೆ ಕರ್ತನೊಂದಿಗೆ ನಾವು ನಿಕಟವಾದ ಸಂಬಂಧವನ್ನು ಸಂಪರ್ಕವನ್ನು ಹೊಂದಿದ್ದೇವಾ ಎಂಬುದನ್ನು ಪರೀಕ್ಷಿಸಿಕೊಳ್ಳುವದು ಅಗತ್ಯ.

ನೆನಪಿಗೆ: **'ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ' (1ಕೊರಿ 2:9).**

## ನಿನ್ನದಾಗಿರುವದು!



**'ಕಂದಾ, ನೀನು ಯಾವಾಗಲೂ ನನ್ನ ಸಂಗಡ ಇದೀ, ಮತ್ತು ನನ್ನದೆಲ್ಲಾ ನಿನ್ನದೇ' (ಲೂಕ 15:31).**

ಪ್ರಾಪಂಚಿಕ ರೀತಿಯ ಆಶೀರ್ವಾದಗಳಾದರೂ ಸರಿ, ನಿತ್ಯತ್ವದ ಆಶೀರ್ವಾದಗಳಾದರೂ ಸರಿ ನಿಮಗೆ ಅವು ಸಿಗಬೇಕಾದರೆ ಒಂದೇ ಒಂದು ನಿಬಂಧನೆ ಮಾತ್ರ ಇರುವದು, ಅದು ಯಾವದು? ನೀವು ಕರ್ತನೊಂದಿಗಿರಬೇಕು, ಕರ್ತನು ನಿಮ್ಮೊಂದಿಗಿರಬೇಕು, ಕರ್ತನೊಂದಿಗೆ ಹೆಚ್ಚು ವೇಳೆಯನ್ನು ನೀವು ಕಳೆಯಬೇಕು. ಕರ್ತನ ಪ್ರಸನ್ನತೆಯನ್ನು ಅಧಿಕವಾಗಿ ರುಚಿಸಬೇಕು.

ಹಳೆಯ ಒಡಂಬಡಿಕೆಯ ಪ್ರವಾದಿಯಾದ ಅಜರ್ಯನ ಮೇಲೆ ದೇವರ ಆತ್ಮವು ಇಳಿದು ಬಂದು ಹೇಳಿದ್ದೇನೆಂದರೆ, "ಎಲ್ಲಾ ಯೆಹೂದ ಬೆನ್ಯಾಮೀನ್ ಕುಲಗಳವರೇ, ಕಿವಿಗೊಡಿರಿ, ನೀವು ಯೆಹೋವನನ್ನು ಹೊಂದಿಕೊಂಡಿರುವ ತನಕ ಆತನೂ ನಿಮ್ಮೊಂದಿಗಿರುವನು ನೀವು ಆತನನ್ನು ಹುಡುಕಿದರೆ ಆತನು ನಿಮಗೆ ಸಿಕ್ಕುವನು ಆತನನ್ನು ಬಿಟ್ಟರೆ ಆತನೂ ನಿಮ್ಮನ್ನು ಬಿಟ್ಟು ಬಿಡುವನು" ಎಂಬುದೇ (2ಪೂ.ವೃ 15:2). ಸತ್ಯವೇದದಲ್ಲಿ ಕಂಡು ಬರುವ ಅಧಿಕವಾದ ವಾಗ್ದಾನ ನಾನು ನಿನ್ನೊಂದಿಗಿರುವೆನು ಎಂಬುದೇ "ಕರ್ತನು ಮೋಶೆಯೊಂದಿಗೆ ಅವನ ಜೀವಿತ ಕಾಲವೆಲ್ಲಾ ಇದ್ದನು, ನಂತರ ಯೆಹೋಶುವನನ್ನು ನೋಡಿ ನಿನ್ನ ಜೀವಮಾನದಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು; ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು" ಅಂದನು (ಯೆಹೋ 1:5). ಅಂಥಹ ಆಶೀರ್ವಾದವನ್ನು ಪ್ರವಾದಿಯಾದ ಯೆಶಾಯನ ಮೂಲಕ ಇಸ್ರಾಯೇಲಿಗೆ ನೀಡಿದನು ನಾನು ಹೇಳಿ ಸಂಬೋಧಿಸಿದ ಪ್ರಜೆಯೇ, ನೀನಂತು ಹೆದರ ಬೇಡ ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು ನಿನಗೆ ಸಹಾಯ ಕೊಡುತ್ತೇನೆ ನನ್ನ ಧರ್ಮದ ಬಲಗೈ ನಿನಗೆ ಆಧಾರವಾಗಿರುವದು (ಯೆಶಾ 41:9,10).

ದೇವಮಕ್ಕಳೇ, ಪ್ರಪಂಚದಲ್ಲಿ ಹುಟ್ಟಿದ ಯಾವ ಮನುಷ್ಯನೇ ಆಗಲಿ "ನಾನು ನಿನ್ನೊಂದಿಗೆ ಸದಾಕಾಲ ಇರುತ್ತೇನೆ" ಎಂದು ಹೇಳಲು ಸಾಧ್ಯವಿಲ್ಲ ಮೂಗಿನ ಶ್ವಾಸವುಳ್ಳ ಮನುಷ್ಯನನ್ನು ನಂಬಲು ಅವನು ಎಷ್ಟು ಮಾತ್ರದವನು? ಅವನು ಹೊತ್ತಾರೆಯಲ್ಲಿ ಕಾಣಿಸಿಕೊಂಡು, ಸಾಯಂಕಾಲದಲ್ಲಿ ಉದುರಿ ಹೋಗುವ ಹುಲ್ಲಿಗೂ, ಹೂವಿಗೂ ಸಮಾನನಾಗಿರುವನು, ಆದರೆ ಕರ್ತನೋ ನಿತ್ಯನಿರಂತರನಾದಾತನು ಆತನೊಬ್ಬನೇ ನಿಮ್ಮೊಂದಿಗಿರುವಾತನು ಆತನು ಹೇಳುತ್ತಾನೆ "ನಾನು ಯುಗದ ಸಮಾಪ್ತಿಯವರೆಗೂ, ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" ಎಂದು (ಮತ್ತಾ 28:20).

ನೆನಪಿಗೆ: **'ಯೆಹೋವನು ತಾನೇ ನಿನ್ನ ಮುಂದುಗಡೆ ಹೋಗುವನು; ಆತನೇ ನಿನ್ನ ಸಂಗಡ ಇರುವನು; ನಿನ್ನನ್ನು ಅಪಜಯಕ್ಕೆ ಗುರಿಪಡಿಸುವದೇ ಇಲ್ಲ ಕೈಬಿಡುವದಿಲ್ಲ; ಅಂಜಬೇಡ ಧೈರ್ಯದಿಂದಿರು' ಅಂದನು (ಧರ್ಮೋ 31:8).**

| ಮಾರ್ಚ್ 13 | **ಕರ್ತನೊಂದಿಗಿರುವವರು!** | ಬೆಳಗ್ಗೆ : ಧರ್ಮೋ 20,21,22<br>ಸಂಜೆ : ಮಾರ್ಕ 13:24–37 |
|---|---|---|

**'ಪೇತ್ರ ಯೋಹಾನರು ಧೈರ್ಯದಿಂದ ಮಾತಾಡುವದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ತಿಳಿದು ಆಶ್ಚರ್ಯಪಟ್ಟರು ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು' (ಅ.ಕೃ 4:13,14)**

ಯೇಸುಕ್ರಿಸ್ತನ ಶಿಷ್ಯರನ್ನು ಅವಿದ್ಯಾವಂತರು ಪಾಮರರು ಬುದ್ಧಿಹೀನರು, ಪ್ರಸಂಗ ಮಾಡಲು ಬರದಂಥವರು, ಎಂದೆಲ್ಲಾ ಅನೇಕರು ನೆನಸಿದ್ದರು ಆದರೆ ಪೇತ್ರನು, ಬಹಳ ಚೆನ್ನಾಗಿ ಮಾತಾಡುವ ಧೈರ್ಯವನ್ನು ಅವರು ಕಂಡು ಅವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು. ಹೌದು ಅಜ್ಞಾನಿಗಳನ್ನು ಜ್ಞಾನಿಗಳನ್ನಾಗಿಸುವ ಯೇಸುಕ್ರಿಸ್ತನು ಅವರೊಂದಿಗೆ ಇದ್ದನು.

ಹೂವಿನೊಂದಿಗೆ ಸೇರಿದ ನಾರೂಸುವಾಸನೆ ಪಡೆಯಿತು "ನಿನ್ನ ಸ್ನೇಹಿತರು ಯಾರೆಂದು ಹೇಳು, ನೀನು ಯಾರೆಂದು ನಿನಗೆ ಹೇಳುವೆನು" ಎಂಬುದು ನಾಣ್ನುಡಿ, ನೀವು ಯಾವ ಸ್ನೇಹಿತರೊಂದಿಗೆ ಅಧಿಕ ಸಮಯಕಳೆಯುವೆಯೋ, ಆ ಸ್ನೇಹಿತನ ಗುಣ, ಸ್ವಭಾವಗಳು, ನಿಮಗರಿವಿಲ್ಲದಂತೆಯೇ ನಿಮ್ಮೊಳಗೆ ಸೇರಿಕೊಳ್ಳುವದು, ಆದ್ದರಿಂದಲೇ, ದೇವಭಕ್ತರು ಅಧಿಕ ಸಮಯವನ್ನು ಕರ್ತನೊಂದಿಗೆ ಕಳೆದರು ದೈವೀಕ ಸ್ವಭಾವಗಳನ್ನು ಪಡೆದು, ಎದ್ದು ಪ್ರಕಾಶಿಸಿದರು.

ನೀವು ಕ್ರಿಸ್ತರೊಂದಿಗೆ ಜೀವಿಸುವಾಗ, ನಿಮಗೆ ಅರಿವಿಲ್ಲದೆಯೇ ದೇವರ ಬಲ, ದೇವಕೃಪೆ, ದೇವಸಮಾಧಾನ, ದೈವೀಕ ಸಂತೋಷ ಎಲ್ಲವೂ ನಿಮ್ಮೊಳಗೆ ತುಂಬುತ್ತಲೇ ಇರುತ್ತದೆ, ಚಂದ್ರನು ಸೂರ್ಯನ ಬೆಳಕನ್ನು ಹೊಂದಿಕೊಂಡು ಇರುಳಲ್ಲಿ ಪ್ರಕಾಶಿಸುವದು. ನೀವು ಯೇಸುವಿನೊಂದಿಗೆ ಇದ್ದು ನೋಡಿರಿ, ಎಷ್ಟು ಹೊತ್ತು ಆತನ ಸಮ್ಮುಖದಲ್ಲಿ ಕಳೆಯುವಿರೋ, ಅಷ್ಟಕ್ಕಷ್ಟು ನಿಮ್ಮ ಜೀವಿತದಲ್ಲಿ ದೊಡ್ಡ ಬದಲಾವಣೆಗಳು ಉಂಟಾಗುವವು, ಅಂದಿಗೂ, ಇಂದಿಗೂ, ಕರ್ತನು ಯಾಕೆ ಶಿಷ್ಯರನ್ನೂ, ದೇವಸೇವಕರನ್ನು ಆರಿಸಿಕೊಂಡನು? (ಮಾರ್ಕ 3:14,15)ನ್ನು ಓದಿನೋಡಿರಿ. 1.ಶಿಷ್ಯರು ಯೇಸುವಿನೊಂದಿಗೆ ಇರಬೇಕು 2.ಪ್ರಸಂಗಿಸಿ ಸುವಾರ್ತೆಯನ್ನು ಸಾರಬೇಕು 3.ವ್ಯಾಧಿಗಳನ್ನು ಗುಣಪಡಿಸಿ, ದೆವ್ವಗಳನ್ನು ಓಡಿಸಬೇಕು ಎಂದು.

ದೇವಮಕ್ಕಳೇ, ನೀವು ಹಾಗೆ ಕರ್ತನನ್ನು ದಾಹದಿಂದ ಹುಡುಕುವಾಗ, ಆತನು ಪ್ರೀತಿಯಿಂದ "ಮಗನೇ/ಮಗಳೇ, ನೀನು ಯಾವಾಗಲೂ ನನ್ನೊಂದಿಗಿರುವಿ ನನಗಿರುವದೆಲ್ಲಾ ನಿನ್ನದೇ ಆಗಿರುವದು" ಎಂದು ಕರ್ತನು ಹೇಳುವನು.

ನೆನಪಿಗೆ: **'ಸ್ಥಿರಚಿತ್ತನಾಗಿರು, ಧೈರ್ಯದಿಂದಿರು, ಅಂಜಬೇಡ, ಕಳವಳಗೊಳ್ಳಬೇಡ, ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುತ್ತಾನೆ ಎಂದು ಹೇಳಿದನು' (ಯೆಹೋ 1:9).**

| | | |
|---|---|---|
| ಮಾರ್ಚ್ 14 | **ಕರ್ತನೊಂದಿಗಿರುವೆನು!** | ಬೆಳಿಗ್ಗೆ : ಧರ್ಮೋ 23,24,25<br>ಸಂಜೆ : ಮಾರ್ಕ 14:1–25 |

**ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು (ಕೀರ್ತ 23:6).**

ದಾವೀದನ ತಂದೆ ಇಷಯನಿಗೆ ಎಂಟುಮಕ್ಕಳು ಅದರಲ್ಲಿ ಯಾರಿಗೆ ಜ್ಯೇಷ್ಠಪುತ್ರ ಭಾಗ? ಯಾರನ್ನು ಕರ್ತನು ಆರಿಸಿಕೊಂಡನು? ಯಾರನ್ನು ನೋಡಿ ಮಗನೇ ಯಾವಾಗಲೂ ನನ್ನೊಂದಿಗಿರುವಿ ಎಂದು ಹೇಳಲು ಸಾಧ್ಯ? ಅದು ದಾವೀದನೇ ಆಗಿರುವನು ಕುರಿಗಳನ್ನು ಅರಣ್ಯದಲ್ಲಿ ಮೇಯಿಸುವಾಗ, ಅವನು ಕರ್ತನನ್ನೇ ತನ್ನ ಕುರುಬನನ್ನಾಗಿಸಿಕೊಂಡನು "ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು, ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವದು, ನಾನು ಯಾವಾಗಲೂ ಯೆಹೋವನನ್ನು ನನ್ನೆದುರಿಗೇ ಇಟ್ಟುಕೊಂಡಿದ್ದೇನೆ" (ಕೀರ್ತ 34:1, 16:8) ಎಂದು ಹೇಳಿದನು.

ದಾವೀದನಿಗೆ ಪ್ರಾಪಂಚಿಕ ಜೀವಿತದಲ್ಲೂ, ನಿತ್ಯತ್ವದ ಜೀವಿತದಲ್ಲೂ ದೊಡ್ಡ ನಂಬಿಕೆ ಇದ್ದಿತು ನಾನು ಕರ್ತನೊಂದಿಗಿರುವದರಿಂದ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು ನಾನು ಕರ್ತನ ಮಂದಿರದಲ್ಲಿ ಸದಾಕಾಲ ವಾಸಿಸುವೆನು ಎಂದು ಹೇಳುವನು ಮಾತ್ರವಲ್ಲ ಪರಲೋಕದಲ್ಲಿ ನನಗೆ ನೀನಲ್ಲದೆ ಮತ್ತಾರು ಅವಶ್ಯ? ಇಹಲೋಕದಲ್ಲಿ ನಿನ್ನನ್ನಲ್ಲದೆ ಇನ್ನಾರನ್ನೂ ಬಯಸುವದಿಲ್ಲ (ಕೀರ್ತ 73:25) ಎಂದು ಹೇಳುತ್ತಾನೆ ನೀವು ಯಾವ ಕೆಲಸದಲ್ಲಿದ್ದರೂ, ಯಾವಾಗಲೂ ಕರ್ತನೊಂದಿಗಿರಲು ಸಾಧ್ಯ ನಿಮ್ಮ ಕೆಲಸದ ಸ್ಥಳದಲ್ಲಿ ದೇವ ಪ್ರಸನ್ನತೆ ಯಾವಾಗಲೂ ಇರುವದೆಂದು ನೆನಸಿರಿ. ಯೇಸುಕ್ರಿಸ್ತನು ಪರಲೋಕರಾಜ್ಯದ ಕುರಿತು ಒಂದು ಸಾಮ್ಯವನ್ನು ಹೇಳಿದನು ಒಳ್ಳೆಯ ನೆಲದಲ್ಲಿ ಬಿದ್ದ ಬೀಜ ನೂರರಷ್ಟು, ಅರವತ್ತರಷ್ಟು, ಮೂವತ್ತರಷ್ಟು ಫಲಕೊಟ್ಟಿತು, ಆತನಿಗಾಗಿ ಈ ಭೂಮಿಯಲ್ಲಿ ನಿಮ್ಮ ಸಮಯದಲ್ಲಿ ಶೇಕಡ ಮೂವತ್ತರಷ್ಟು ಕೊಡುವಾಗ ಪರಲೋಕದಲ್ಲಿ ಶೇಕಡ ಮೂವತ್ತರಷ್ಟು ಬೆಳಕಿನಲ್ಲಿ ಮಹಿಮೆಯಾದ ಸ್ಥಳಕ್ಕೆ ಸೇರುವಿರಿ ನೂರಕ್ಕೆ ನೂರರಷ್ಟು ಕರ್ತನೊಂದಿಗೆ, ಇರುವ ಸ್ಥಳದಲ್ಲಿ ಪೂರ್ಣವಾಗಿ ನಿಲ್ಲಬೇಕೆಂದರೆ, ನಿಮ್ಮ ಸಮಯವನ್ನೆಲ್ಲಾ ಆತನಿಗೆಕೊಡಿರಿ.

ದೇವಮಕ್ಕಳೇ, ನೀವು ಕ್ರಿಸ್ತನಿಗೆ ಎಷ್ಟು ಸಮಯಕೊಡುವಿರೋ ಅಷ್ಟರ ಮಟ್ಟಿಗೆ ಪರಲೋಕದಲ್ಲಿ ನೀವು ಕ್ರಿಸ್ತನೊಂದಿಗೆ ಇರುವಿರಿ, ಪರಲೋಕದಲ್ಲಿ ನಿಮಗೆ ಸಿಗುವ ಸ್ಥಳ ಈ ಭೂಮಿಯಲ್ಲೇ ನಿರ್ಣಯಿಸಲ್ಪಡುವದು.

ನೆನಪಿಗೆ: **ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ; ನನ್ನ ಕುರಿಗಳು ನನ್ನನ್ನು ತಿಳಿದಿವೆ; ಮತ್ತು ನನ್ನ ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ (ಯೋಹಾ 10:14,15)**

## ಸಂಚರಿಸುತ್ತಿರುವಾಗ!

ಬೆಳಿಗ್ಗೆ : ಧರ್ಮೋ 26,27
ಸಂಜೆ : ಮಾರ್ಕ 14:26-52

**'ಹನೋಕನು ದೇವರೊಂದಿಗೆ ಅನ್ಯೋನ್ಯವಾಗಿ ನಡೆದುಕೊಳ್ಳುತ್ತಾ ಇರುವಾಗ ದೇವರು ಅವನನ್ನು ಕರೆದುಕೊಂಡದ್ದರಿಂದ ಕಾಣದೆ ಹೋದನು' (ಆದಿ 5:24).**

ಆದಿಕಾಂಡದಲ್ಲಿ ಹನೋಕ ಎಂಬ ಇಬ್ಬರು ವ್ಯಕ್ತಿಗಳನ್ನು ನೋಡುತ್ತೇವೆ ಮೊದಲನೆ ವ್ಯಕ್ತಿ ಕಾಯಿನನ ಮಗನಾದ ಹನೋಕನು (ಆದಿ 4:17) ಕಾಯಿನನು ಒಂದು ಪಟ್ಟಣವನ್ನು ಕಟ್ಟಿ ಅದಕ್ಕೆ ತನ್ನ ಮಗನ ಹೆಸರನ್ನು ಇಟ್ಟನು, ಎರಡನೆಯ ಹನೋಕನು ಆದಾಮನಿಗೆ ಏಳನೆ ತಲೆಮಾರಿನವನು ಅವನ ತಂದೆಯ ಹೆಸರು ಯೆರೆದನು ಈ ಹನೋಕನು ತನ್ನ ಅರವತ್ತೈದನೇ ವಯಸ್ಸಿನಲ್ಲಿ ದೇವರೊಂದಿಗೆ ಸಂಚರಿಸಲಾರಂಭಿಸಿದನು ಅಂದರೆ ದೇವರೊಂದಿಗೆ ಅನ್ಯೋನತೆಯಿಂದ ನಡೆಯಲಾರಂಭಿಸಿದನು (ಆದಿ 5:23) ಇವನು ಭೂಮಿಯಲ್ಲಿ ಜೀವಿಸಿದ ಕಾಲ 365 ವರುಷಗಳು.

ಒಬ್ಬನು ಪ್ರಾಪಂಚಿಕವಾಗಿಯೇ ಬದುಕಿದನು ಇನ್ನೊಬ್ಬನು ದೇವರೊಂದಿ ನಡೆಯುವದೇ ಭಾಗ್ಯವೆಂದು ತಿಳಿದು ದೇವರೊಂದಿಗೆ ಅನ್ಯೊನ್ಯವಾಗಿ ನಡೆದನು ಅಂದಿನ ಜನರು ಇವನನ್ನು ನೋಡಿ ಇವನಿಗೆ ಬುದ್ಧಿ ಇಲ್ಲ ಹಣ ಸಂಪಾದಿಸುವದು ಗೊತ್ತಿಲ್ಲ ಪ್ರಪಂಚದಲ್ಲಿ ಹೆಸರು, ಹೆಗ್ಗಳಿಕೆ ಪಡೆಯಲು ಬಯಸದೆ, ಯಾವಾಗಲೂ ದೇವರೊಂದಿಗೆ ನಡೆಯುವನೇ ಇವನಿಗೆ ಹುಚ್ಚು ಹಿಡಿದಿದೆಯಾ? ಎಂದು ಹಾಸ್ಯ ಮಾಡಿರಬಹುದು ಆದರೆ ಈ ಹನೋಕನು ದೇವರೊಂದಿಗೆ ನಡೆದು, ಎರಡನೇ ಬರೋಣದಲ್ಲಿ ಮೇಲಕ್ಕೆ ಎತ್ತಲ್ಪಟ್ಟು ಅವನಲ್ಲಿ ನಂಬಿಕೆಯ ವರ ಮಹಿಮೆಯಾಗಿ ಕಾರ್ಯ ನಡೆಸಿತು. ಕಾಣದೆ ಹೋಗುವ ದೇವಭಕ್ತರಿಗೆ, ಮಾರ್ಗದರ್ಶಿಯಾಗಿರುವನು ಇವನು ಮರಣವನ್ನು ಕಾಣದೆ ಎತ್ತಲ್ಪಟ್ಟನು ಅವನು ದೇವರಿಗೆ ಮೆಚ್ಚಿಗೆಯಾದವನೆಂದು "ತೆಗೆದುಕೊಳ್ಳಲ್ಪಡುವದಕ್ಕೆ ಮೊದಲೇ ಸಾಕ್ಷಿ ಪಡೆದಿದ್ದನು" (ಇಬ್ರಿ 11:5).

ಪ್ರಾಪಂಚಿಕನಾದ ಹನೋಕನ ಬಗ್ಗೆ ನಮಗೆ ಏನೂ ತಿಳಿಯದು ಪಟ್ಟಣವನ್ನು ಕಟ್ಟಿ ಅದರೊಂದಿಗೇ ಮರೆಯಾದನು, ಆದರೆ ದೇವರೊಂದಿಗೆ ನಡೆದ ಹನೋಕನ ಹೆಸರು ಇಂದಿಗೂ ಸ್ಥಿರವಾಗಿ ನಿಂತಿರುವದು ಇವನ ನಡೆಯನ್ನು ಹಿಂಬಾಲಿಸಿ ಪರಿಶುದ್ಧರಾಗಿ ಜೀವಿಸಿ ದೇವರೊಂದಿಗೆ ನಡೆದವರು ಹೇರಳವಾಗಿರುವರು ಚಂದ್ರ ಮಂಡಲಕ್ಕೆ ಏಳುಸಾರಿ ಹೋಗಿಬಂದ ಇರ್ವಿಸ್ ಎಂಬ ವಿಜ್ಞಾನಿ ಹೀಗೆ ಹೇಳಿರುವರು "ನಾನು ಚಂದ್ರ ಮಂಡಲಕ್ಕೆ ಹೋಗಿ ಬಂದೆನೆಂಬ ಹೆಚ್ಚಳಕ್ಕಿಂತಲೂ ಸೂರ್ಯ ಚಂದ್ರ ನಕ್ಷತ್ರಗಳನ್ನು ಸೃಷ್ಟಿಸಿದ ದೇವರು, ನನ್ನೊಂದಿಗೆ ಭೂಮಿಯಲ್ಲಿ ನಡೆಯುವನು ಎಂಬುದೇ ನನಗೆ ಹೆಚ್ಚಳವಾಗಿದೆ, ಸಂತೋಷವಾಗಿದೆ" ಎಂದು ಹೇಳಿದನು.

ದೇವಮಕ್ಕಳೇ, ನೀವು ದೇವರಿಗೆ ಸಮಯದಶಮಭಾಗ ಕೊಡುವದು ಮಾತ್ರಸಾಲದು ಆತನೊಂದಿಗೆ ನಡೆಯುವಂತೆ ತೀರ್ಮಾನಿಸಿರಿ.

ನೆನಪಿಗೆ: **'ಇವರು ಕನ್ಯೆಯರಂತೆ ನಿಷ್ಕಳಂಕರು; ಯಜ್ಞದ ಕುರಿಯಾದಾತನು ಎಲ್ಲಿ ಹೋದರೂ ಇವರು ಆತನನ್ನು ಹಿಂಬಾಲಿಸುವರು' (ಪ್ರಕ 14:4).**

| | | |
|---|---|---|
| **ಮಾರ್ಚ್ 16** | **ಮೋಶೆಯೊಂದಿಗಿದ್ದ ಯೆಹೋಶುವನು!** | ಬೆಳಿಗ್ಗೆ : ಧರ್ಮೋ 28,29<br>ಸಂಜೆ : ಮಾರ್ಕ 14:53-72 |

**'ಮೋಶೆಯು ನೂನನ ಮಗನಾದ ಯೆಹೋಶುವನ ಮೇಲೆ ಕೈಯಿಟ್ಟದರಿಂದ ಅವನು ಜ್ಞಾನವರ ಸಂಪನ್ನನಾದನು, ಯೆಹೋವನು ಮೋಶೆಗೆ ಕೊಟ್ಟ ಆಜ್ಞೆಗೆ ಅನುಸಾರವಾಗಿ ಇಸ್ರಾಯೇಲ್ಯರು ಯೆಹೋಶುವನ ಮಾತಿನ ಪ್ರಕಾರ ನಡೆದರು' (ಧರ್ಮೋ 34:9).**

ಎಂಬತ್ತು ವರುಷದವನಾದ ಮೋಶೆ ಐಗುಪ್ತದೇಶವನ್ನು ಬಿಟ್ಟು ಹೊರಟ ದಿನದಿಂದ, ಅವನು ಮರಣ ಹೊಂದುವವರೆಗೂ, ಯೆಹೋಶುವನು ಜೊತೆಯಲ್ಲೇ ಇದ್ದನು, ತನ್ನನ್ನು ಒಬ್ಬ ದಾಸನಂತೆ ತಗ್ಗಿಸಿಕೊಂಡು ಮೋಶೆಗೆ ಸೇವಕನಾಗಿಯೂ, ಜೊತೆ ದೇವಸೇವಕನಾಗಿಯೂ ಇದ್ದನು.

ಮೊಶೆಯ ಸ್ವಂತ ಸಹೋದರಿ ಮಿರ್‍ಯಾಮಳಿಗು ಸ್ವಂತ ಸಹೋದರನಾದ ಆರೋನನ ನಡುವೆ ಅವನಿಗೆ ಭಿನ್ನಾಭಿಪ್ರಾಯ ಮನಃಸ್ತಾಪಗಳು ಬಂದಿತು, ಆದರೆ ಎಲ್ಲಾ ಸಂದರ್ಭಗಳಲ್ಲೂ, ಸಮಸ್ಯೆಗಳ ವೇಳೆಗಳಲ್ಲಿಯೂ ಯಾವಾಗಲೂ ಯೆಹೋಶುವನು ಮೋಶೆಯ ಜೊತೆಯಲ್ಲಿಯೇ ಇದ್ದನು. ಜನರು ಮೋಶೆಗೆ ವಿರೋಧವಾಗಿ ಗುಣಗುಟ್ಟಿದರು ಮೋಶೆಯನ್ನು ತಪ್ಪಾಗಿ ಭಾವಿಸಿದರು ಆದರೆ ಯೆಹೋಶುವನೋ ಗುಣಗುಟ್ಟಲಿಲ್ಲ, ಕರ್ತನು ಇದನ್ನು ಗಮನಿಸುತ್ತಲೇ ಇದ್ದನು, ಮೋಶೆಯ ಅವಸಾನ ಕಾಲ ಸಮೀಪಿಸಿದಾಗ, ಮೋಶೆಯನ್ನು ಯಥಾರ್ಥವಾದ ಮನಸ್ಸಿನಿಂದ ಹಿಂಬಾಲಿಸಿದ ಯೆಹೋಶುವನನ್ನು ಕರ್ತನು ಘನಪಡಿಸಿದನು, "ಅವನ ಮೇಲೆ ನಿನ್ನ  ಕೈಯನ್ನು ಇಡು, ಅವನು ಜ್ಞಾನದ ಆತ್ಮನಿಂದ ತುಂಬಲ್ಪಡುವನು ಮುಂದೆ ನಿನ್ನ ಸ್ಥಾನದಲ್ಲಿ ಅವನನ್ನು ನಿಲ್ಲಿಸಿ ನಡೆಸುವೆನು" ಎಂದು ಕರ್ತನು ಮೋಶೆಯೊಂದಿಗೆ ಮಾತಾಡಿದನು ಮುಂದೆ ಕರ್ತನು ಕೊಟ್ಟ ಬಲದಿಂದ ಯೆಹೋಶುವನು ಕಾನಾನಿನಲ್ಲಿದ್ದ ಏಳು ಜನಾಂಗಗಳನ್ನೂ ಜಯಿಸಿದನು, ಒಮ್ಮೆ ಅವನು ಯುದ್ಧದಲ್ಲಿ ನಿಂತಾಗ, ಸೂರ್ಯನು ಅಸ್ತಮಿಸಿ ಕತ್ತಲೆ ಆವರಿಸಲು ಪ್ರಾರಂಭವಾಯಿತು, ಆಗ ಯೆಹೋಶುವನು ಸೂರ್ಯನಿಗೆ ಗಿಬ್ಯೋನಿನ ಮೇಲೂ, ಚಂದ್ರನಿಗೆ ಅಯ್ಯಾಲೋ ಹಳ್ಳದ ಮೇಲೂ ನಿಲ್ಲುವಂತೆ ಆಜ್ಞಾಪಿಸಲು ಹಾಗೆಯೇ ಆಯಿತು (ಯೆಹೋ 10:12).

ದೇವಜನರೇ, ಕರ್ತನು ನಿಮಗೆ ಯಾರನ್ನಾದರೂ ಒಬ್ಬ ದೇವಸೇವಕರನ್ನು, ಮಾದರಿಯಾಗಿ ನೀಡಿದ್ದರೆ, ಎಂಥಹ ಸಂದರ್ಭದಲ್ಲೂ ಗುಣಗುಟ್ಟದೆ ಸಂತೋಷವಾಗಿ ಅವರನ್ನು ಹಿಂಬಾಲಿಸಿರಿ. ನಿಮಗೆಂದು ಕರ್ತನ ಕುರಿತಾಗಿ ಒಂದು ಸಮಯ ಬರುವದು ಆಗ ಕರ್ತನು ನಿಮ್ಮ ತಲೆಯನ್ನು ಎತ್ತುವನು, "ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು' (1ಪೇತ್ರ 5:6) ಎಂದು ಸತ್ಯವೇದ ಹೇಳುತ್ತದೆ.

**ನೆನಪಿಗೆ: 'ಆತನು ನಿನ್ನ ಇಷ್ಟಾರ್ಥವನ್ನು ನೆರವೇರಿಸಲಿ; ನಿನ್ನ ಎಲ್ಲಾ ಸಂಕಲ್ಪಗಳನ್ನು ಸಫಲಮಾಡಲಿ' (ಕೀರ್ತ 20:4).**

| ಮಾರ್ಚ್ 17 | **ಎಲೀಯಯನೊಂದಿಗಿದ್ದ ಎಲೀಷ!** | ಬೆಳಿಗ್ಗೆ : ಧರ್ಮೋ 30,31<br>ಸಂಜೆ : ಮಾರ್ಕ 15:1-32 |
|---|---|---|

**'ಎಲೀಯನ ದೇವರಾದ ಯೆಹೋವನೆಲ್ಲಿ ಅಂದುಕೊಂಡು ಆ ಕಂಬಳಿಯಿಂದ ನೀರನ್ನು ಹೊಡೆಯಲು ಅದು ಎರಡು ಭಾಗವಾಯಿತು (2ಅರ 2:14).**

ಎಲೀಯನ ಕಾಲದಲ್ಲಿ ಬಾಳನನ್ನು ದೇವರೆಂದು ಆರಾಧಿಸದ ಏಳುನೂರು ಮಂದಿಯನ್ನು ಕರ್ತನು ಆದೇಶದಲ್ಲಿ ಉಳಿಸಿದ್ದನು ಆದರೂ ಆತ್ಮೀಕ ರೀತಿಯಲ್ಲಿ ಎಲೀಷನ ಜ್ಯೇಷ್ಟಪುತ್ರ ಭಾಗವು ಎಲೀಷನಿಗೆ ದೊರೆಯಿತು ಎಲೀಯನ ಸ್ಥಾನದಲ್ಲಿ ಪ್ರವಾದಿಯಾಗಿ, ಎಲೀಷನನ್ನು ದೇವರು ಆರಿಸಿಕೊಂಡನು ಎಲೀಯನ ಮೇಲಿದ್ದ ದೇವರಾತ್ಮನ ವರ ಎರಡರಷ್ಟು ಎಲೀಷನೊಳಗೆ ಬಂದಿತು, ಎಲೀಯನು ಮಾಡಿದ ಅದ್ಭುತಗಳು ಏಳು ಆದರೆ ಎಲೀಷನು ಮಾಡಿದ್ದು ಹದಿನಾಲ್ಕು ಅದ್ಭುತಗಳು.

"ನನ್ನ ಮಗನೇ, ನೀನು ಯಾವಾಗಲೂ ನನ್ನೊಂದಿಗಿರುವಿ ನನಗಿರುವದೆಲ್ಲಾ ನಿನ್ನದೇ ಆಗಿರುವದು" ಎಂದು ಎಲೀಯನು ಹೇಳಬೇಕಾದರೆ, ಒಂದೇ ಒಂದು ನಿಬಂಧನೆಯೆಂದರೆ "ನಾನು ನಿನ್ನ ಬಳಿಯಿಂದ ತೆಗೆಯಲ್ಪಡುವಾಗ ನೀನು ನನ್ನನ್ನು ನೋಡುವದಾದರೆ ಅದು ದೊರಕುವದು" (2ಅರ 2:10) ಎಂಬುದು ಇದರ ಅರ್ಥವೇನು? "ನೀನು ಕೊನೆಯವರೆಗೂ ನನ್ನೊಂದಿಗಿರಬೇಕು ನಾನು ಹೇಳುವ ಸ್ಥಳಕ್ಕೆಲ್ಲಾ ನೀನು ಬರಬೇಕು" ಎಂಬುದೇ ಎಲೀಯನ ಪ್ರಾರಂಭದ ದಿನಗಳಲ್ಲಿ, ಎಲೀಯನು ತನ್ನ ಕಂಬಳಿಯನ್ನು ಎಲೀಷನ ಮೇಲೆ ಹಾಕಿ ಪ್ರವಾದನಾ ಸೇವೆಗೆ ಕರೆದನು, ಆಗ ಎಲೀಷನು ಹನ್ನೆರಡು ನೇಗಿಲುಗಳನ್ನು ಕಟ್ಟಿ ಭೂಮಿಯನ್ನು ಉಳುತ್ತಿದ್ದನು, ಎಲೀಯನು ಎಲೀಷನು ಇದ್ದ ಸ್ಥಳಕ್ಕೆ ಹೋಗಿ ಅವನ ಮೇಲೆ ಕಂಬಳಿಯನ್ನು ಹಾಕಿದನು ಅಂದಿನಿಂದ ಹದಿನಾಲ್ಕು ವರುಷಗಳು, ಎಲೀಯನಿಗೆ ಒಬ್ಬ ಸೇವಕನಂತೆ ಎಲೀಷನು ಸೇವೆ ಮಾಡಿದನು ಎಂದು ಸತ್ಯವೇದ ತಿಳಿಸುತ್ತದೆ, ಆ ಸಮಯದಲ್ಲೆಲ್ಲಾ ಎಲೀಷನ ಬಯಕೆ "ಎಲೀಯನ ಮೇಲಿದ್ದ ಆತ್ಮನ ವರಗಳು ತನಗೆ ಬೇಕು ಆಗಲೇ ಜನರಿಗೆ ಒಳ್ಳೆಯದು ಮಾಡಲು ಸಾಧ್ಯ" ಕರ್ತನೇ ದೇವರು ಎಂದು ನಿರೂಪಿಸಲು ಸಾಧ್ಯ ಜನರನ್ನು ದೇವರ ಕಡೆಗೆ ತಿರುಗಿಸಲು ಸಾಧ್ಯ ಎಂಬುದಾಗಿತ್ತು ಎಲೀಯನು ಪರಲೋಕಕ್ಕೆ ತೆಗೆದುಕೊಳ್ಳಲ್ಪಡುವ ಸಮಯ ಬಂದಾಗ, ಎಲೀಯನು ಎಲೀಷನನ್ನು ನೋಡಿ, ನಾನು ನಿನ್ನಿಂದ ತೆಗೆಯಲ್ಪಡುವೆನು ನಿನಗೆ ನಾನೇನು ಮಾಡಬೇಕೆಂದು ಕೇಳಲು, ಎಲೀಷನು ನಿನ್ನಲ್ಲಿರುವ ಆತ್ಮನವರಗಳ ಎರಡರಷ್ಟು ತನಗೆ ಬೇಕೆಂದು ಕೇಳಿದನು, ಅವನ ಆಸೆಯಂತೆಯೇ ಎರಡರಷ್ಟು ಆತ್ಮನ ವರಗಳನ್ನು ಪಡೆದುಕೊಂಡನು.

ದೇವಮಕ್ಕಳೇ, ಎಲೀಯನಿಗೆ ಎಲೀಷನಿದ್ದಂತೆ, ಯೇಸುಕ್ರಿಸ್ತನಿಗೆ ನೀವು ಇರಬೇಕು. ಕ್ರಿಸ್ತನ ಬಯಕೆ ಏನು? "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ನಡೆಸುವ ಕ್ರಿಯೆಗಳನ್ನು ತಾನೂ ನಡೆಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡೆಸುವನು ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ" (ಯೋಹಾ 14:12) ತನಗಿಂತ ನೀವು ಅಧಿಕವಾಗಿ ಮಾಡ ಬೇಕೆಂಬುದೇ.

ನೆನಪಿಗೆ: **'ನಾನು ನಿನ್ನಲ್ಲಿ ನನ್ನ ಶಕ್ತಿಯನ್ನು ತೋರಿಸಿ ನನ್ನ ಹೆಸರನ್ನು ಲೋಕದಲ್ಲೆಲ್ಲಾ ಪ್ರಸಿದ್ಧಪಡಿಸಬೇಕೆಂಬ ಉದ್ದೇಶದಿಂದಲೇ ನಿನ್ನನ್ನು ಸಾಯಿಸದೆ ಉಳಿಸಿದ್ದೇನೆ' (ವಿಮೊ 9:16).**

## ನೊವೋಮಿಯೊಂದಿಗಿದ್ದ ರೂತಳು!

ಬೆಳಗ್ಗೆ : ಧರ್ಮೋ 32,33,34
ಸಂಜೆ : ಮಾರ್ಕ 15:33-47

**'ನಿನ್ನನ್ನು ಬಿಟ್ಟು ಹಿಂದಿರುಗಬೇಕೆಂದು ನನ್ನನ್ನು ಒತ್ತಾಯ ಪಡಿಸಬೇಡ' (ರೂತಳು 1:16).**

ಸತ್ಯವೇದದಲ್ಲಿ ನೊವೊಮಿಯನ್ನು, ರೂತಳನ್ನು ನೋಡುತ್ತೇವೆ. ನೊವೊಮಿಯು ಬೆತ್ಲೆಹೇಮನ್ನು ಬಿಟ್ಟು ಮೊವಾಬ್ ದೇಶಕ್ಕೆ ಹೋದಳು, ಅಲ್ಲಿ ಗಂಡನನ್ನೂ ಎರಡು ಗಂಡು ಮಕ್ಕಳನ್ನೂ ಕಳೆದುಕೊಂಡಳು, ಆಗ ಅವಳೊಂದಿಗೆ ಇಬ್ಬರು ಸೊಸೆಯರು ಮಾತ್ರ ಇದ್ದರು ತನ್ನ ಸೊಸೆಯರನ್ನು ನೋಡಿ, ನಿಮ್ಮ ತವರು ಮನೆಗೆ ಹಿಂದಿರುಗಿ ಹೋಗಿರಿ ನಾನು ನನ್ನ ಸ್ವದೇಶಕ್ಕೆ ಹಿಂತಿರುಗುವೆನು ಎಂದು ಹೇಳಿದಾಗ ಓರ್ಪಳು ತನ್ನ ಅತ್ತೆಗೆ ಮುದ್ದಿಟ್ಟು ಹೊರಟು ಹೋದಳು.

ಆದರೆ ರೂತಳೋ, "ನಿನ್ನನ್ನು ಬಿಟ್ಟು ಹಿಂದಿರುಗಬೇಕೆಂದು ಒತ್ತಾಯಿಸ ಬೇಡ ನೀನು ಎಲ್ಲಿಗೆ ಹೋದರೂ ನಾನು ಅಲ್ಲಿಗೆ ಬರುವೆನು; ನೀನು ವಾಸಿಸುವಲ್ಲೇ ನಾನೂ ವಾಸಿಸುವೆನು; ನಿನ್ನ ಜನರೇ ನನ್ನ ಜನರು; ನಿನ್ನ ದೇವರೇ ನನ್ನ ದೇವರು. ನೀನು ಸಾಯುವಲ್ಲೇ ನಾನೂ ಸಾಯುವೆನು ಅಲ್ಲೇ ನನಗೆ ಸಮಾಧಿಯಾಗಲಿ ಎಂದು ಹೇಳಿದಳು" (ರೂತ 1:16,17). ಆದ್ದರಿಂದಲೇ ನೊವೊಮಿಯ ಪ್ರೀತಿಯೆಲ್ಲಾವೂ ರೂತಳಿಗೆ ಸಿಕ್ಕಿತು. ರೂತಳು ತನ್ನ ಅತ್ತೆಯನ್ನು ಬಹಳವಾಗಿ ಪ್ರೀತಿಸಿದಳು, ನೊವೊಮಿಗಾಗಿ ಅವಳು ತನ್ನ ದೇಶವನ್ನು ಬಂಧುಗಳನ್ನೂ ಬಿಡಬೇಕಾಯಿತು, ಹಳೆಯ ದೈವವಾದ ಕೆಮೋಶ್ ದೇವತೆಯನ್ನು ಬಿಟ್ಟು ಇಸ್ರಾಯೆಲ್ಯರ ದೇವರಾದ ಯೆಹೋವನನ್ನು ಹಿಂಬಾಲಿಸಲು ತೀರ್ಮಾನಿಸಿದಳು ರೂತಳು ನೊವೋಮಿಯನ್ನು ಮಾತ್ರವಲ್ಲ, ಯೆಹೋವನನ್ನು ಭದ್ರವಾಗಿ ಹಿಡಿದುಕೊಂಡಳು, ವಿಗ್ರಹಗಳನ್ನು ದೂರಮಾಡಿದಳು. ಸತ್ಯವೇದ ಹೇಳುತ್ತದೆ "ನೀನು ಯಾವಾತನ ರೆಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುವದಕ್ಕೆ ಬಂದೆಯೋ ಆ ಇಸ್ರಾಯೇಲ್ ದೇವರಾದ ಯೆಹೋವನು ನಿನ್ನಗೆ ಉತ್ತಮವಾದ ಪ್ರತಿಫಲವನ್ನು ಅನುಗ್ರಹಿಸಲಿ" ಎಂದು (ರೂತಳು 2:12) ಅತ್ತೆಯಾದ ನೊವೊಮಿ ಹಾಗೂ ಸೊಸೆಯಾದ ರೂತಳ ನಡುವೆ ಒಳ್ಳೆಯ ಬಾಂಧವ್ಯ ಬೆಸೆಯಲ್ಪಟ್ಟಿತ್ತು.

ದೇವಮಕ್ಕಳೇ, ಕ್ರೈಸ್ತ ಕುಟುಂಬಗಳಲ್ಲಿ ಅತ್ತೆ ಸೊಸೆಯರ ನಡುವಿನ ಸಂಬಂಧ ತಾಯಿ ಮಕ್ಕಳ ಸಂಬಂಧವಾಗಿರಬೇಕು ಕ್ರಿಸ್ತಿಯ ಜೀವಿತವು ಪ್ರೀತಿಯ ಜೀವಿತವೇ ಹೊರತು ಹಗೆತನದ ಜೀವಿತವಲ್ಲ. ರೂತಳು ನೊವೊಮಿಯನ್ನು ಪ್ರೀತಿಸಿದ್ದರಿಂದ ಕರ್ತನು ಅವಳನ್ನು ಆಶೀರ್ವದಿಸಿದನು. ಈ ಸಂತತಿಯಲ್ಲಿ ದಾವೀದನೂ ಹುಟ್ಟಿದನು.

ನೆನಪಿಗೆ: **'ನೆರೆಹೊರೆಯ ಹೆಂಗಸರು ನೊವೊಮಿಗೆ ಒಬ್ಬ ಮಗನು ಹುಟ್ಟಿದ್ದಾನೆಂದು ಹೇಳಿ ಅವನಿಗೆ ಓಬೇದನೆಂದು ಹೆಸರಿಟ್ಟರು, ಇವನೇ ಇಷಯನಿಗೆ ತಂದೆಯೂ, ದಾವೀದನಿಗೆ ಅಜ್ಜನೂ ಆದನು' (ರೂತಳು 4:17).**

## ಅಬ್ರಹಾಮನೂ, ಲೋಟನೂ!

ಬೆಳಗ್ಗೆ : ಯೆಹೋಶುವ 1,2,3
ಸಂಜೆ : ಮಾರ್ಕ 16

**'ಯೆಹೋವನು ಹೇಳಿದ ಮೇರೆಗೆ ಅಬ್ರಾಮನು ಹೊರಟುಹೋದನು; ಲೋಟನೂ ಸಂಗಡ ಹೋದನು'(ಆದಿ 12:4).**

ಕರ್ತನು ಅಬ್ರಹಾಮನಿಗೆ ದರ್ಶನ ನೀಡಿ ಕಾನಾನನ್ನು ವಾಗ್ದಾನ ಮಾಡಿದನು "ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟುಹೋಗು" ಎಂದು ಹೇಳಿದನು (ಆದಿ 12:1). ಲೋಟನಿಗೆ ಆ ದರ್ಶನಸಿಗದಿದ್ದರೂ, ಅಬ್ರಹಾಮನೊಂದಿಗೆ ಅವನೂ ಸೇರಿಕೊಂಡನು, ನಿಶ್ಚಯವಾಗಿ ಅಬ್ರಹಾಮನಿಗೆ ಹೇಳಿದ ಮಾತನ್ನು ಕರ್ತನು ನೆರವೇರಿಸುವನು ಎಂದು ಲೋಟನು ನೆನಸಿದನು.

ಕಾನಾನನ್ನು ಸ್ವಾಧೀನ ಪಡಿಸಿಕೊಳ್ಳಲು, ಅಬ್ರಹಾಮನು ಎಲ್ಲಾ ಕಷ್ಟಗಳನ್ನು ಶೋಧನೆಗಳನ್ನು ಸಹಿಸಿದನು. ಆದರೆ ಲೋಟನ ಕಣ್ಣುಗಳಿಗೆ ಕಾನಾನಿಗಿಂತಲೂ ಸೊದೋಮ್ ಗೊಮೋರ ಬಹಳ ಚೆನ್ನಾಗಿ ಕಂಡಿತು ಆದ್ದರಿಂದ ಅಬ್ರಹಾಮನ ಸಹವಾಸವನ್ನು ಅಲ್ಪವಾಗಿ ಎಣಿಸಿ ನೀರಾವರಿ ಸ್ಥಳವಾದ ಸೊದೋಮ್ ಗೋಮೋರಿನಲ್ಲಿ ನೆಲೆಸಲು ತೀರ್ಮಾನಿಸಿದನು ಸೊದೋಮಿನಲ್ಲಿದ್ದ ದುರ್ಮಾರ್ಗಿಗಳೊಂದಿಗೆ ಸಂಪರ್ಕ ಇಟ್ಟುಕೊಂಡನು, ಇದರಿಂದ ಆದಂಥಹ ಪರಿಣಾಮವೇನು? ಸೊದೋಮ್ ಗೊಮೋರದ ರಾಜರಿಗೆ ವಿರೋಧವಾಗಿ ಯುದ್ಧಕ್ಕೆ ಬಂದ ನಾಲ್ಕುರಾಜರು ಜಯಗಳಿಸಿದಾಗ, ಲೋಟನ ಕುಟುಂಬವೂ ಸೆರೆ ಒಯ್ಯಲ್ಪಟ್ಟಿತು. ಅಬ್ರಹಾಮನು ಆ ರಾಜರ ಮೇಲೆ ಯುದ್ಧ ಮಾಡಿ, ಸೊದೋಮಿನ ಜನರನ್ನೂ, ಲೋಟನ ಕುಟುಂಬವನ್ನೂ ಸೆರೆಯಿಂದ ಬಿಡಿಸಿಕೊಂಡು ಬಂದನು ಆಗಲಾದರೂ ಲೋಟನಿಗೆ, ಅಬ್ರಹಾಮನೊಂದಿಗೆ ಸೇರಿ ಇರುವದರ ಮಹತ್ವವನ್ನು ಅರಿಯ ಬಹುದಾಗಿತ್ತು. ಆದರೆ ಅವನು ತಿಳಿದುಕೊಳ್ಳಲಿಲ್ಲ. ಸೊದೋಮ್ ಗೊಮೋರದ ಜನರ ಭಯಂಕರವಾದ ಪಾಪಗಳಿಂದಾಗಿ ಕರ್ತನು ಆ ಪಟ್ಟಣಗಳನ್ನು ಅಗ್ನಿಗಂಧಕಗಳಿಂದ ನಾಶಮಾಡಲು ತೀರ್ಮಾನಿಸಿದನು ಲೋಟನ ಕುಟುಂಬ ಸೊದೋಮನ್ನು ಬಿಟ್ಟು ಓಡಬೇಕಾಯಿತು (ಆದಿ 19:17) ಲೋಟನ ಹೆಂಡತಿ ಹಿಂತಿರುಗಿ ನೋಡಿ ಉಪ್ಪಿನ ಕಂಬವಾದಳು. ಲೋಟನ ಹೆಣ್ಣು ಮಕ್ಕಳು, ತಂದೆಯ ಮೂಲಕ ಸಂತತಿಯನ್ನು ಪಡೆದು, ದೇವರಿಂದ ನಿರಾಕರಿಸಲ್ಪಟ್ಟರು. ಆ ಸಂತತಿ ದೇವಜನರಿಗೆ ವಿರೋಧವಾದ ಸಂತತಿಯಾಯಿತು.

ದೇವಮಕ್ಕಳೇ, ನೀವು ಯಾವಾಗಲೂ ಕರ್ತನೊಂದಿಗೂ ಕರ್ತನ ಸೇವಕರೊಂದಿಗೂ, ಸಭೆಯೊಂದಿಗೂ ಅನ್ಯೋನ್ಯತೆಯುಳ್ಳವರಾಗಿರಿ ಕರ್ತನನ್ನು ಯಥಾರ್ಥವಾಗಿ ಹಿಂಬಾಲಿಸುವ ನೀತಿವಂತರ ದರ್ಶನದೊಂದಿಗೆ ಒಂದಾಗಿರಿ. ಆಹಾ ಸಹೋದರರು ಒಂದಾಗಿರುವದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು (ಕೀರ್ತ 133:1).

ನೆನಪಪಿಗೆ: **'ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವದೇ ಇಲ್ಲ' (ಕೀರ್ತ1:3).**

ಮಾರ್ಚ್ 20

# ದೇವರ ಬಳಿಗೆ ಬನ್ನಿರಿ!

ಬೆಳಿಗ್ಗೆ : ಯೆಹೋ 4,5,6
ಸಂಜೆ : ಲೂಕ 1:1-25

**'ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು ಪಾಪಿಗಳೇ, ನಿಮ್ಮ ಕೈಗಳನ್ನು ಶುಚಿಮಾಡಿಕೊಳ್ಳಿರಿ' (ಯಾಕೋ 4:8).**

ಇದು ಕರ್ತನನ್ನು ಹುಡುಕುವ ಕಾಲವಾಗಿದೆ, ನೀವು ಕರ್ತನೊಂದಿಗಿರುವಿರಾದರೆ, ಆತನು ನಿಮ್ಮೊಂದಿಗಿರುವನು ಕರ್ತನೊಂದಿಗೆ ಒಂಟಿಯಾಗಿ ಕಾಲಕಳೆಯಲು ಸಮಯವನ್ನು ಮೀಸಲಿಡುವಿರಾದರೆ, ಆ ದಿನವೆಲ್ಲಾ ದೇವ ಪ್ರಸನ್ನತೆಯೂ, ದೇವ ಕೃಪೆಯೂ ನಿಮ್ಮನ್ನು ಆವರಿಸಿಕೊಳ್ಳುವದು. ಮನುಷ್ಯರನ್ನು ಮೆಚ್ಚಿಸಲು ಬಯಸದೆ, ಕರ್ತನನ್ನೇ ಮೆಚ್ಚಿಸಿ, ಆತನಿಗೆ ಪ್ರಿಯವಾದದ್ದನ್ನು ಮಾಡುವಾಗ, ಆತನು ಸಂತೋಷ ಪಡುವನು.

ಒಂದು ಮಾರುಕಟ್ಟೆಯಲ್ಲಿ ಮಲ್ಲಿಗೆ ಹೂ ಮಾರುವ ಒಬ್ಬ ಹೆಂಗಸು ಇದ್ದಳು ಅದೇ ಸ್ಥಳದಲ್ಲಿ ಒಣಗಿದ ಮೀನು ಮಾರುವವಳು ವ್ಯಾಪಾರ ಮಾಡುತ್ತಿದ್ದಳು, ಒಂದು ದಿನ ಅತಿಯಾದ ಮಳೆ ಹಿಡಿಯಿತು. ಹೂ ಮಾರುತ್ತಿದ್ದವಳು ಮೀನು ಮಾರುವವಳ ಹತ್ತಿರ ಬಂದು ಇಂದು ಮಳೆ ನಿಲ್ಲುವ ಸೂಚನೆ ಇಲ್ಲ, ನನ್ನ ಮನೆ ಹತ್ತಿರವೇ ಇದೆ. ಇಂದು ರಾತ್ರಿ ನನ್ನ ಮನೆಯಲ್ಲೇ ತಂಗಿದ್ದು ನಾಳೆ ಹೋಗೆಂದು ಹೇಳಿ ತನ್ನ ಮನೆಗೆ ಕರೆದುಕೊಂಡು ಬಂದು, ಮಲಗಲು ಹಾಸಿಗೆಯನ್ನು ಹೊದಿಕೆಯನ್ನು ಕೊಟ್ಟಳು. ಒಂದು ಹೊತ್ತಿನಲ್ಲಿ ಮೀನು ಮಾರುವವಳು ಏನು ಮಾಡುತ್ತಿರುವಳೆಂದು ನೋಡಲು ಬಂದಾಗ, ಹಾಸಿಗೆ ಖಾಲಿ ಇತ್ತು. ಎಲ್ಲಿ ಹೋದಳೆಂದು ನೋಡಲು, ಅವಳು ಸ್ನಾನದ ಮನೆಗೆ ಹೋಗಿ ತನ್ನ ಮೀನಿನ ಬುಟ್ಟಿಯನ್ನು ತಲೆದಿಂಬಾಗಿಟ್ಟುಕೊಂಡು ಮಲಗಿದ್ದಳು ಹೊತ್ತಾರೆ ಅವಳು ಯಾಕೆ ಹಾಗೆ ಮಾಡಿದಳೆಂದು ಕೇಳಿದಾಗ, ನಿಮ್ಮ ಮನೆಯಲ್ಲಿ ಮಲ್ಲಿಗೆ ಹೂವಿನ ವಾಸನೆಯಿಂದಾಗಿ, ನನಗೆ ತಲೆನೋವು ಬಂದಿತೆಂದಳು.

ಹೀಗೆಯೇ ಕೆಲವರಿಗೆ ದೇವ ಪ್ರಸನ್ನತೆಯಿಂದ ಕೂಡಿದ ದೇವಾಲಯ ದೇವಜನರ ಸಹವಾಸ ಹಿಡಿಸುವದಿಲ್ಲ ಕೆಲವರಿಗೆ ಪರಲೋಕವೂ, ಅದರಲ್ಲಿರುವ ಭಾಗ್ಯವೂ ಹಿಡಿಸುವದಿಲ್ಲ, ಈ ಪ್ರಾಪಂಚಿಕ ಜೀವಿತದಲ್ಲಿಯೇ ಮುಳುಗಿ ಅದನ್ನು ಬಿಟ್ಟು ದೇವರ ಪ್ರಸನ್ನತೆಯನ್ನು ಅನುಭವಿಸಲು, ಸಹಿಸಲು ಇಷ್ಟಪಡುವದಿಲ್ಲ, ದೇವರೊಂದಿಗೆ ನಡೆಯುವವರು 24 ಗಂಟೆಯೂ, ಕರ್ತನ ಪ್ರಸನ್ನತೆಯಲ್ಲೂ, ದಯೆಯಲ್ಲೂ, ಕೃಪೆಯಲ್ಲೂ ನೆಲೆಗೊಂಡಿರಲು ಬಯಸುವರು.

ದೇವಮಕ್ಕಳೇ, ಕರ್ತನ ಸಮೀಪ್ಯವನ್ನು ಬಯಸಿರಿ. ಆತನ ಪ್ರಸನ್ನತೆಯನ್ನು ಕೃಪೆಯನ್ನು ಅನುಭವಿಸಿರಿ. ಕರ್ತನೊಂದಿಗಿರುವವರೇ ಪರಲೋಕ ರಾಜ್ಯವನ್ನು ಸೇರುವವರು. ದಾವೀದನು ಹೇಳುತ್ತಾನೆ "ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸಮಾಡುತ್ತಾ ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನ ಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರು ನೋಡುತ್ತಿರುವೆನು" (ಕೀರ್ತ 27:4) ಎಂದು.

ನೆನಪಪಿಗೆ: **'ನೀವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕ ಪಡಿರಿ ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು' (ಮತ್ತಾ 6:33).**

| | | |
|---|---|---|
| **ಮಾರ್ಚ್ 21** | **ಪೌಲನೊಂದಿಗಿದ್ದ ತಿಮೊಥೆಯನು!** | ಬೆಳಗ್ಗೆ : ಯೆಹೋ 7,8,9<br>ಸಂಜೆ : ಲೂಕ 1:26-38 |

**'ಮಗನು ತಂದೆಗೆ ಹೇಗೋ, ಹಾಗೆಯೇ ಅವನು ನನ್ನ ಜೊತೆಯಲ್ಲಿ ಸುವಾರ್ತಾ ಪ್ರಚಾರಕ್ಕಾಗಿ ಕಷ್ಟಪಟ್ಟು ಕೆಲಸ ನಡಿಸಿದನೆಂಬದು ನಿಮಗೆ ಗೊತ್ತುಂಟು' (ಫಿಲಿ 2:22).**

ತಿಮೊಥೆಯನ ಹೆಸರು ಪ್ರಪ್ರಥಮವಾಗಿ ಅ.ಕೃ 16:1ರಲ್ಲಿ ಕಂಡು ಬರುವದು, ಅವನ ತಾಯಿಯ ಹೆಸರು ಯಾನೀಕೆ ಅಜ್ಜಿಯ ಹೆಸರು ಲೋಯಿ (2ತಿಮೊ 1:5). ಅವನ ತಂದೆ ಗ್ರೀಕ್ ದೇಶದವನು ಅವನ ಕುರಿತು ಸತ್ಯವೇದದಲ್ಲಿ ನಮಗೆ ಏನೂ ತಿಳಿದು ಬರುವದಿಲ್ಲ ತಿಮೊಥೆಯನು ಅವನ ಯೌವನ ಪ್ರಾಯದಿಂದ ಪೌಲನೊಂದಿಗೆ ಜೊತೆಗೂಡಿದ್ದನು ಜೊತೆ ಸೇವಕನಾಗಿದ್ದನು.

ಸಾಮ್ಯದಲ್ಲಿ ಆ ಪ್ರೀತಿಯುಳ್ಳ ತಂದೆ ತನ್ನ ಹಿರಿಯ ಮಗನಿಗೆ "ಮಗನೇ, ನೀನು ಯಾವಾಗಲೂ ನನ್ನೊಂದಿಗಿರುವಿ, ನನ್ನದೆಲ್ಲಾ ನಿನ್ನದಾಗಿರುವದು" ಎಂದು ಹೇಳುವಂತೆ, ಅಪೊ, ಪೌಲನು "ಕರ್ತನಲ್ಲಿ ನನ್ನ ಮಗನಾದ ತಿಮೊಥೆಯ (1ಕೊರಿ 4:17). ನಂತರ "ವಿಶ್ವಾಸದಲ್ಲಿ ಉತ್ತಮನಾದ ತಿಮೊಥೆಯ" ಎಂದು ಹೇಳುತ್ತಾನೆ. ಆದಿ ಸಭೆಯ ಚರಿತ್ರೆಯನ್ನು ಓದುವಾಗ, ಅಪೊ, ಪೌಲನ ನಂತರ, ತಿಮೊಥೆಯನು, ನಾಯಕತ್ವವಹಿಸಿ ಮಹಿಮೆಯಾಗಿ ಸೇವೆ ಮಾಡಿದನೆಂದೂ, ಅದ್ಭುಗಳನ್ನು ಸೂಚಕ ಕಾರ್ಯಗಳನ್ನು ಮಾಡಿದನೆಂದು ತಿಳಿದು ಬರುತ್ತದೆ. ಇಬ್ರಿಯರಿಗೆ ಬರೆದ ಪತ್ರಿಕೆಯನ್ನು ಅಪೊ, ಪೌಲನಲ್ಲ, ತಿಮೊಥೆಯನೆ ಬರೆದಿರಬಹುದೆಂದು ಅನೇಕ ವೇದಪಂಡಿತರು ಹೇಳುವರು ಅಪೊ, ಪೌಲನೊಂದಿಗೆ, ತಿಮೊಥೆಯನು ಇದ್ದದ್ದರಿಂದ, ದೈವೀಕಜ್ಞಾನ, ಸತ್ಯವೇದದ ಆಳ, ದೇವರಹಸ್ಯಗಳು, ಪ್ರಕಟಣೆಗಳು ಅವನ ಬಳಿ ಇತ್ತು.

ದೇವಜನರೇ, ನೀವು ಕ್ರಿಸ್ತನೊಂದಿಗೂ ಪವಿತ್ರಾತ್ಮನೊಂದಿಗೂ ಇದ್ದು ದೇವ ಪ್ರಸನ್ನತೆಯಲ್ಲಿ ನೆಲೆಗೊಂಡವರಾಗಿರ್ರಿ, ನಿಶ್ಚಯವಾಗಿ ನಿಮಗೆ ಮುಂದೆ ಒಂದು ಕಾಲ ಇರುವದು, ನೀವು ಕರ್ತನೊಂದಿಗಿರುವಿರಾದರೆ, ಸೈತಾನನು ನಿಮ್ಮ ಸಮಿಪಕ್ಕೆ ಬರಲು ಸಾಧ್ಯವಿಲ್ಲ ಯಾವ ಪಾಪ ಶೋಧನೆಗಳೂ ನಿಮ್ಮನ್ನು ಜಯಿಸಲಾರವು. ನಿಶ್ಚಯವಾಗಿ ಪರಿಶುದ್ಧ ಜೀವಿತವನ್ನು ಜೀವಿಸುವಿರಿ, ಈ ಪ್ರಪಂಚದ ಸ್ವಲ್ಪಕಾಲದ ಜೀವಿತದಲ್ಲಿ, ಕ್ರಿಸ್ತನೊಂದಿಗೆ, ಮೆಚ್ಚಿಕೆಯಾಗಿ ಜೀವಿಸುವಿರಾದರೆ, ನಿತ್ಯತ್ವದಲ್ಲೂ ಸದಾಕಾಲವೂ ಕರ್ತನೊಂದಿಗೆ ಜೀವಿಸುವಿರಿ. ಯೇಸುಕ್ರಿಸ್ತನು ಹೇಳಿರುವನು, ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು" (ಯೋಹಾ 14:3) ಎಂದು ಯಾವ ಸ್ಥಳವನ್ನು ತಂದೆಯಾದ ದೇವರು, ತನ್ನ ಮಗನಾದ ಯೇಸುಕ್ರಿಸ್ತನಿಗೆ ನಿತ್ಯತ್ವದಲ್ಲಿ ಕೊಟ್ಟಿರುವನೋ, ಅದೇ, ಸ್ಥಳದಲ್ಲಿ ನಾವೂ, ಆತನೊಂದಿಗೆ ಸದಾಕಾಲವೂ ಜೀವಿಸುವೆವು. ಆದ್ದರಿಂದ, "ನನ್ನ ಜೀವಮಾನಕಾಲವೆಲ್ಲಾ ಶುಭವು, ಕೃಪೆಯೂ ನನ್ನನ್ನು ಹಿಂಬಾಲಿಸುವವು. ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು" ಎಂದು ಸಂತೋಷದಿಂದ ಹೇಳಿರಿ.

**ನೆನಪಿಗೆ: 'ನಾವಾದರೋ ಪರಲೋಕಸಂಸ್ಥಾನದವರು; ಕರ್ತನಾದ ಯೇಸುಕ್ರಿಸ್ತನು ಅಲ್ಲಿಂದಲೇ ರಕ್ಷಕನಾಗಿ ಬರುವದನ್ನು ಎದುರು ನೋಡುತ್ತಾ ಇದ್ದೇವೆ' (ಫಿಲಿ 3:20).**

## ನಿನ್ನದಾಗಿರುವದು!



**'ಕಂದಾ, ನೀನು ಯಾವಾಗಲೂ ನನ್ನ ಸಂಗಡ ಇದ್ದೀ, ಮತ್ತು ನನ್ನದೆಲ್ಲಾ ನಿನ್ನದೇ' (ಲೂಕ 15:31).**

ನಿನ್ನದಾಗಿರುವದು ಎಂದು ಪರಮ ತಂದೆ ಹೇಳುವಾಗ, ಅದರಲ್ಲಿ ವರ್ಣಿಸಲಶಕ್ಯವಾದ ಭಾಗ್ಯಗಳು ಇರುವವು, ಅದನ್ನು ಆತ್ಮೀಕ ಕಣ್ಣುಗಳಿಂದ ಕಂಡ ಅಪೊ, ಪೌಲನು "ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ" ಎಂದು ಹೇಳುತ್ತಾನೆ (2ಕೊರಿ 9:15). ಕರ್ತನು ನಮಗೆ ವಾಗ್ದಾನ ಮಾಡಿದ್ದು ಮೊದಲನೆಯದಾಗಿ, ಆತನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು (ಆದಿ 3:15), ಎರಡನೆಯದು ಪವಿತ್ರಾತ್ಮನನ್ನು ತನ್ನ ಸ್ವಂತ ಮಗನೆಂದೂ ನೋಡದೆ ನಮ್ಮೆಲ್ಲರಿಗಾಗಿ ಆತನನ್ನು ಒಪ್ಪಿಸಿಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೇ ಇರುವನೇ? (ರೋಮಾ 8:32).

ಕರ್ತನು ಎಲ್ಲರಿಗೂ ಕೊಟ್ಟ ವರಗಳು ಉಂಟು ಸೂರ್ಯನನ್ನು ಒಳ್ಳೇಯವರ ಮೇಲೆಯೂ, ಕೆಟ್ಟವರ ಮೇಲೆಯೂ ಪ್ರಕಾಶಿಸುವಂತೆ ಮಾಡಿರುವನು. ಮಳೆ, ಗಾಳಿ ಮಾತ್ರವಲ್ಲ, ಜೀವ, ಸುಖ, ಬಲ ಎಲ್ಲವೂ ಆತನ ಬಹುಮಾನವೇ, ಮೃಗ, ಪಕ್ಷಿ, ಮರ, ಗಿಡಗಳೆಲ್ಲವೂ ಕರ್ತನ ಬಹುಮಾನವೇ. ಆದರೆ ದೇವರ ಮಕ್ಕಳಿಗೆಂದು, ವಿಶೇಷವಾದ ಪಾಪಕ್ಷಮಾಪಣೆಯನ್ನೂ, ಪವಿತ್ರಾತ್ಮನ ಅಭಿಷೇಕವನ್ನೂ, ದೈವೀಕ ಸಮಾಧಾನವನ್ನೂ, ಸಂತೋಷವನ್ನೂ, ನಿತ್ಯಜೀವವನ್ನೂ ಅನುಗ್ರಹಿಸುವನು.

ನೆಬೂಕದ್ನೆಚ್ಚರನಿಗೆ ತನಗೆ ಕೊಟ್ಟ ರಾಜ್ಯಾಡಳಿತ, ಸಂಪತ್ತು ಎಲ್ಲಾ ಕರ್ತನ ಬಳಿಯಿಂದ ಬಂದದ್ದು ಎಂದು ತಿಳಿದಿರಲಿಲ್ಲ, ಅವನು ಹೆಮ್ಮೆಯಿಂದ "ನನ್ನ ಮಹಿಮಾ ಪ್ರತಾಪಕ್ಕಾಗಿ ನಾನು ಕಟ್ಟಿದ ಬ್ಯಾಬಿಲೋನ್ ಅಲ್ಲವಾ? ಎಂದು ಹೇಳಿದಾಗ, ಕರ್ತನು ಅವನನ್ನು ಸಿಂಹಾಸನದಿಂದ ತಳ್ಳಿ ಹಾಕಿದನು. ಹುಚ್ಚನಂತಾಗಿ, ಮೃಗದಂತೆ ಹುಲ್ಲು ಮೆಯ್ದನು, ಆಶೀರ್ವಾದಗಳನ್ನು ಮೂರು ಭಾಗವಾಗಿ ವಿಂಗಡಿಸಬಹುದು, ಹೆತ್ತವರು ನೀಡುವ ಆಶೀರ್ವಾದ, ನಮ್ಮ ಶರೀರವನ್ನು ಹೆತ್ತವರಿಂದ ಪಡೆಯುತ್ತೇವೆ, ಅವರು ನಮ್ಮನ್ನು ಸಾಕಿ, ಸಲಹಿ, ಯೋಗ್ಯವ್ಯಕ್ತಿಗಳನ್ನಾಗಿ ಬೆಳೆಸಲು ಪ್ರಯಾಸ ಪಡುವರು. ಅವರನ್ನು ಗೌರವಿಸಿ ಸಂತೋಷ ಪಡಿಸುವಾಗ, ಅವರು ಮನಃಪೂರ್ತಿ ಆಶೀರ್ವದಿಸುವರು. ಎರಡನೆಯದು, ಸೈತಾನನಿಂದ ಬರುವ ಆಶಿರ್ವಾದ ಅವನು ಲೋಕದ ಮಹಿಮೆಯನ್ನು ಸುಖ ಸಂತೋಷವನ್ನು ತೋರಿಸಿ ನನ್ನನ್ನು ಆರಾಧಿಸು, ಇವೆಲ್ಲವನ್ನು ನಿನಗೆ ಕೊಡುವೆನು ಎಂದು ಹೇಳುವನು ಅನೇಕ ದುರ್ಮಾರ್ಗಗಳಿಂದ ಸಂಪತ್ತನ್ನುಗಳಿಸಬಹುದು. ಮೂರನೆಯದಾಗಿ ಕರ್ತನ ಆಶೀರ್ವಾದ, ಕರ್ತನು ಕೊಡುವ ಆಶೀರ್ವಾದವು ದುಃಖವನ್ನು ಕೂಡಿಸಿಡುವದಿಲ್ಲ.

ದೇವಮಕ್ಕಳೇ, ದೇವರು ಕೊಡುವ ವರಗಳಿಗಾಗಿ, ಆಶೀರ್ವಾದಗಳಿಗಾಗಿ, ಆತನನ್ನು ಅನುದಿನವೂ ಸ್ತುತಿಸಿರಿ.

**ನೆನಪಿಗೆ: 'ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತಯೇಸುವಿನಲ್ಲಿ ಅನುಗ್ರಹಿಸಿದ್ದಾನೆ' (ಎಫೆ 1:3).**

# ದಾವೀದನ ಅನುಭವ!



**'ಸದಾ ನಿನ್ನ ಸನ್ನಿಧಿಯಲ್ಲಿಯೇ ಇದ್ದೇನೆ, ನೀನು ನನ್ನ ಬಲಗೈಯನ್ನು ಹಿಡಿದಿದ್ದೀ' (ಕೀರ್ತ 73:23).**

ಇಲ್ಲಿ ದಾವೀದನು ಕಳೆದು ಹೋದ ಕಾಲದ ಅನುಭವವನ್ನು ಹೇಳಲಿಲ್ಲ. ಯಾವಾಗಲೂ ಅಥವಾ ಸದಾ ಎನ್ನುವ ಮಾತು ಭೂತಕಾಲವನ್ನೂ, ವರ್ತಮಾನಕಾಲವನ್ನೂ, ಭವಿಷ್ಯತ್ ಕಾಲವನ್ನೂ, ಸೂಚಿಸುವದು "ಕರ್ತನನ್ನು ನಾನು ಸದಾಕಾಲವೂ ಸ್ತೋತ್ರ ಮಾಡುವೆನು" (ಕೀರ್ತ 34:1) ಎಂದೂ ಹೇಳುತ್ತಾನೆ, ಈ ಭೂಮಿಯಲ್ಲಿ ನಿಮ್ಮ ಜೀವಿತ ಹೇಗಿರುವದೋ, ಅದರ ಮೇಲೆ ನಿಮ್ಮ ಪರಲೋಕದ ಜೀವಿತ ನಿಂತಿರವದು ನೀವು ಯಾವಾಗಲೂ ಕರ್ತನೊಂದಿಗಿರುವಿರಾದರೆ. ಆತನು ನಿಮಗೆ ತೃಪ್ತಿಯನ್ನೂ ಮನಸ್ಸ ಸಮಾಧಾನವನ್ನೂ ನೀಡುವನು.

ಗೆನೆಜರೇತ್ ಸೀಮೆಯ ಕಡಲಿನ ಪಕ್ಕದಲ್ಲಿದ್ದ ಸಮಾಧಿಯ ಗವಿಗಳೊಳಗೆ ದೆವ್ವಹಿಡಿದವನೊಬ್ಬನು ಇದ್ದನು. ಅವನು ದೆವ್ವಗಳೊಂದಿಗೇ ಇರಲು ಬಯಸಿದನು ಯೇಸುವನ್ನು ಕಂಡೊಡನೆ ಅವನೊಳಗಿದ್ದ ದೆವ್ವಗಳು ಆತನಿಗೆ ಅಡ್ಡಬಿದ್ದು ಯೇಸುವೇ ಪರಾತ್ಪರನಾದ ದೇವರ ಮಗನೇ ನಮ್ಮಗೊಡವೆ ನಿನಗೇಕೆ? ದೇವರಾಣೆ ನನ್ನನ್ನು ಕಾಡಬೇಡ ಎಂದು ಹೇಳಿದನು. ಯೇಸು ಗದರಿಸಲು, ಅವನೊಳಗಿದ್ದ ದೆವ್ವಗಳೆಲ್ಲಾ ಅಲ್ಲಿದ್ದ ಹಂದಿಗಳೊಳಗೆ ಹೊಕ್ಕವು ಅವೆಲ್ಲವೂ ಕಡಲಿನಲ್ಲಿ ಬಿದ್ದು ಉಸಿರುಗಟ್ಟಿ ಸತ್ತುಹೋದವು. ಪಾಪಭೋಗಗಳನ್ನು ಬಯಸುವವರು, ಸೈತಾನನೊಂದಿಗೆ ಅನ್ಯೋನ್ಯದಿಂದಿರುವರು. ದೆವ್ವಗಳಿಂದ ಮುಕ್ತನಾದ ಆ ಮನುಷ್ಯನು ಈಗ ಕ್ರಿಸ್ತನ ಪಾದಗಳಲ್ಲಿ ಕುಳಿತಿರುವನು. ಯೇಸುವನ್ನು ಸಂಧಿಸುವ ಮೊದಲು ವಸ್ತ್ರವಿಲ್ಲದವನಾಗಿದ್ದನು, ಈಗಲಾದರೂ ಅವನಿಗೆ ಒಳ್ಳೆಯ ವಸ್ತ್ರ ಸಿಗುವಂತೆ ಯೇಸು ಸಹಾಯ ಮಾಡಿದನು, ಆತ್ಮಕ್ಕೆ ಒಂದು ವಸ್ತ್ರವನ್ನು ಕೊಟ್ಟನು ಅದು ರಕ್ಷಣೆಯ ವಸ್ತ್ರ, ನೀತಿಯೆಂಬ ವಸ್ತ್ರ (ಯೆಶಾ 61:10) ಅವನು ಯೇಸುವಿನೊಂದಿಗೆ ಇರಬೇಕೆಂದು ಬಯಸಿದನು, ಆದರೆ ಆ ಗ್ರಾಮದ ಜನರ ಬಯಕೆ ತದ್ವಿರುದ್ಧವಾಗಿತ್ತು. ಅವನು ಒಬ್ಬ ಹೊಸ ಮನುಷ್ಯನಾಗಿ ಯೇಸುವಿನೊಂದಿಗೆ ಬಾಳುವದನ್ನು ಇಷ್ಟಪಡಲಿಲ್ಲ. ಅವರ ಆಶೆಯೆಲ್ಲಾ ಹಂದಿಗಳ ಮೇಲೆಯೇ ಇತ್ತು. ಹೊಸ ಜೀವಿತವನ್ನು ನೀಡುವ ಯೇಸುವನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಇಷ್ಟಪಡಲಿಲ್ಲ. ತಮ್ಮ ಗ್ರಾಮದ ಎಲ್ಲೆಯನ್ನು ಬಿಟ್ಟು ಹೋಗುವಂತೆ ಕೇಳಿಕೊಂಡರು.

ದೇವಮಕ್ಕಳೇ, ಯೇಸುವಿನೊಂದಿಗೆ ಸದಾ ಇರಬೇಕೆಂಬ ಬಯಕೆ ನಿಮಗೆ ಇರುವದಾ? ದಾವೀದನಂತೆ ಸದಾಕಾಲವೂ ಕರ್ತನೊಂದಿಗೆ ಇರುವೆವೆಂದು ಹೇಳಲು ಸಾಧ್ಯವಾ? ಆಗ ಕರ್ತನು ನಿಮ್ಮನ್ನು ನೋಡಿ "ನನ್ನ ಮಗನೇ, ಮಗಳೇ, ನೀನು ಯಾವಾಗಲೂ ನನ್ನೊಂದಿಗಿರುವಿ ನನ್ನದೆಲ್ಲಾ ನಿನ್ನದೇ" ಎಂದು ಹೇಳುವನು.

ನೆನಪಿಗೆ: **'ನಿನ್ನ ಚಿತ್ತವನ್ನು ತಿಳಿಯಪಡಿಸಿ ನನ್ನನ್ನು ನಡಿಸಿ ತರುವಾಯ ಮಹಿಮೆಗೆ ಸೇರಿಸಿಕೊಳ್ಳುವಿ' (ಕೀರ್ತ 73:24).**

# ಯೇಸುವಿನಿಂದ ಧೈರ್ಯ!

ಬೆಳಿಗ್ಗೆ : ಯೆಹೋ 16,17,18
ಸಂಜೆ : ಲೂಕ 2:1–20

**'ಪೇತ್ರ, ಯೋಹಾನರು ಧೈರ್ಯದಿಂದ ಮಾತಾಡುವದನ್ನು ಆ ಸಭಿಕರು ನೋಡಿ ಅವರು ಶಾಸ್ತ್ರಾಭ್ಯಾಸ ಮಾಡದ ಸಾಧಾರಣರೆಂದು ತಿಳಿದು ಆಶ್ಚರ್ಯಪಟ್ಟರು. ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು' (ಅ.ಕೃ 4:13,14).**

ಪೇತ್ರನೂ, ಯೋಹಾನನೂ ವಿದ್ಯಾವಂತರಲ್ಲ; ಅವರು ಹಣವಂತರೂ ಅಲ್ಲ, ಅವರು ಓದು ಬರಹ ತಿಳಿಯದ ಮೀನುಗಾರರು. ಆದರೂ, ಅವರ ಬಾಯಿಂದ ಹೊರಟ ಒಂದೊಂದು ಮಾತೂ, ಶಕ್ತಿಯಿಂದ ಕೂಡಿದ್ದಾಗಿಯೂ, ಹೃದಯಗಳನ್ನು ತೂರಿಹೋಗುವಂಥದ್ದಾಗಿಯೂ ಇತ್ತು. ಅವರು ಅಲ್ಲಿದ್ದ ಜನರೊಂದಿಗೆ ಧೈರ್ಯದಿಂದ ಮಾತಾಡಿದರು, ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು" (ಮತ್ತಾ 10:20) ಎಂದು ಕರ್ತನು ಹೇಳುತ್ತಾನೆ. ಅವರು ಮಾತಾಡಿದ್ದರಲ್ಲಿ ಅವರ ಸಾಕ್ಷಿ ಇತ್ತು. "ನೀವು ಶಿಲುಬೆಗೆ ಹಾಕಿಸಿದಂಥ ಮತ್ತು ದೇವರು ಸತ್ತವರೊಳಗಿಂದ ಎಬ್ಬಿಸಿದಂಥ ನಜರೇತಿನ ಯೇಸುಕ್ರಿಸ್ತನಿಂದಲೇ ಈ ಮನುಷ್ಯನು ನಿಮ್ಮೆದುರಿನಲ್ಲಿ ಸ್ವಸ್ಥವಾಗಿ ನಿಂತಿರುವನು" ಎಂದು ಹೇಳಿದರು.

ಪವಿತ್ರಾತ್ಮನನ್ನು ಹೊಂದಿಕೊಳ್ಳುವದಕ್ಕಿಂತ ಮೊದಲು, ಪೇತ್ರನಿಗೆ ಭಯದ ಸ್ವಭಾವವಿತ್ತು. ಒಬ್ಬ ದಾಸಿ ಅವನನ್ನು ನೋಡಿ, ನೀನು ಯೇಸುವಿನೊಂದಿಗೆ ಇದ್ದವನಲ್ಲವೇ? ಎಂದು ಕೇಳಿದಾಗ," ಹೌದು ನಾನು ಯೇಸುವಿನೊಂದಿಗೆ ಇರುವವನು" ಎಂದು ಹೇಳಲು ಅವನಿಗೆ ಸಾಧ್ಯವಾಗಲಿಲ್ಲ. ಯೇಸುವನ್ನು ಬೊಂಕಿದನು, ಶಪಿಸಿದನು ಆದರೆ ಈಗಲಾದರೋ, ಆ ಭಯವೆಲ್ಲಾ ಹೋಗಿ ಧೈರ್ಯವಾಗಿ "ಏನೇ ಆದರೂ ನಾನು ಕರ್ತನೊಂದಿಗಿರುವೆನು" ಎಂಬ ತೀರ್ಮಾನಕ್ಕೆ ಬಂದನು ಅವನು ಹೊಂದಿದ ಅಭಿಷೇಕದಿಂದ ಆತ್ಮದಲ್ಲಿ ಬಲಹೊಂದಿದನು. ಜ್ಞಾನಿಯಾದ ಸಲೊಮೋನನು ಹೇಳುತ್ತಾನೆ "ಶಿಷ್ಟನು ಸಿಂಹದಂತೆ ಧೈರ್ಯದಿಂದಿರುವನು" ಎಂದು (ಜ್ಞಾನೋ 28:1).

ದೇವಮಕ್ಕಳೇ, ನೀವು ದೇವಸಮ್ಮುಖದಲ್ಲಿ ಸಮಯ ಕಳೆಯುವವರಾಗಿರುವದಾದರೆ, ಕರ್ತನ ಬಲಕ್ಕಾಗಿ ಅಪೇಕ್ಷೆಯುಳ್ಳವರಾಗಿರಿ. ಆತ್ಮನ ವರಗಳನ್ನು ಅಪೇಕ್ಷಿಸಿರಿ ನಿರೂಪಿಸುವ ಅದ್ಭುತಗಳನ್ನು ಕರ್ತನು ನಿಮ್ಮ ಮೂಲಕ ನಡೆಸುವಾಗ, ನಿಶ್ಚಯವಾಗಿಯೇ, ಇತರರು ಹೇಳುವರು, ನೀವು ಕರ್ತನೊಂದಿಗೆ ಇರುವವರು, ಕ್ರಿಸ್ತನೊಂದಿಗೆ ಇರುವವರು ಎಂದು ನೀವು ಕ್ರಿಸ್ತನೊಂದಿಗೆ ಇರುವಿರಾದರೆ ಯಾವ ದುಷ್ಟ ಮನುಷ್ಯರನ್ನೂ, ಯಾವ ದುಷ್ಟ ಆತ್ಮವನ್ನೂ ಕಂಡು ಭಯಪಡದವರಾಗಿರುವಿರಿ.

ನೆನಪಿಗೆ: **'ಧೈರ್ಯದಿಂದಿರು, ನಮ್ಮ ಜನರಿಗೋಸ್ಕರವೂ, ನಮ್ಮ ದೇವರ ಪಟ್ಟಣಗಳಿಗೋಸ್ಕರವೂ ನಮ್ಮ ಪೌರುಷವನ್ನು ತೋರಿಸೋಣ' (2ಸಮು 10:11,12).**

| ಮಾರ್ಚ್ 25 | **ಯೇಸುವಿನೊಂದಿಗಿರುವಂತೆ!** | ಬೆಳಿಗ್ಗೆ : ಯೆಹೋ 19,20,21<br>ಸಂಜೆ : ಲೂಕ 2:21-52 |
|---|---|---|

**'ಆತನು (ಯೇಸು) ಹನ್ನೆರಡು ಮಂದಿಯನ್ನು ಆರಿಕೆಕೊಂಡು ಅವರು ತನ್ನ ಸಂಗಡ ಇರಬೇಕೆಂತಲೂ, ದೆವ್ವಗಳನ್ನು ಬಿಡಿಸುವ ಅಧಿಕಾರವುಳ್ಳವರಾಗಿ ಸುವಾರ್ತೆಯನ್ನು ಸಾರುವದಕ್ಕೆ.....ಆರಿಸಿಕೊಂಡು ನೇಮಿಸಿದನು' (ಮಾರ್ಕ 3:14,15).**

ಯೇಸು ತನಗೆಂದು ಹನ್ನೆರಡು ಮಂದಿ ಶಿಷ್ಯರನ್ನು ಆರಿಸಿ ಕೊಂಡಾಗ, ಕೂಡಲೇ, "ಪ್ರಸಂಗ ಮಾಡಿರಿ" ಎಂದು ಹೇಳಲಿಲ್ಲ. ಅದ್ಭುತಗಳನ್ನು ಸೂಚಕ ಕಾರ್ಯಗಳನ್ನು ಮಾಡಿರಿ ಎಂದು ಹೇಳಲಿಲ್ಲ. ಮೊದಲು, ಆತನು ತನ್ನೊಂದಿಗಿರುವಂತೆ ಕರೆದನು ಎಷ್ಟಾಗಿ ಕರ್ತನೊಂದಿಗೆ ಇರುವರೊ ಅಷ್ಟಾಗಿ ಆತನು ಅವರನ್ನು ತನಗೆ ಉಪಯುಕ್ತರನ್ನಾಗಿ ಮಾಡುವನು.

ಸೇವೆಯಲ್ಲಿ ಎರಡು ಬಗೆಯ ಸೇವೆಗಳಿರುವವು. ಮೊದಲನೆಯದು ಕರ್ತನಿಗೆ ಮಾಡುವ ಸೇವೆ, ಎರಡನೆಯದು ಜನರಿಗೆ ಮಾಡುವ ಸೇವೆ ಹಳೆಯ ಒಡಂಬಡಿಕೆಯಲ್ಲಿ ಯಾಜಕರು; ಮೊದಲು ದೇವರಿಗೆ ಸೇವೆ ಮಾಡಿದರು. ದೇವದರ್ಶನ ಗುಡಾರದಲ್ಲಿ ಧೂಪವನ್ನು ಹಾಕಿದರು ದೇವಾಲಯದಲ್ಲಿ ಹಗಲಿರಳು ಕರ್ತನನ್ನು ಸ್ತುತುಸುತ್ತಿದ್ದರು ಜನರ ಸೇವೆ ಮಾಡುವಂತೆ ಅವರು ತಂದ ಪಾಪ ನಿವಾರಣಾ ಬಲಿಗಳನ್ನು ದೇವರಿಗೆ ಅರ್ಪಿಸಿ ಅವರ ಪಾಪಕ್ಷಮೆಗಾಗಿ ಬೇಡಿದರು ಕರ್ತನ ನಾಮದಲ್ಲಿ ಜನರನ್ನು ಆಶೀರ್ವದಿಸಿದರು.

ಒಂದು ದೇವಾಲಯದಲ್ಲಿ ಪ್ರಸಂಗ ಮಾಡುವಂತೆ ಒಬ್ಬ ದೇವ ಭಕ್ತನನ್ನು ಕರೆದಿದ್ದರು, ಆಲಯಕ್ಕೆ  ಸೇರಿದಂತೆ ಇದ್ದ ಒಂದು ಕೊಠಡಿಯಲ್ಲಿ ಆತನು ತಂಗಿದ್ದನು ಏಳು ಗಂಟೆಯಾದರೂ ಆ ಸೇವಕನು ಆಲಯಕ್ಕೆ ಬರಲೇ ಇಲ್ಲ, ಅಲ್ಲಿನ ಬೋಧಕರು ಒಬ್ಬ ಯೌವನಸ್ಥನನ್ನು ಕಳುಹಿಸಿ ಸೇವಕರನ್ನು ಕರೆತರುವಂತೆ ಹೇಳಿದರು, ಹೋದವನು ಹಿಂತಿರುಗಿ ಬಂದು "ಅಯ್ಯನವರೇ, ಆ ಪ್ರಸಂಗಿಯು ಇಂದು ಬರುವದಿಲ್ಲ" ಎಂದು ಹೇಳಿದನು. ಇದನ್ನು ಕೇಳಿ ದಿಗ್ಭ್ರಮೆಗೊಂಡ ಬೋಧಕರು, ತಾವೇ ಕರೆತರಲು ಆತನ ಕೊಠಡಿಗೆ ಹೋದರು "ಆ ಸೇವಕರು ಪ್ರಾರ್ಥಿಸುತ್ತಿದ್ದರು "ದೇವರೇ, ನೀನು ನನ್ನೊಂದಿಗೆ ಬಂದು ಅದ್ಭುತಗಳನ್ನು ಸೂಚಕ ಕಾರ್ಯಗಳನ್ನು ಮಾಡು ಇಲ್ಲವಾದರೆ ನಾನು ಈ ಕೂಟಕ್ಕೆ ಹೋಗುವದಿಲ್ಲ" ಎಂದು ಹೇಳುತ್ತಿದ್ದರು. ದೇವಪ್ರಸನ್ನತೆ ತನ್ನೊಂದಿಗೆ ಬರಬೇಕೆಂಬುದೇ ಆ ಸೇವಕರ ಬೇಡಿಕೆ.

ದೇವಜನರೇ, ಯೇಸುಕ್ರಿಸ್ತನು ನಿಮ್ಮೊಂದಿಗೆ ಇರುವದಾದರೆ, ಮಾತ್ರ ನೀವು ಕರ್ತನಿಗೂ, ಜನರಿಗೂ, ಸೇವೆ ಮಾಡಲು ಸಾಧ್ಯ, ಸುವಾರ್ತೆ ಸಾರಲು ಸಾಧ್ಯ, ಅದ್ಭುತಗಳನ್ನು ಸೂಚಕಕಾರ್ಯಗಳನ್ನು ಮಾಡಲು ಸಾಧ್ಯ ಆದ್ದರಿಂದ ಆತನು ನಿಮ್ಮೊಂದಿಗಿರುವಂತೆ ಪ್ರಾರ್ಥಿಸಿರಿ.

**ನೆನಪಿಗೆ: 'ನೀನು ನಮ್ಮ ಸಂಗಡ ಇರು, ಸಂಜೆಯಾಯಿತು, ಹೊತ್ತು ಇಳಿಯುತ್ತಾ ಬಂತು ಎಂದು ಹೇಳಿ ಆತನನ್ನು ಬಲವಂತ ಪಡಿಸಿದರು' (ಲೂಕ 24:29).**

**'ನೀವು ನನ್ನ ಕಷ್ಟಗಳಲ್ಲಿ ನನ್ನ ಸಂಗಡ ಎಡಬಿಡದೆ ಇದ್ದವರು' (ಲೂಕ 22:28).**

ಕೆಟ್ಟಮಗನ ಸಾಮ್ಯದಲ್ಲಿ, ತಂದೆ ತನಗೆ ಸೇರಿದ ಎಲ್ಲವನ್ನೂ ಹಿರಿಯ ಮಗನಿಗೆ ಯಾಕೆ ಕೊಟ್ಟನು? ತನ್ನ ಕಿರಿಯ ಮಗನಿಗೆ ಉಡುಗೊರೆಗಳನ್ನು ಮಾತ್ರ ಯಾಕೆ ಕೊಟ್ಟನು? ಕಾರಣ ತನ್ನ ಹಿರಿಯ ಮಗನು ಎಲ್ಲಾ ವೇಳೆಯಲ್ಲೂ ತನ್ನ ತಂದೆಯ ಜೊತೆಯಲ್ಲಿ ಇದ್ದನು "ತನ್ನ ಹಿರಿಯ ಮಗನನ್ನು ನೋಡಿ" ನನ್ನ ಮಗನೇ ನೀನು ಯಾವಾಗಲೂ ನನ್ನೊಂದಿಗಿರುವಿ" ಎಂದು ಹೇಳಿದನು. ಆದರೆ ಕಿರಿಯ ಮಗನೋ ಯಾವಾಗಲೂ ತಂದೆಯೊಂದಿಗೆ ಇರಲಿಲ್ಲ, ಅವನು ತನ್ನ ಸ್ನೇಹಿತರೊಂದಿಗೂ, ವೇಶ್ಯೆಯರೊಂದಿಗೂ ಇದ್ದನು.

ನೀವು ಹಣವಂತರಾಗಿ ಸಂತೋಷದಿಂದಿರುವಾಗ, ನಿಮ್ಮ ಹಣದಲ್ಲಿ, ಸಂತೋಷದಲ್ಲಿ ಭಾಗಿಗಳಾಗುವವರು ಅನೇಕರು, ಆದರೆ ಹಣದ ಕೊರತೆಯಿಂದ ಸಾಲದಲ್ಲಿ ಸಿಕ್ಕಿ ತತ್ತರಿಸುವಾಗ, ಯಾರೂ ನಿಮ್ಮೊಂದಿಗಿರುವದಿಲ್ಲ ಇದು ಪ್ರಪಂಚದ ನೀತಿ, ಯೇಸುಕ್ರಿಸ್ತನು ಅದ್ಭುತ ಮಾಡಿದಾಗ, ಹೇರಳವಾಗಿ ಜನರು ಬಂದು ಆತನಿಂದ ಉಪಕಾರಗಳನ್ನು ಹೊಂದಿದರು ಐದು ರೊಟ್ಟಿ ಎರಡು ಮೀನುಗಳನ್ನು ಹಂಜಿ ಕೊಟ್ಟಾಗ ಐದು ಸಾವಿರ ಜನರು ಸಂತೋಷದಿಂದ ಊಟಮಾಡಿದರು, ಆದರೆ ಯೇಸುವಿನ ದುಃಖ, ಸಂಕಟಗಳ ಸಮಯದಲ್ಲಿ ಆತನೊಂದಿಗೆ ಯಾರೂ ಇಲ್ಲ. ಮೊದಲು ಉತ್ಸಾಹದಿಂದ "ಹೊಸನ್ನಾ" ಎಂದು ಹಾಡಿದವರು ಎಲ್ಲಿ ಹೋದರೊ ಗೊತ್ತಿಲ್ಲ. ಯೇಸು ಶಿಷ್ಯರನ್ನು ನೋಡಿ "ನೀವು ನನ್ನ ಕಷ್ಟಗಳಲ್ಲಿ ನನ್ನ ಸಂಗಡ ಎಡಬಿಡದೆ ಇದ್ದವರು" ಎಂದು ಹೇಳಿದನು ಯಾವ ಪರಿಸ್ಥಿತಿಯಲ್ಲೂ ಯಾವದೇ ಹೋರಾಟಗಳಿರುವಾಗಲೂ, ರಕ್ತಸಾಕ್ಷಿಗಳಾಗಿ ಸಾಯಬೇಕಾದ ನಿರ್ಭಂದಕ್ಕೆ ಒಳಗಾಗುವಾಗಲೂ, ನೀವು ಕರ್ತನೊಂದಿಗಿರಿ, ನೀವು ಕರ್ತನಿಗಾಗಿ ನಿಲ್ಲುವಾಗ, ಆತನು ನಿಮಗಾಗಿ ಅಧಿಕ ವೈರಾಗ್ಯದಿಂದಿರುವನು. ಶೋಧನೆಯ ಸಮಯಗಳಲ್ಲಿ ಮಾತ್ರವಲ್ಲ, ಪ್ರಾರ್ಥನಾ ಸಮಯಗಳಲ್ಲೂ ಕ್ರಿಸ್ತನೊಂದಿಗಿದ್ದು ಯೇಸು ಗೆತ್ಸೇಮನೆ ತೋಟದಲ್ಲಿ ತನ್ನ ಶಿಷ್ಯರನ್ನು ನೋಡಿ, ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ; ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ" ಎಂದು ಹೇಳಿದನು (ಮತ್ತಾ 26:38). ನನ್ನೊಂದಿಗೆ ಎನ್ನುವ ಮಾತನ್ನು ಧ್ಯಾನಿಸಿ ನೋಡಿರಿ, ನೀವು ಆತ್ಮದಲ್ಲಿ ಎಚ್ಚರವಾಗಿದ್ದು ಪ್ರಾರ್ಥಿಸಿರಿ ಎಂದು ಹೇಳುತ್ತಾನೆ (ಮತ್ತಾ 26:41).

ದೇವಮಕ್ಕಳೇ, ನೀವು ಎಲ್ಲೇ ಹೋಗಿ ಏಕಾಂಗಿಯಾಗಿ ಪ್ರಾರ್ಥಿಸಿರಿ ಎಂದು ಆತನು ಹೇಳಲಿಲ್ಲ, ಇಂದಿಗೂ, ತನ್ನ ಪ್ರೀತಿಯ ಕರಗಳನ್ನು ನಿಮ್ಮ ಕಡೆಗೆ ಚಾಚಿ ಬನ್ನಿ ನನ್ನೊಂದಿಗೆ ಸೇರಿ ಪ್ರಾರ್ಥಿಸಿರಿ ಎಂದು ಹೇಳುತ್ತಿರುವನು, "ಯೇಸು ಒಳ್ಳೇಯ ಪ್ರಾರ್ಥನಾ ಸ್ನೇಹಿತ" ಆತನೊಂದಿಗೆ ಸೇರಿ ಪ್ರಾರ್ಥಿಸುವಾಗ, ತನ್ನ ಹೃದಯದ ಭಾರವನ್ನೆಲ್ಲಾ ನಿಮ್ಮೊಂದಿಗೆ ಹಂಚಿಕೊಳ್ಳುವನು.

**ನೆನಪಿಗೆ: 'ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ, ನಿನ್ನ ಕೋಲೂ ನನಗೆ ಧೈರ್ಯಕೊಡುತ್ತವೆ' (ಕೀರ್ತ 23:4).**

## ಆತನೊಂದಿಗೆ!

ಬೆಳಗ್ಗೆ : ನ್ಯಾಯ 1,2,3
ಸಂಜೆ : ಲೂಕ 4:1-30

**'ದೇವರು ಕರೆದವರೂ, ದೇವರಾದುಕೊಂಡವರೂ ನಂಬಿಗಸ್ಥರೂ ಆಗಿರುವ ಆತನ ಕಡೆಯವರು ಆ ಜಯದಲ್ಲಿ ಪಾಲುಗಾರರಾಗುವರು' (ಪ್ರಕ 17:14).**

ನಿತ್ಯತ್ವದಲ್ಲಿ ಯೇಸುವಿನೊಂದಿಗೆ ಇರುವವರು ಯಾರು? ಪರಲೋಕ ರಾಜ್ಯವನ್ನು ಬಾಧ್ಯತೆಯಾಗಿ ಪಡೆಯುವವರು ಯಾರು? ಹೌದು! ಅವರು ಯೇಸುವಿನೊಂದಿಗೆ ಇರುವವರು, ನಂಬಿಗಸ್ಥರಾಗಿರುವವರು, ಕುರಿಮರಿಯಾದಾತನು ಎಲ್ಲಿಗೆ ಹೋದರೂ, ಆತನನ್ನು ಹಿಂಬಾಲಿಸುವವರು "ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು ಸಹಿಸಿಕೊಳ್ಳುವವರಾಗಿದ್ದರೆ ಆತನೊಡನೆ ಆಳುವೆವು" (2ತಿಮೊ 2:11,12).

ಯೇಸುಕ್ರಿಸ್ತನು ಈ ಭೂಮಿಯಲ್ಲಿರುವಾಗ, ಯಾವಾಗಲೂ ತಂದೆದೇವರೊಂದಿಗೇ ಇದ್ದನು ಅದಕ್ಕಾಗಿ "ಮೊಬ್ಬಿರುವಾಗಲೇ ಎದ್ದು, ಏಕಾಂತಸ್ಥಳಕ್ಕೆ ಹೋಗಿ ಪ್ರಾರ್ಥಿಸಿದನು" (ಮಾರ್ಕ 1:35). ಶಿಲುಬೆಯ ಮೇಲೆಯೂ, ತಂದೆಯ ಪ್ರಸನ್ನತೆಯನ್ನು ಗ್ರಹಿಸಿ ಮೊದಲ ಮಾತಾಗಿ, "ತಂದೆಯೇ ಇವರನ್ನು ಕ್ಷಮಿಸು (ಲೂಕ 23:34) ಎಂದು ಹೇಳಿದನು. ಶಿಲುಬೆಯಲ್ಲಿ ಕಡೆಯ ಮಾತಾಗಿ ತಂದೆಯೇ ನಿನ್ನ ಕೈಗಳಲ್ಲಿ ನನ್ನ ಆತ್ಮವನ್ನು ಒಪ್ಪಿಸಿಕೊಡುತ್ತೇನೆ" (ಲೂಕ23:46) ಎಂದು ಹೇಳಿದನು.ಅಪೊ, ಪೌಲನು ಕೊಲೊಸ್ಸೆದವರಿಗೆ ಬರೆಯುವಾಗ, "ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ" (ಕೊಲೊ 3:4) ಎಂದು ಬರೆಯುತ್ತಾನೆ. ಆದದ್ದರಿಂದ ನೀವು ಯಾವಾಗಲೂ ಕ್ರಿಸ್ತನ ತಂದೆಯೊಂದಿಗೆ ಇದ್ದಂತೆ, ನೀವು ಎಲ್ಲಾ ಸಮಯಗಳಲ್ಲೂ ಕ್ರಿಸ್ತನೊಂದಿಗೆ ಇರಲು ತೀರ್ಮಾನಿಸಿರಿ. ಯಾವದೇ ಕೆಲಸ ಮಾಡುತ್ತಿರುವಾಗಲೂ, ಎಲ್ಲೇ ಇರುವಾಗಲೂ, ನೀವು ಆತನೊಂದಿಗಿರುವದಾಗಿ ಗ್ರಹಿಸಿ ಆತನೊಂದಿಗೆ ಆಂತರ್ಯದಲ್ಲಿ ಸಂಭಾಷಿಸಿರಿ ಆತನಿಗೆ ಒಪ್ಪುವ ಕ್ರಿಯೆಗಳನ್ನು ನಡಿಸಿರಿ ಅಂತರ್ಯವನ್ನು ನೋಡುವ ದೇವರು ನೀವು ಆತನೊಂಗಿರುವದನ್ನು ಅರಿತುಕೊಳ್ಳುವನು.

ದೇವಮಕ್ಕಳೇ, ಪಾಪಕ್ಷಮಾಪಣೆಯನ್ನೂ, ರಕ್ಷಣೆಯನ್ನೂ ಪಡೆದುಕೊಂಡರೆ ಸಾಲದು ನೀವು ತಂದೆಯ ಮಹಿಮೆಯನ್ನು ಪಡೆಯಬೇಕೆಂದರೆ, ಯಾವಾಗಲೂ ಆತನೊಂದಿಗಿರ ಬೇಕು ಒಂದು ಬತ್ತಿ ಯಾವಾಗಲೂ ಎಣ್ಣೆಯೊಳಗೆ ಮುಳುಗಿದ್ದರೆ ಮಾತ್ರ ಎಣ್ಣೆಯನ್ನು ಹೀರಿ ಉರಿದು ಪ್ರಕಾಶಿಸಲು ಸಾಧ್ಯ. ನಿಮ್ಮ ಆಂತರ್ಯವು ಪವಿತ್ರಾತ್ಮನೊಂದಿಗೆ ಯಾವಾಗಲೂ ಐಕ್ಯಗೊಂಡಿದ್ದರೆ ಮಾತ್ರ, ನೀವು ಕರ್ತನಿಗಾಗಿ ಎದ್ದು ಪ್ರಕಾಶಿಸಲು ಸಾಧ್ಯ. ಆತನೊಂದಿಗೆ ಇರುವವರಿಗೆ ಕರ್ತನ ವಾಗ್ದಾನವೇನು? "ನಾನು ಜಯಹೊಂದಿ ನನ್ನ ತಂದೆಯೊಡನೆ ಸಿಂಹಾಸನದಲ್ಲಿ ಕುಳಿತುಕೊಂಡೆನು ಹಾಗೆಯೇ ಜಯಹೊಂದುವವನನ್ನು ನನ್ನೊಂಡನೆ ಸಿಂಹಾಸನದಲ್ಲಿ ಕುಳಿತುಕೊಳ್ಳುವಂತೆ ಮಾಡುವೆನು" ಎಂಬುದೇ (ಪ್ರಕ 3:21).

**ನೆನಪಿಗೆ: 'ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ' (ಕೀರ್ತ 42:1).**

| | | |
|---|---|---|
| ಮಾರ್ಚ್ 28 | **ಸಹಾಯಕನಾಗಿರುವನು!** | ಬೆಳಗ್ಗೆ : ನ್ಯಾಯ 4,5,6<br>ಸಂಜೆ : ಲೂಕ 4:31–44 |

**'ಇಸ್ರಾಯೇಲ್ಯರೇ, ನೀವು ಎಷ್ಟೋ ಧನ್ಯರು; ನಿಮ್ಮಷ್ಟು ಭಾಗ್ಯವಂತರು ಯಾರಿದ್ದಾರೆ? ಆತನೇ ನಿಮ್ಮನ್ನು ಕಾಯುವ ಡಾಲೂ, ನಿಮ್ಮ ಗೌರವವನ್ನು ಕಾಪಾಡುವ ಕತ್ತಿಯೂ ಆಗಿದ್ದಾನೆ' (ಧರ್ಮೋ 33:29).**

ನೀವು ಕರ್ತನಿಗೆ ಮೆಚ್ಚಿಕೆಯಾಗಿ ನಡೆದುಕೊಳ್ಳುವಾಗ ಆತನು ನಿಮ್ಮನ್ನು ಆಶೀರ್ವದಿಸಿ "ಮಗನೇ ನೀನು ನನ್ನೊಂದಿಗಿರುವಿ, ನನಗಿರುವದೆಲ್ಲಾ ನಿನ್ನದೇ ಆಗಿದೆ" ಎಂದು ಸಂತೋಷದಿಂದ ಹೇಳುವದು ಮಾತ್ರವಲ್ಲ, ನಿಮಗೆ ಎಲ್ಲಾದರಲ್ಲಿಯೂ ಜೊತೆ ಸಹಾಯಕನಾಗಿ ನಿಲ್ಲುತ್ತಾನೆ.

ಜೀವಿತಕಾಲವೆಲ್ಲಾ ಕಷ್ಟದಲ್ಲಿಯೂ, ಸುಖದಲ್ಲಿಯೂ, ಜೊತೆಯಾಗಿರುವೆವು ಎಂಬುದು ಸತಿಪತಿಗಳಿಗೆ ಮಾತ್ರ ಸೀಮಿತವಾದದ್ದು ಎಂದು ನೆನಸುತ್ತೇವೆ. ಆದರೆ ಈ ಇಬ್ಬರಿಗೂ ಮೇಲಾಗಿ ಕರ್ತನು ಜೊತೆ ಇರುವಾಗ; ಸೈತಾನನ್ನು ಸದೆಬಡಿಯಬಹುದು ಜೀವಿತದಲ್ಲಿ ಬರುವ ಸಮಸ್ಯೆಗಳನ್ನು ಜಯಿಸಲು ಸಾಧ್ಯ. ಕರ್ತನೇ ನಮ್ಮ ಆತ್ಮದ ಮದಲಿಂಗನು ಅರಣ್ಯದಂತಿರುವ ಈ ಪ್ರಪಂಚದಲ್ಲಿ, ಪೂರ್ಣವಾಗಿ ಆಶ್ರಯಿಸಿಕೊಳ್ಳ ಬಹುದಾದ ಜೊತೆಗಾರನು ಅಥವಾ ಸಂಗಾತಿ.

ಯೋಸೇಫನನ್ನು "ಕರ್ತನು ನಿನಗೆ ಸಹಾಯಕನಾಗಿರಲಿ" ಎಂದು ಹೇಳಿ ಯಾಕೋಬನು ಆಶೀರ್ವದಿಸಿದ್ದರ ಕಾರಣವೇನು? ಯೋಸೇಫನು ತನ್ನ ಚಿಕ್ಕ ಪ್ರಾಯದಲ್ಲಿಯೆ ತನ್ನ ತಾಯಿಯನ್ನು ಕಳೆದುಕೊಂಡನು ತನ್ನ ಸಹೋದರರು ತನ್ನ ಸಂಗಡ ಇರುವರೆಂದು ನೆನಸಿ, ಅವರಿಗೆ ಆಹಾರವನ್ನು ತೆಗೆದುಕೊಂಡು ಹೋದಾಗ, ಅವರು ಅವನನ್ನು ಐಗುಪ್ತದ ವ್ಯಾಪಾರಿಗಳಿಗೆ ಮಾರಿಬಿಟ್ಟರು. ಪೋಟೀಫರನ ಬಳಿ ಸೇವಕನಾಗಿದ್ದಾಗ, ಪೋಟೀಫರನ ಹೆಂಡತಿಯ ಅನ್ಯಾಯವಾದ ದೂರಿನಿಂದ ಸೆರೆಯಲ್ಲಿ ಇರಬೇಕಾಯಿತು, ಯೋಸೇಫನನ್ನು ಅರ್ಥ ಮಾಡಿಕೊಳ್ಳುವವರು ಯಾರು ಇರಲಿಲ್ಲ, ಕಾಲ ಕಳೆಯಿತು ಕರ್ತನ ಕೃಪೆಯಿಂದ ಐಗುಪ್ತದಲ್ಲಿ ಅವನು ಉನ್ನತ ಸ್ಥಾನಕ್ಕೆ ಎತ್ತಲ್ಪಟ್ಟನು.

ದೇವಮಕ್ಕಳೇ, ಇಂದು ನೀವು ಅನೇಕ ಸಮಸ್ಯೆಗಳ ನಡುವೆ ಜೀವಿಸುತ್ತಿರಬಹುದು, ನಿಮ್ಮ ಕಷ್ಟ ಸುಖ ದುಃಖಗಳಲ್ಲಿ ಜೀವಾಂತ್ಯದವರೆಗೂ ನಿಮ್ಮೊಂದಿಗಿರುವೆನೆಂದು ಮಾತು ಕೊಟ್ಟ ನಿಮ್ಮ ಜೀವನ ಸಂಗಾತಿ ನಿಮ್ಮನ್ನು ತೊರೆದಿರ ಬಹುದು ನಿಮ್ಮ ಮಕ್ಕಳು ನಿಮ್ಮನ್ನು ದೂರ ಮಾಡಿರಬಹುದು ಚಿಂತಿಸದಿರಿ, ಕರ್ತನು ನಿಮ್ಮ ಸಹಾಯಕನಾಗಿ ಸದಾ ನಿಮ್ಮೊಂದಿಗಿರಲು ಬಯಸುವನು, ಆತನನ್ನು ನಿಮ್ಮ ರಕ್ಷಕನನ್ನಾಗಿ ಪೂರ್ಣ ಹೃದಯದಿಂದ ಅಂಗೀಕರಿಸಿಕೊಳ್ಳುವಾಗ ಆತನೇ ನಿಮ್ಮೊಂದಿಗೆ ಇದ್ದು ಎಲ್ಲಾ ಸಮಸ್ಯೆಗಳಿಂದ ಬಿಡಿಸಿ ನಿಮ್ಮನ್ನು ಆಶೀರ್ವದಿಸುವನು.

**ನೆನಪಿಗೆ: 'ಭಯಪಡಬೇಡ, ನಿನಗೆ ಸಹಾಯ ಮಾಡುತ್ತೇನೆ ಎಂದು ನಿನಗೆ ಹೇಳುವ ನಿನ್ನ ದೇವರಾದ ಯೆಹೋವನೆಂಬ ನಾನೇ ಕೈಹಿಡಿಯುತ್ತೇನಲ್ಲಾ' (ಯೆಶಾ 41:13).**

## ಆಪತ್ಕಾಲದಲ್ಲಿ ಸಹಾಯ!

ಬೆಳಗ್ಗೆ : ನ್ಯಾಯ 7,8,
ಸಂಜೆ : ಲೂಕ 5:1–16

**ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು' (ಕೀರ್ತ 46:1).**

ಕರ್ತನು ನಿಮಗೆ ಸಹಾಯಕನಾಗಿರುವದರಿಂದ "ಭೂಮಿಯು ಮಾರ್ಪಟ್ಟರೂ, ಬೆಟ್ಟಗಳು ಸಮುದ್ರದಲ್ಲಿ ಮುಣುಗಿದರೂ ನಮಗೇನೂ ಭಯವಿಲ್ಲ, ಸಮುದ್ರವು ಘೋಷಿಸುತ್ತಾ ನೊರೆಯನ್ನು ಕಾರಿದರೇನು? ಅದರ ಅಲಕಲ್ಲೋಲಗಳಿಂದ ಪರ್ವತಗಳು ಚಲಿಸಿದರೇನು? ನಾವು ಭಯ ಪಡುವದಿಲ್ಲ" (ಕೀರ್ತ 46:2,3) ಎಂದು ಕೀರ್ತನೆಗಾರನು ಹಾಡುತ್ತಾನೆ.

ಆಪತ್ತುಗಳು, ಯಾವಾಗ ಬರುವದೆಂದು? ನಮಗೆ ತಿಳಿದಿಲ್ಲ ಯಾವಾಗ ವ್ಯಾಧಿಗಳು ಹಿಡಿದುಕೊಳ್ಳುವದೆಂದು ತಿಳಿಯದು ಯಾವಾಗ ಕೊರತೆ, ಸಾಲದ ಸಮಸ್ಯೆ ಬರುವದೆಂದು ತಿಳಿಯದು ಆದರೆ ಕರ್ತನೋ ನಮಗೆ ಆಪತ್ಕಾಲದಲ್ಲಿ ಸಹಾಯಕನಾಗಿರುವನು. ಆ ಸಹಾಯಕನು ನಿಮಗೆ ಕೊಡುವ ವಾಗ್ದಾನ ಏನು? "ಕಷ್ಟಕಾಲದಲ್ಲಿ ನನಗೆ ಮೊರೆಯಿಡಿರಿ; ಬಿಡಿಸುವೆನು ಆಗ ನನ್ನನ್ನು ಕೊಂಡಾಡುವಿರಿ" (ಕೀರ್ತ 50:15). "ನನ್ನನ್ನು ಕೇಳಿಕೋ ನಾನು ನಿನಗೆ ಸದುತ್ತರವನ್ನು ದಯಪಾಲಿಸಿ, ನಿನಗೆ ತಿಳಿಯದ ಮಹತ್ತಾದ ಗೂಢಾರ್ಥಗಳನ್ನು ಗೋಚರಪಡಿಸುವೆನು" (ಯೆರೆ 33:3) ಎಂಬುದೇ. 2ನೇ ಮಹಾಯುದ್ಧದಲ್ಲಿ ಜರ್ಮನ್ ದೇಶದ ವಿಮಾನಗಳು ಲಂಡನ್ ನಗರದ ಮೇಲೆ ಗುಂಡಿನ ಸುರಿಮಳೆಯನ್ನೇ ಸುರಿಸಿತು, ಪ್ರಾಣ ರಕ್ಷಣೆಗಾಗಿ ನಿರ್ಮಿಸಿದ್ದ ಗುಂಡಿಗಳಲ್ಲಿ ಜನರು ಅವಿತುಕೊಂಡರು, ಆದರೆ ಒಬ್ಬ ವಯಸ್ಸಾದ ವಿಶ್ವಾಸಿ, ಧೈರ್ಯವಾಗಿ ತನ್ನ ಮನೆಯಲ್ಲೇ ಇದ್ದರು, ಹೀಗೆ ಮನೆಯಲ್ಲೇ ಇರಲು ನಿನಗೆ ಭಯವಾಗುವದಿಲ್ಲವಾ? ಎಂದು ಇತರರು ಕೇಳಿದಾಗ, ಆತನು ಕೊಟ್ಟ ಉತ್ತರವೇನು ಗೊತ್ತೇ? "ಕರ್ತನು ನನಗೆ ಸಹಾಯಕನಾಗಿರುವನು ಆತನು ನನ್ನನ್ನು ಎಂದು ಬಿಟ್ಟು ಹೋಗುವದಿಲ್ಲ ಕೈಬಿಡುವದೂ ಇಲ್ಲ, ನಾನು ಯಾಕೆ ಭಯಪಡಬೇಕು? ನಿನ್ನ ಮಗ್ಗುಲಲ್ಲಿ ಸಾವಿರ ಜನರು, ಬಲಗಡೆಯಲ್ಲಿ ಹತ್ತುಸಾವಿರ ಜನರು ಸತ್ತುಬಿದ್ದರೂ ನಿನಗೇನೂ ತಟ್ಟದು" (ಕೀರ್ತ 91:7) ಎಂಬುದು ಕರ್ತನ ವಾಗ್ದಾನ ಹೌದು, "ಯೆಹೋವನ ನಾಮವು ಬಲವಾದ ಬುರುಜು; ಶಿಷ್ಟನು ಅದರೊಳಗೆ ಓಡಿಹೋಗಿ ಭದ್ರವಾಗಿರುವನು" (ಜ್ಞಾನೋ 18:10).

ದೇವಜನರೇ, ದಾವೀದನು ತನ್ನ ಜೀವಮಾನಕಾಲದಲ್ಲೆಲ್ಲಾ ಕರ್ತನನ್ನೇ ತನ್ನ ಸಹಾಯಕನನ್ನಾಗಿಸಿಕೊಂಡು, ಇಸ್ರಾಯೇಲ್ಯರನ್ನು ಯೆಹೂದ್ಯರನ್ನು ಆಳಿದನು "ನಮ್ಮ ಸಹಾಯವೂ ಗುರಾಣಿಯೂ ಕರ್ತನೇ" (ಕೀರ್ತ 33:20) ಎಂದು ದಾವೀದನು ಹೇಳಿದಂತೆ, ನೀವೂ ಕರ್ತನೇ ನಮ್ಮ ಸಹಾಯಕನೆಂದು ಹೇಳಿ, ಆತನನ್ನು ಸ್ತುತಿಸಿರಿ, ಆತನ ಸಹಾಯ ಹಸ್ತವನ್ನೇ ಆತುಕೊಳ್ಳಿರಿ ನಿಶ್ಚಯವಾಗಿ ಜಯ ನಿಮ್ಮದೇ

**ನೆನಪಪಿಗೆ: 'ನೀನು ನಮಗೆ ಸಹಾಯಕನಾಗಿದ್ದೀಯಲ್ಲಾ; ನಿನ್ನ ರೆಕ್ಕೆಗಳ ಮರೆಯಲ್ಲಿ ಸುರಕ್ಷಿತನಾಗಿದ್ದುಕೊಂಡು ಆನಂದಘೋಷ ಮಾಡುತ್ತಿರುವೆನು' (ಕೀರ್ತ 63:7)**

| ಮಾರ್ಚ್ 30 | ಯುದ್ಧವನ್ನು ನಡೆಸುವ ಸಹಾಯಕನು! | ಬೆಳಿಗ್ಗೆ : ನ್ಯಾಯ 9,10<br>ಸಂಜೆ : ಲೂಕ 5:17-39 |
|---|---|---|

**'ಅವನಿಗಿರುವ ಸಹಾಯವು ಮಾಂಸದ ತೋಳು; ನಮಗಾದರೋ ನಮ್ಮ ದೇವರಾದ ಯೆಹೋವನೇ' (2ಪೂ.ವೃ 32:8).**

**ಅ**ಶ್ಶೂರದ ಅರಸನು, ಇಸ್ರಾಯೇಲ್ಯರ ಮೇಲೆ ಯುದ್ಧಕ್ಕೆ ಬಂದಾಗ, ಹಿಜ್ಕೀಯನ ಆಂತರ್ಯ ಭಯದಿಂದ ತುಂಬಿತು ಆಗ ಇಸ್ರಾಯೇಲ್ಯರನ್ನು ಕರ್ತನು ಧೈರ್ಯಗೊಳಿಸಿದನು "ಯುದ್ಧವನ್ನು ನಡೆಸುವಾತನು ಕರ್ತನು ಆತನು ನಮಗೆ ಸಹಾಯಕನಾಗಿರುವನು" ಎಂದು ಕರ್ತನು ಪ್ರವಾದಿಯ ಮೂಲಕ ಮಾತನಾಡಿದಾಗ, ಇಸ್ರಾಯೇಲ್ಯರು ಧೈರ್ಯಗೊಂಡರು.

ನಿಮಗೆ ವಿರೋಧವಾಗಿ ಯುದ್ಧ ಮಾಡುವವರೊಂದಿಗೆ, ಕರ್ತನು ಹೋರಾಡಿಯುದ್ಧ ಮಾಡುವಂತೆ, ಸಹಾಯಕನಾಗಿ ಮುಂದೆ ಬರುವನು ಆತನು ಸರ್ವಶಕ್ತನಾದ ದೇವರು, ಪರಾಕ್ರಮಿಯಾದ ದೇವರು ಆದ್ದರಿಂದ ಧೈರ್ಯವಾಗಿರ್ರಿ. "ಸೇನಾಧೀಶ್ವರನಾದ ಯೆಹೋವನು ನಮ್ಮ ಸಂಗಡ ಇದ್ದಾನೆ; ಯಾಕೋಬ ವಂಶದವರ ದೇವರು ನಮಗೆ ಆಶ್ರಯ ದುರ್ಗವಾಗಿದ್ದಾನೆ" ಎಂದು ನೀವು ಹೇಳಬಹದಲ್ಲವೇ (ಕೀರ್ತ 46:7) ಫರೋಹನನೂ ಅವನ ಸೈನ್ಯವೂ ಇಸ್ರಾಯೇಲ್ಯರನ್ನು ಹಿಂದಟ್ಟಿ ಯುದ್ಧಕ್ಕೆ ಬಂದರು ಇಸ್ರಾಯೇಲ್ಯರೋ ಯುದ್ಧವೀರರಲ್ಲ ಐಗುಪ್ತದಲ್ಲಿ ದಾಸರಾಗಿದ್ದವರು, ಅವರ ಬಳಿ ಯಾವದೇ, ಯುದ್ಧಾಯುಧಗಳೂ ಇರಲಿಲ್ಲ, ಕರ್ತನೊಬ್ಬನೇ ನಮಗೆ ಸಹಾಯಕನೆಂದು ಯುದ್ಧ ಮಾಡಬೇಕಿತ್ತು ಆದ್ದರಿಂದ ಮೋಶೆ ಇಸ್ರಾಯೇಲ್ಯರನ್ನು ನೋಡಿ "ಯೆಹೋವನೇ ನಿಮಗಾಗಿ ಯುದ್ಧ ಮಾಡುವನು ನೀವಂತು ಸುಮ್ಮನೆ ಇರ್ರಿ" ಎಂದು ಹೇಳಿದನು (ವಿಮೋ 14:14) ಆ ಸಮಯದಲ್ಲಿ ಕರ್ತನೇ ಅವರ ಪರವಾಗಿ ನಿಂತು ಯುದ್ಧ ಮಾಡಲಾರಂಭಿಸಿದನು ಹೇಗೆ ಗೊತ್ತೇ ಹಿಂದಟ್ಟಿ ಬಂದ ಐಗುಪ್ತದ ರಥಗಳೆಲ್ಲಾ ಸಮುದ್ರದಲ್ಲಿ ಮುಳುಗಿ ಹೋದವು (ವಿಮೋ 14:26) ದಾವೀದನು ಗೊಲಿಯಾತನೊಂದಿಗೆ ಯುದ್ಧ ಮಾಡಿದಾಗ ಅವನು ತನ್ನ ಸ್ವಂತ ಬಲದ ಮೇಲೆ ಆತುಕೊಳ್ಳದೆ, ಕರ್ತನನ್ನೇ ಆಶ್ರಯಿಸಿಕೊಂಡು ಕರ್ತನ ಬಲದಿಂದ ಗೊಲಿಯಾತನನ್ನು ಫಿಲಿಷ್ಟಿಯರನ್ನು ಜಯಿಸಿದನು (1ಸಮು 17:45).

ದೇವಜನರೇ, ಜಯಕೊಡುವ ದೇವರನ್ನು ಯಾವಾಗಲೂ, ಆಶ್ರಯಿಸಿಕೊಂಡು, "ಕರ್ತನು ನನಗೆ ಜಯಕೊಡುವಾತನು ನನ್ನ ಯುದ್ಧಗಳನ್ನೆಲ್ಲಾ, ತನ್ನ ಯುದ್ಧವನ್ನಾಗಿಸಿಕೊಂಡು ಶತ್ರುವನ್ನು ಸದೆಬಡಿಯುವಾತನೇ ನಿನಗೆ ಸ್ತೋತ್ರ" ಎಂದು ಹೇಳಿರಿ, ಆಗ ಒಂದು ದಾರಿಯಿಂದ ಬಂದವರು, ಏಳುದಾರಿಗಳಲ್ಲಿ ನಿಮ್ಮನ್ನು ಬಿಟ್ಟು, ಓಡಿ ಹೋಗುವರು.

**ನೆನಪಿಗೆ: 'ಈ ಸಾರಿ ನೀವು ಯುದ್ಧ ಮಾಡುವದು ಅವಶ್ಯವಿಲ್ಲ ಯೆಹೂದ್ಯರೇ, ಯೆರೂಸಲೇಮಿನವರೇ, ಸುಮ್ಮನೆ ನಿಂತುಕೊಂಡು ಯೆಹೋವನು ನಿಮಗೋಸ್ಕರ ನಡಿಸುವ ರಕ್ಷಣಾ ಕಾರ್ಯವನ್ನು ನೋಡಿರಿ' (2ಪೂ.ವೃ 20:17)**

## ಮೇಲೆ ಎತ್ತುವ ಸಹಾಯಕ!

ಬೆಳಗ್ಗೆ : ನ್ಯಾಯ 11,12
ಸಂಜೆ : ಲೂಕ 6:1-26

**'ಒಬ್ಬನು ಬಿದ್ದರೆ ಇನ್ನೊಬ್ಬನು ಎತ್ತುವನು; ಬಿದ್ದಾಗ ಎತ್ತುವವನು ಇನ್ನೊಬ್ಬನಿಲ್ಲದಿದ್ದರೆ ಅವನ ಗತಿ ದುರ್ಗತಿಯೇ' (ಪ್ರಸಂಗಿ 4:10).**

ನಿಮ್ಮನ್ನು ಮೇಲಕ್ಕೆ ಎತ್ತುವ ಸಹಾಯಕನು ಯೇಸುಕ್ರಿಸ್ತನೇ ಆಗಿರುವನು, ಪಾಪದ ಕೆಸರಿನಿಂದ ಮೇಲೆತ್ತಿ ಪಾತಾಳದಿಂದ ಮೇಲೆತ್ತಿ ನಿಮ್ಮನ್ನು ಘನಪಡಿಸುವವನು ಆತನೊಬ್ಬನೇ. ರಕ್ಷಣೆ ಅಂದರೇನು? ನಿಮ್ಮನ್ನು ಪಾಪ ಸ್ವಭಾವಗಳಿಂದ ಅಕ್ರಮಗಳಿಂದ ಬಿಡಿಸಿ ಮೇಲಕ್ಕೆ ಎತ್ತುವದೇ ರಕ್ಷಣೆ ಯೇಸುಕ್ರಿಸ್ತನು ತನ್ನ ರಕ್ತದಿಂದ ನಿಮ್ಮನ್ನು ತೊಳೆದು ಶುದ್ಧೀಕರಿಸುವನು, ನಿಮ್ಮನ್ನು ಹಿಂಬಾಲಿಸಿ ಬಂದ ಎಲ್ಲಾ ಶಾಪಗಳನ್ನೂ, ಸೈತಾನನ ಕ್ರಿಯೆಗಳನ್ನೂ, ನೀಗಿಸಿ ಬಿಡುಗಡೆ ನೀಡುವನು ಶಿಲುಬೆಯಲ್ಲಿ ಒಬ್ಬ ಕಳ್ಳನು ತೂಗಾಡುತ್ತಿದ್ದನು "ಕರ್ತನೇ ನಿನ್ನ ರಾಜ್ಯದೊಂದಿಗೆ ಬರುವಾಗ, ನನ್ನನ್ನು ನೆನಪಿಸಿಕೋ" ಎಂದು ಪ್ರಾರ್ಥಿಸಿದನು. ಪಾತಾಳಕ್ಕೂ ಅಗ್ನಿಕಡಲಿಗೂ ಹೋಗಲಿದ್ದ ಅವನ ಆತ್ಮವನ್ನು ಕರ್ತನು ಹಾಗೆಯೇ ಮೇಲಕ್ಕೆ ಎತ್ತಿಕೊಂಡು ಹೋಗಿ ಪರಲೋಕಕ್ಕೆ ಸೇರಿಸಿದನು "ದೇವರೇ, ನೀನೇ ನನಗೆ ಸಹಾಯಕನೂ, ರಕ್ಷಕನೂ ಆಗಿದ್ದೀ" (ಕೀರ್ತ 40:17, 70:5) ಎಂದು ಅರಸನಾದ ದಾವೀದನು ಹೇಳಿದನು.

ಇಸ್ರಾಯೇಲ್ಯರು ನಾನ್ನೂರು ಮೂವತ್ತು ವರುಷಗಳು, ಐಗುಪ್ತ ದೇಶದಲ್ಲಿ ದಾಸರಾಗಿ ಕಷ್ಟಗಳನ್ನು ಅನುಭವಿಸಿದರು. ಫರೋಹನ ಕೈಗಳಿಂದ ನಮ್ಮನ್ನು ಬಿಡಿಸುವವರು ಯಾರು? ಎಂದು ಗೋಳಾಡಿದರು. ಕರ್ತನು ಅವರನ್ನು ಬಿಡಿಸಲು ಇಳಿದು ಬಂದನು ಯಾವಾಗ ಕುರಿಮರಿಯ ರಕ್ತವು ಇಸ್ರಾಯೇಲ್ಯರ ಮನೆಗಳ ಬಾಗಿಲಿನ ನಿಲುವು ಪಟ್ಟಿಗಳ ಮೇಲೆ ಹಚ್ಚಲ್ಪಟ್ಟಿತೋ, ಆಗಲೇ ಐಗುಪ್ತದ ದಾಸತ್ವದಿಂದ ಅವರಿಗೆ ಬಿಡುಗಡೆ ಉಂಟಾಯಿತು.

ದೇವಜನರೇ, ಇಂದು ನೀವು ಯಾವದೇ ಇಕ್ಕಟ್ಟಿನಲ್ಲಿದ್ದರೂ, ಕರ್ತನನ್ನೇ ದೃಷ್ಟಿಸಿರಿ, ಆತನು ಬೇಟೆಗಾರನ ಬಲೆಗೂ, ಭಯಂಕರವಾದ ವ್ಯಾಧಿಗಳಿಗೂ ನಿಮ್ಮನ್ನು ತಪ್ಪಿಸುವನು ಶತ್ರುಗಳ ಕೇಡಿನ ಆಲೋಚನೆಗಳಿಂದಲೂ, ದುಷ್ಟರ ಕ್ರಿಯೆಗಳಿಂದಲೂ, ಮಾಟಮಂತ್ರಗಳ ಶಕ್ತಿಗಳಿಂದಲೂ ಆತನು ನಿಮ್ಮನ್ನು ಬಿಡಿಸುವನು ಸತ್ಯವೇದ ಹೇಳುತ್ತದೆ ಮಗನು ನಿಮ್ಮನ್ನು ಬಿಡುಗಡೆ ಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು" (ಯೋಹಾ 8:36). "ಸತ್ಯವನ್ನು ತಿಳಿದುಕೊಳ್ಳುವಿರಿ ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು" (ಯೋಹಾ 8:32)."ಕರ್ತನು ದೇವರಾತ್ಮನೇ; ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು (2ಕೊರಿ 3:17).

**ನೆನಪಿಗೆ: 'ಕರ್ತನು ನನ್ನ ಬಳಿಯಲ್ಲಿ ನಿಂತು ನನ್ನನ್ನು ಬಲಪಡಿಸಿ ನನ್ನ ಮೂಲಕ ಸುವಾರ್ತೆಯು ಸಂಪೂರ್ಣವಾಗಿ ಸಾರಲ್ಪಡುವಂತೆಯೂ ಅನ್ಯ ಜನರೆಲ್ಲರೂ ಅದನ್ನು ಕೇಳುವಂತೆಯೂ ಮಾಡಿದನು; ಇದಲ್ಲದೆ ಆತನು ನನ್ನನ್ನು ಸಿಂಹದ ಬಾಯೊಳಗಿಂದ ತಪ್ಪಿಸಿದನು' (2ತಿಮೋ 4:17).**

## ಅಮೂಲ್ಯವಾದ ಸುವಾರ್ತ ಸಂದೇಶವಿರುವ ಕರಪತ್ರಗಳು

# ಕರಪತ್ರ ಸೇವೆಯನ್ನು ಪ್ರೋತ್ಸಾಹಿಸಿರಿ



**ಕರಪತ್ರ ಸೇವೆಯು ಸುಲಭವಾಗಿ ಜನರಿಗೆ ಸುವಾರ್ತೆಯನ್ನು ತಲುಪಿಸುವಂತಹ ಒಂದು ಪರಿಣಾಮಕಾರಿಯಾದ ಸೇವೆ. ಇವುಗಳನ್ನು ಆಸ್ಪತ್ರೆಗಳಲ್ಲಿ, ಬಂಧಿಖಾನೆಗಳಲ್ಲಿ ಮತ್ತು ಜನ ಸಂಧಣಿ ಇರುವ ಸ್ಥಳಗಳಲ್ಲಿ ವಿತರಿಸಿ ಕರ್ತನ ನಾಮವನ್ನು ಮಹಿಮೆಪಡಿಸುವ ಸಾಧನವಾಗಿದೆ.**

***ಈ ಕರಪತ್ರಗಳನ್ನು ಮುದ್ರಿಸಿ ಹೊರತರಲು ಬಹಳಷ್ಟು ಪರಿಶ್ರಮವಿದೆ.***

**ನೀವು ಈ ಸೇವೆಯನ್ನು ಪ್ರೀತಿಸಿ,**


**ಉದಾರವಾದ ಕಾಣಿಕೆಗಳನ್ನು ಕಳುಹಿಸಿ ಪ್ರೋತ್ಸಾಹಿಸಿರಿ**

ಇತರ ಅನೇಕ ಕರಪತ್ರಗಳು ಹೊರಬರಲು ಹಾಗೂ ಕರಪತ್ರಗಳನ್ನು ಪಡೆಯುವ ಪ್ರತಿಯೊಂದು ಆತ್ಮವು ಯೇಸುವಿನ ರಕ್ತದಿಂದ ಬರುವ ರಕ್ಷಣೆ, ಕಲ್ವಾರಿಯ ಪ್ರೀತಿ, ಸಮಾಧಾನವನ್ನು ಹೊಂದಿಕೊಳ್ಳಬೇಕೆಂದು ಪ್ರಾರ್ಥಿಸಿರಿ.

## ಶ್ರಮಾದಿನಗಳು ಮತ್ತು ಸಪ್ತ ವಾಕ್ಯಗಳು ಧ್ಯಾನಕ್ಕಾಗಿ

**ಯೇಸು ಕ್ರಿಸ್ತನು ನಮಗಾಗಿ ಕಲ್ವಾರಿ ಶಿಲುಬೆಯಲ್ಲಿ ಅನುಭವಿಸಿದ ಶ್ರಮಾ ದಿನಗಳಲ್ಲಿ ಧ್ಯಾನಿಸಲು ಉಪಯುಕ್ತವಾದ ಪುಸ್ತಕಗಳು ಮತ್ತು ಸಪ್ತ ವಾಕ್ಯಗಳ ಆಳವಾದ ರಹಸ್ಯಗಳನ್ನು ಒಳಗೊಂಡ ಪುಸ್ತಕಗಳು ನಮ್ಮಲ್ಲಿ ಲಭ್ಯವಿದೆ.**





**ಕಾಣಿಕೆ 30/–   ಕಾಣಿಕೆ 15/–   ಒಂದಕ್ಕೆ ರೂ 10/–   ಒಂದಕ್ಕೆ ರೂ 6/–**

**Postal Charges Rs. 50/-**

ಅನುದಿನದ ಆಹಾರ ಪುಸ್ತಕ ತಲುಪಿದಾಗ, ಕವರ್‌ನಲ್ಲಿ ಲಗತ್ತಿಸಿರುವ
ನಿಮ್ಮ ವಿಳಾಸದ ಮೇಲ್ಭಾಗದಲ್ಲಿರುವ ಸಂಖ್ಯೆಯೇ ನಿಮ್ಮ ID No.
ಈ ID No. ಸಂಖ್ಯೆಯನ್ನು ಗುರುತು ಮಾಡಿಟ್ಟುಕೊಳ್ಳಿ
ನೀವು MO ಕಳುಹಿಸುವಾಗ ತಪ್ಪದೆ ನಿಮ್ಮ ID No. ಸಂಖ್ಯೆಯನ್ನು
ತಿಳಿಸಿರಿ ಹಾಗೂ ಜೊತೆಗೆ ನಿಮ್ಮ ದೂರವಾಣಿ
ಸಂಖ್ಯೆಯನ್ನು (Phone Number) ಸಹ ತಿಳಿಸಿರಿ

**ದೇವರ ರಾಜ್ಯಕ್ಕಾಗಿ ನೆರವಿನ ಹಸ್ತವನ್ನು ನೀಡಿರಿ**
**ಪರಲೋಕದಿಂದ ನಿಮ್ಮಗೆ ವಿಶೇಷವಾದ ಆಶೀರ್ವಾದಗಳು**

**ಸತ್ಯವೇದದಲ್ಲಿ ಲೂಕ 6:38 ಬರೆದಿದೆ "ಕೊಡಿರಿ, ಆಗ ನಿಮಗೂ ಕೊಡುವರು ... ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು"**
ಈ ಉನ್ನತ ಸೇವೆಗಾಗಿ ನಿಮ್ಮ ಪ್ರಾರ್ಥನೆ ಹಾಗೂ ಉದಾರವಾದ ಕಾಣಿಕೆಗಳನ್ನು ಬಿತ್ತಿ ಕರ್ತನಿಂದ ನೂತನ ಆಶೀರ್ವಾದಗಳನ್ನು ಹೊಂದಿಕೊಳ್ಳಿರಿ.

**ಅನುದಿನದ ಆಹಾರ ಸೇವೆಗೆ ನೀವು ಚಂದಾ ಅಥವಾ ಕಾಣಿಕೆಯನ್ನು ಕಳುಹಿಸಲು ಬಯಸುವುದಾದರೆ, ಎಂ.ಓ (MO) ಅಥವಾ ಕೆಳಗೆ ನೀಡಿರುವ ಬ್ಯಾಂಕ್ (Bank) ಅಕೌಂಟಿಗೆ ಪಾವತಿ ಮಾಡಬಹುದು.**

**Account Name: ANUDHINADA AHARA**
**SBI Bank: 34706509264 IFSC Code: SBIN0005778**

ಅನುದಿನದ ಆಹಾರ ಸೇವೆಯ ಕುರಿತು ಹೆಚ್ಚಿನ ಮಾಹಿತಿ ಹಾಗೂ ಇನ್ನಿತರೆ ವಿಷಯಗಳನ್ನು ನಮ್ಮ ವೆಬ್‌ಸೈಟ್‌ನಲ್ಲಿ (website) ನೋಡಿ ತಿಳಿದುಕೊಳ್ಳಿರಿ

**www. anudhinadaahara.weebly.com**

*ವಿವರಗಳಿಗಾಗಿ ಸಂಪರ್ಕಿಸಿರಿ*
**Ph: 080 - 25712448 e-mail: goldenbibletext@gmail.com**

Registered News Paper. RNI No. KARKAN/2000/1321
Postal Registration No. KA/BGGPO/2530/2015-2017
Licenced to post Without Pre-Payment, WPP No. 72,
Posted on 23rd & 24th of Every Month
at Bangalore PSO, Mysore Road, Bangalore - 560026

ಸತ್ಯವೇದದ ಪವಿತ್ರ ದೇಶವಾದ ಇಸ್ರಾಯೇಲ್ ವೀಕ್ಷಿಸಲು ಬನ್ನಿರಿ

# ಪವಿತ್ರ ದೇಶದ ಪ್ರವಾಸ

## 2017 - ಏಪ್ರಿಲ್ 20 ರಿಂದ 29




ಕರ್ತನಾದ ಯೇಸು ಕ್ರಿಸ್ತನ ಪವಿತ್ರ ಪಾದಗಳು ನಡೆದಾಡಿದ
ಈ ಪುರಾತನ ಚರಿತ್ರಾರ್ಹ ಸ್ಥಳಗಳನ್ನು ಪ್ರಾರ್ಥನೆಯೊಂದಿಗೆ,
ಸತ್ಯವೇದಾಧ್ಯಯನದೊಂದಿಗೆ ಸಂದರ್ಶಿಸಲು...
ನಿಮಗೆ ಒಂದು ಸುಸಂದರ್ಭ



ಇಸ್ರಾಯೇಲ್ ಪಾಲೆಸ್ಟೈನ್
ಜೋರ್ಡಾನ್ ಐಗುಪ್ತ

**All Inclusive Package** Flight Ticket, Entrance Fees, Breakfast, Lunch, Dinner, Nile Cruise, Boat Ride, Superior Hotels, Professional Guide,










ಈ ಪ್ರವಾಸ ಸುಕ್ಷೇಮವಾಗಿ
ಕೂಡಿರಲೆಂದು ಪ್ರಾರ್ಥಿಸಿರಿ




**Anudhinada Ahara**
24th, 'F' Cross, Egipura, Bangalore - 560 047
Ph: 080 - 2571 2448, 9986 571 571, 9341 96 8008
*E-mail:* goldenbibletext@gmail.com

Published on 15th of Every Month
Owned, Edited & Published by : Selvin Christopher George
Published from : 24th 'F' Cross, Ejipura, Viveknagar, Bangalore - 560 047